ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 22 ಗುರುವಾರ 2026

ಸಂಪುಟ: 46 | ಸಂಚಿಕೆ: 274 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣ

ಮೈಸೂರು ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್ ಸೇರಿ ವಿಶೇಷ ತನಿಖಾ ತಂಡದ 30 ಮಂದಿಗೆ 25 ಲಕ್ಷ ನಗದು ಬಹುಮಾನ

ಅವರವರ ದರ್ಜೆಗೆ ಅನುಗುಣವಾಗಿ ಬಹುಮಾನದ ಹಣ ಹಂಚಿಕೆ



ಸೀಮಾ ಲಾಟ್ಕರ್ | ಜಿ.ಎಸ್.ಸ್ವರ್ಣ | ನಂದೀಶ್‌ಕುಮಾರ್ | ಮನೋಹರ | ರಂಗಸ್ವಾಮಿ | ಸಿಂಧು

ಮೈಸೂರು, ಜ.21(ಜಿಎ)–ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣದಲ್ಲಿ ಯಶಸ್ವಿ ತನಿಖಾ ಸಾಧನೆಗಾಗಿ ವಿಶೇಷ ತನಿಖಾ ತಂಡದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ರಾಜ್ಯ ಸರ್ಕಾರ 25 ಲಕ್ಷ ರೂ. ಬಹುಮಾನ ಘೋಷಿಸಿದ್ದು, ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೇರಿದಂತೆ ಆರು ಮಂದಿ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಸಿಬ್ಬಂದಿ ಈ ಬಹುಮಾನಕ್ಕೆ ಭಾಜನರಾಗಿದ್ದಾರೆ.

ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದಲ್ಲೇ ಸದ್ದು ಮಾಡಿದ್ದ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಮನೆಕೆಲಸದ ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ)ವನ್ನು ರಚಿಸಿತ್ತು.

30 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿ ಒಳಗೊಂಡ ತಂಡ, ಪ್ರಜ್ವಲ್ ರೇವಣ್ಣ ಅವರ ಬಂಧನದೊಂದಿಗೆ ಅತ್ಯಂತ ದಕ್ಷ ರೀತಿ ತನಿಖೆ ನಡೆದು, ಅವರಿಗೆ ಶಿಕ್ಷೆ ಆಗುವಲ್ಲಿನ ಯಶಸ್ವಿ ಕಾರ್ಯ ನಿರ್ವಹಣೆಗಾಗಿ ಸರ್ಕಾರದಿಂದ ಬಹುಮಾನ ಘೋಷಿಸಲಾಗಿದೆ.

ಎಸ್‌ಐಟಿಯಲ್ಲಿ ಮೈಸೂರು ಪೊಲೀಸರು : ಮೈಸೂರಿನ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಸ್‌ಐಟಿ ತಂಡ ತನಿಖೆಯ ಮೇಲು ಸ್ತುವಾರಿ ವಹಿಸಿದ್ದರು. ಆಲನಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಜಿ.ಎಸ್.ಸ್ವರ್ಣ ಪ್ರಕರಣದ ತನಿಖಾಧಿಕಾರಿ, ನಗರ ಸೆನ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಿ.ನಂದೀಶ್ ಕುಮಾರ್ ತನಿಖಾ ಕಾರ್ಯದಲ್ಲಿ ಸಹಕರಿಸಿದ್ದರು. ಹುಣಸೂರು ಟೌನ್ ಠಾಣೆಯ ಕಾನ್ಸ್‌ಸ್ಟೇಬಲ್ ಮನೋಹರ, ಜಿಲ್ಲಾ ಸೈಬರ್ ಕ್ರೈಂ ಕಾನ್ಸ್‌ಸ್ಟೇಬಲ್ ರಂಗಸ್ವಾಮಿ ತನಿಖಾ ಸಹಾಯಕರಾಗಿದ್ದರು.

ಜಿಲ್ಲಾ ಸೈಬರ್ ಕ್ರೈಂ ಮಹಿಳಾ ಕಾನ್ಸ್‌ಸ್ಟೇಬಲ್ ಸಿಂಧು ತನಿಖಾ ಕಾರ್ಯದಲ್ಲಿ ಸಹಕರಿಸಿದ್ದು, ಎಲ್ಲರಿಗೂ ದರ್ಜೆಗೆ ಅನುಗುಣವಾಗಿ ನಗದು ಬಹುಮಾನ ಘೋಷಣೆ ಮಾಡಲಾಗಿದೆ.

ಈ ಪ್ರಕರಣ ಇಡೀ ದೇಶದ ಗಮನ ಸೆಳೆದಿತ್ತು. ಕಾರಣ ಪ್ರಜ್ವಲ್ ರೇವಣ್ಣ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೊಮ್ಮಗ, ಚಿಕ್ಕಪ್ಪ ಹೆಚ್.ಡಿ.ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ, ತಂದೆ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಇಡೀ ಕುಟುಂಬವೇ ರಾಜಕೀಯ ಹಿನ್ನೆಲೆ ಒಳಗೊಂಡಿರುವ ಕುಟುಂಬವಾಗಿದ್ದರಿಂದ ಎಲ್ಲರಲ್ಲೂ ಕುತೂಹಲವಿತ್ತು.

ಪ್ರಕರಣ : 2024ರ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಹಾಸನದಿಂದ ಸ್ಪರ್ಧಿಸಿದ್ದರು. ಆಗ ಹಾಲಿ ಸಂಸದರು ಆಗಿದ್ದರು.

ಮತ ಚಲಾವಣೆಗೆ ಕೆಲವೇ ದಿನಗಳು ಬಾಕಿ ಇರುವಂತೆಯೇ ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪಗಳು ವ್ಯಾಪಕವಾಗಿ ಕೇಳಿ ಬಂದಿತು. ಇದಕ್ಕೆ ಪುಷ್ಠಿ ನೀಡುವಂತೆ, ಪ್ರಜ್ವಲ್ ರೇವಣ್ಣ ಲೈಂಗಿಕ ಪ್ರಕರಣದ ಪೆನ್ ಡ್ರೈವ್‌ಗಳ ಹಂಚಿಕೆಯಾಗಿ, ಸಾಕಷ್ಟು ಅಶ್ಲೀಲ ವೀಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದು ಭಾರೀ ಸುದ್ದಿಯಾಗುತ್ತಿದ್ದಂತೆ ಚುನಾವಣಾ ಬಳಿಕ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹಾರಿದ್ದು, ದೊಡ್ಡ ಅಚ್ಚರಿ ಹಾಗೂ ಅನುಮಾನಕ್ಕೆ ಕಾರಣವಾಯಿತು.

ಪ್ರಜ್ವಲ್ ರೇವಣ್ಣ ಒಳಗೊಂಡ ಹಲವಾರು ಅಶ್ಲೀಲ ವೀಡಿಯೊಗಳು ಪೆನ್‌ಡ್ರೈವ್‌ನಲ್ಲಿರುವುದು ಬೆಳಕಿಗೆ ಬಂದಿತ್ತು. ಇದನ್ನು ಸ್ವತಃ ಪ್ರಜ್ವಲ್ ರೇವಣ್ಣನ ಕಾರು ಚಾಲಕ ಬಟಾ ಬಯಲು ಮಾಡಿದ್ದ ಬಗ್ಗೆ ಸುದ್ದಿಯಾಯಿತು. ಈ ಕುರಿತಂತೆ ಒಂದಷ್ಟು ಮಾಧ್ಯಮಗಳಲ್ಲಿಯೂ ಬಹಿರಂಗ ಹೇಳಿಕೆ ನೀಡಿದ್ದರು.

ಚುನಾವಣೆ ಬಳಿಕ ವಿದೇಶದಲ್ಲಿ ಅಡಗಿದ್ದ ಪ್ರಜ್ವಲ್‌ಗೆ, ಲುಕ್‌ಔಟ್ ನೋಟಿಸ್ ಹೊರಡಿಸಲಾಗಿತ್ತು. ಇದರ ಬೆನ್ನಲ್ಲೇ ವಿದೇಶದಿಂದ ನೇರವಾಗಿ ಬೆಂಗಳೂರು ಏರ್‌ಪೋರ್ಟ್‌ಗೆ ಬಂದಿಳಿಯುತ್ತಿದ್ದಂತೆ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿ, ವಶಕ್ಕೆ ಪಡೆದಿದ್ದರು.

ಪ್ರಜ್ವಲ್ ವಿರುದ್ಧ ದಾಖಲಾಗಿರುವ ನಾಲ್ಕು ಕೇಸ್‌ಗಳ ಪೈಕಿ, ಮೈಸೂರು ಜಿಲ್ಲೆ ಕೆ.ಆರ್. ನಗರದ ಮಹಿಳೆಯ ಅಪಹರಣ ಮತ್ತು ಅತ್ಯಾಚಾರ ಕೇಸ್ ಪ್ರಮುಖವಾದುದು.

ಈ ಪ್ರಕರಣ ಪ್ರಜ್ವಲ್ ರೇವಣ್ಣ ಅಪರಾಧಿ ಜೀವನಪರ್ಯಂತ ಜೀವಾವಧಿ ಶಿಕ್ಷೆಗೆ ಗುರಿಯಾಗುವಂತಾಯಿತು. ಇನ್ನು ಕೆಲ ಪ್ರಕರಣಗಳು ವಿಚಾರಣಾ ಹಂತದಲ್ಲಿವೆ.


ಜನಪ್ರಿಯ ನಾಯಕ
ಸನ್ಮಾನ್ಯ ಶ್ರೀ ನಿಖಿಲ್ ಕುಮಾರಸ್ವಾಮಿ ರವರಿಗೆ
ಜನ್ಮದಿನದ ಶುಭಾಶಯಗಳು
VISMAYA
ADVERTISERS
8050302424

ನಕ್ಕರೆ ಅದೇ ಸ್ವರ್ಗ

ಗುಂಡ : ಐ ಲವ್ ಯೂ (ಹುಡುಗಿ ಜೋರಾಗಿ ಬೀ಼ಸಿ ಕೆನ್ನೆಗೆ ಬಿಟ್ಲು)
ಹುಡುಗಿ : ಎಲ್ಲಿ ಇನ್ನೊಮ್ಮೆ ಹೇಳು ನೋಡೋಣ?
(ಗುಂಡ ತಿರುಗಿ ಎರಡು ಬಿಟ್ಟ)
ಗುಂಡ : ಕೇಳಿಸಲಿಲ್ಲಾ ಅಂದ್ರ ಮತ್ಯಾಕ್ ಹೊಡದಿ...

ಮೈಸೂರು ಮಿತ್ರ

ಗುರುವಾರ, ಜನವರಿ 22, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಿನ್ನ ನೀ ಅರಿ, ನಿನ್ನಲ್ಲೇ ಅತ್ಯದ್ಭುತ ಶಕ್ತಿ, ಸಾಮರ್ಥ್ಯಗಳು ಅಡಗಿವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮರಿ ಮಾಡುವ ಮೊದಲೇ ಮೊಟ್ಟೆಗಳನ್ನು ಎಣಿಸಬೇಡ.

ನಿಮ್ಮ ಪತ್ರಗಳು

ಯಾರಿಗೆ ಹೇಳೋಣ ನಮ್ಮೀ ಪ್ರಾಬ್ಲಮ್ಮು

ಮಾನ್ಯರೆ,



ನಾವು ಮೈಸೂರು ನಗರದ ಸಿದ್ಧಾರ್ಥ ಬಡಾವಣೆ ಹಾಗೂ ಅಕ್ಕಪಕ್ಕದ ಬಡಾವಣೆಗಳ ಹಿರಿಯ ನಾಗರಿಕರು. ಬಹುತೇಕ ಎಲ್ಲರೂ ಜೀವನದ ಅಂತ್ಯ ಕಾಲದಲ್ಲಿ ಇದ್ದೇವೆ. ಇರುವಷ್ಟು ದಿನಗಳು ಮತ್ತೊಬ್ಬರಿಗೆ ಬಾರ ಆಗಬಾರದೆಂದು ಆರೋಗ್ಯವಾಗಿರಲು ನಿತ್ಯವೂ ಲಲಿತ ಮಹಲ್ ರಸ್ತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ತೀರಾ ಚಿಕ್ಕದಿರುವ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಎದುರು ಇರುವ ಪಾರ್ಕ್‌ಗೆ ಬೆಳಗ್ಗೆ ಮತ್ತು ಸಂಜೆ ಬರುತ್ತೇವೆ. ಪಾರ್ಕ್ ಸಮಗ್ರವಾದ ಅಭಿವೃದ್ಧಿ ಹಾಗೂ ಸಮರ್ಪಕವಾದ ನಿರ್ವಹಣೆ ಇಲ್ಲದೆ ವಾಯುವಿಹಾರಿಗಳಿಗೆ ಮತ್ತು ಪಕ್ಕದಲ್ಲೇ ಇರುವ ನಿವಾಸಿಗಳಿಗೆ ಬಹಳವೇ ತೊಂದರೆಯಾಗಿದೆ. ನಿರ್ವಹಣೆ ಇಲ್ಲದೆ ಮಲೀನಗೊಂಡಿರುವ ಪಾರ್ಕ್‌ನಿಂದಾಗಿ ವಾಯುವಿಹಾರಿಗಳಿಗೆ ಶುದ್ಧಗಾಳಿಯ ಬದಲಾಗಿ ಮಾಲಿನ್ಯವಾಗಿರುವ ಗಾಳಿಯನ್ನೇ ಸೇವಿಸುವಂತಾಗಿದೆ. ಈ ಪಾರ್ಕ್‌ಗಳಲ್ಲಿ ಹೆಚ್ಚಾಗಿ ವಯಸ್ಸು ಎಪ್ಪತ್ತು ದಾಟಿದ ವೃದ್ಧರು, ನಿವೃತ್ತ ಅಧಿಕಾರಿಗಳು ಹಾಗೂ ಮಹಿಳೆಯರು ಬರುತ್ತಾರೆ. ರಜಾ ದಿನಗಳಲ್ಲಿ ಮಕ್ಕಳು ಮತ್ತು ಪೋಷಕರಿಂದ ತುಂಬಿರುತ್ತದೆ. ನಿತ್ಯವೂ ವಾಯುವಿಹಾರಿಗಳು ಅನುಭವಿಸುತ್ತಿರುವ ತೊಂದರೆಗಳಿಂದಾಗಿ ವಾಯುವಿಹಾರಿಗಳೆಲ್ಲರೂ ಸೇರಿ ಜೈ ಶ್ರೀರಾಮ್ ಉದ್ಯಾನವನ ಅಭಿವೃದ್ಧಿ ಸಮಿತಿ ಎಂಬುದಾಗಿ ಸಂಘ ರಚಿಸಿಕೊಂಡು ನಾವುಗಳೇ ಉದ್ಯಾನವನದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಮೈಸೂರು ಮಹಾನಗರ ಪಾಲಿಕೆ ಇತ್ತ ಗಮನ ಹರಿಸಬೇಕಾಗಿದೆ.

ಉದ್ಯಾನವನದಲ್ಲಿ ಹಲವಾರು ಸಮಸ್ಯೆಗಳಿವೆ. ಸ್ಪೋರ್ಟ್ಸ್ ಕ್ಲಬ್ ಎದುರಿನ ಪಾರ್ಕ್‌ನಲ್ಲಿ ಮೂರು ದ್ವಾರಗಳ ಮೂಲಕ ವೃದ್ಧರು, ವಿಕಲಚೇತನರು ಹಾಗೂ ಮಕ್ಕಳು ಉದ್ಯಾನವನಕ್ಕೆ ಪ್ರವೇಶಿಸುವುದು ಬಹಳವೇ ಕಷ್ಟವಿದೆ. ಕಾರಣ ರಸ್ತೆಯ ಮಟ್ಟದಿಂದ ನಾಲ್ಕು ಅಡಿಗಿಂತಲೂ ಎತ್ತರ ಇರುವ ಮೆಟ್ಟಿಲುಗಳು ಕಿರಿದಾಗಿ ಮತ್ತು ಕಡಿದಾಗಿರುವುದರಿಂದ ಹಲವರು ಬಿದ್ದಿರುವ ಉದಾಹರಣೆಗಳು ಇವೆ. ಇದನ್ನು ವಿನ್ಯಾಸಕ್ಕೆ ಅನುಗುಣವಾಗಿ ಪುನರ್ ನಿರ್ಮಿಸಬೇಕಾಗಿದೆ. ಉದ್ಯಾನವನದಲ್ಲಿ ಯಥೇಚ್ಛವಾಗಿ ನೀರಿನ ಸೌಲಭ್ಯವಿದ್ದರೂ ಗಿಡಗಳಿಗೆ ನೀರುಣಿಸುತ್ತಿಲ್ಲ. ಇದರಿಂದ ಗಿಡಗಳು ಒಣಗಿವೆ. ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಿರುವ ಆವರಣವು ತೀರಾ ಹದಗೆಟ್ಟಿದ್ದು, ಮಕ್ಕಳು ಆಟವಾಡುವಾಗ ಕೈಕಾಲುಗಳಿಗೆ ಪೆಟ್ಟು ಮಾಡಿಕೊಳ್ಳುತ್ತಿದ್ದಾರೆ. ನಿರ್ಮಾಣದ ಹಂತದಲ್ಲಿ ತಳಕ್ಕೆ ಹಾಕಿದ್ದ ಮರಳು ಇಲ್ಲದಿರುವುದರಿಂದ ಮಕ್ಕಳಿಗೆ ಇಳಿಜಾರಿನ ಆಟಿಕೆಯಲ್ಲಿ ಜಾರುವುದು ಕಷ್ಟವಾಗಿದೆ. ಆಟಿಕೆ ಸಾಮಾನುಗಳನ್ನು ದುರಸ್ಥಿಗೊಳಿಸಿ ಒಂದು ಪದರ ದಪ್ಪವಾಗಿ ಮರಳನ್ನು ಹರಡುವುದು ಅವಶ್ಯಕವಾಗಿದೆ. ಸಮಸ್ಯೆಗಳನ್ನೇ ತುಂಬಿಕೊಂಡಿರುವ ಸಿದ್ಧಾರ್ಥ ಬಡಾವಣೆಯ ಪಾರ್ಕ್ ಎಂದು ಮುಕ್ತಿ ಕಾಣುವುದೋ?. ಹೇಳಿ.. ಹೇಳಿ.. ಸಾಕಾಗಿದೆ. ಯಾರಿಗೆ ಹೇಳೋಣ ನಮ್ಮಿ ಪ್ರಾಬ್ಲಮ್ಮು.

–ಹಿರಿಯ ನಾಗರೀಕರು, ಸಿದ್ಧಾರ್ಥ ಬಡಾವಣೆ, ಮೈಸೂರು

ಕೀಚಕಲೀಲೆ!

ಮಾನ್ಯರೆ,

ಡಿಜಿಪಿ ರಾಮಚಂದ್ರ ರಾವ್ ಅವರ ಕೀಚಕ ಲೀಲೆಯ ಸುದ್ದಿ ಓದಿದೊಡನೆ ರಾಮಾಯಣದ ಪ್ರಸಂಗವೊಂದು ನೆನಪಾಯಿತು.

ಸೀತಾಪಹರಣದ ಸಂದರ್ಭ. ರಾಮ ಸೇತುವೆ ನಿರ್ಮಾಣ ಮಾಡುತ್ತಿದ್ದಾಗ ಶ್ರೀರಾಮಚಂದ್ರನ ಕಾಲಕೆಳಗೊಂದು ಕಪ್ಪೆ ಸಿಲುಕಿ ನರಳುತ್ತಿತ್ತು. ಇದನ್ನು ಗಮನಿಸಿದ ಶ್ರೀರಾಮ ತನ್ನ ಕಾಲನ್ನು ಸರಕ್ಕೆಂದು ಎತ್ತಿ ಆ ಕಪ್ಪೆಯನ್ನು ಕೈಗೆತ್ತಿಕೊಂಡು ಪ್ರೀತಿಯಿಂದ ಕೇಳಿದ: 'ನನ್ನ ಕಾಲಕೆಳಗೆ ಸಿಲುಕಿದ್ದರೂ ನೋವು ಸಹಿಸಿಕೊಂಡು ನೀನೇಕೆ ಸುಮ್ಮನಿದ್ದೆ? ಕಾಲು ತೆಗೆಯೆಂದು ನೀನೇಕೆ ಕೂಗಿಕೊಳ್ಳಲಿಲ್ಲ?'

ಅದಕ್ಕೆ ಕಪ್ಪೆಯು ನೀಡಿದ ಉತ್ತರ ಮಾರ್ಮಿಕವಾಗಿತ್ತು: 'ಪ್ರಭೂ, ಬೇರೆ ಯಾರಾದರೂ ನನ್ನನ್ನು ತುಳಿದಿದ್ದರೆ ನಾನು ನಿನ್ನಲ್ಲಿ ಮೊರೆಯಿಡುತ್ತಿದ್ದೆ. ನೀನೇ ನನ್ನನ್ನು ತುಳಿದಿರುವಾಗ ನಾನು ಯಾರಲ್ಲಿ ಮೊರೆಯಿಡಲಿ?' ಕಿಡಿಗೇಡಿಗಳು ದೌರ್ಜನ್ಯ ಎಸಗಿದರೆ ಡಿಜಿಪಿ ರಾಮಚಂದ್ರ ರಾಯರಲ್ಲಿ ಮೊರೆಯಿಡಬಹುದು. ಡಿಜಿಪಿ ರಾಮಚಂದ್ರ ರಾಯರೇ ಕಿಡಿಗೇಡಿಯಾದರೆ ಯಾರಲ್ಲಿ ಮೊರೆಯಿಡುವುದು?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಮೈಸೂರಲ್ಲಿ ಕಾಲೇಜು ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಶ್ಲಾಘನೀಯ

ಮಾನ್ಯರೆ,

ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಮೈಸೂರಿನ ವಿಜಯನಗರದ ನಾಲ್ಕನೇ ಹಂತದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರಿಗೆ ಸ್ಥಳೀಯ ಶಾಸಕ ಜಿ.ಟಿ.ದೇವೇಗೌಡ ಅವರ ನೇತೃತ್ವದಲ್ಲಿ ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರೆ ಫೌಂಡೇಶನ್ ಸಹಯೋಗದಲ್ಲಿ ಪ್ರಾರಂಭ ಮಾಡಿರುವುದು ಶ್ಲಾಘನೀಯ ಕಾರ್ಯ. ಇದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಕಾಲೇಜಿಗೆ ಬರುವ ಹೆಣ್ಣು ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಗೆ ಯಾವುದೇ ರೀತಿಯ ಸೌಲಭ್ಯಗಳು ಇರುವುದಿಲ್ಲ. ಈ ಕಾರಣಕ್ಕಾಗಿಯೇ ಅನೇಕ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಪಿಯುಸಿ ನಂತರದ ಮುಂದಿನ ವಿದ್ಯಾಭ್ಯಾಸಕ್ಕೆ ಗುಡ್ ಬೈ ಹೇಳುತ್ತಾರೆ. ಈ ರೀತಿಯ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯಿಂದ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಅನುಕೂಲವಾಗುತ್ತದೆ. ಇಂತಹ ಜನಪರ ಯೋಜನೆಗಳು, ರಾಜ್ಯದ ಎಲ್ಲ ಸರ್ಕಾರಿ ಕಾಲೇಜುಗಳಲ್ಲಿ ಅನುಷ್ಠಾನಕ್ಕೆ ಬರಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕುಡಿಯುವ ನೀರಿನ ಪ್ಲಾಸ್ಟಿಕ್ ಸ್ಯಾಚೆಟ್ ನಿಷೇಧಿಸಿ

ಮಾನ್ಯರೆ,

ಪ್ಲಾಸ್ಟಿಕ್ ನೀರಿನ ಸ್ಯಾಚೆಟ್‌ಗಳ ಬಳಕೆ ಇಂದು ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದೆ. ಇವುಗಳಿಂದ ಬಿಡುಗಡೆಯಾಗುವ ಬಿಸ್ಫೀನಾಲ್‌ನಂತಹ ರಾಸಾಯನಿಕಗಳು ಹಾರ್ಮೋನ್ ವ್ಯತ್ಯಯ, ಬೊಜ್ಜು ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ಕಾರಣವಾಗುತ್ತಿವೆ. ವಿಶೇಷವಾಗಿ ಕೇವಲ ಎರಡು ರೂಪಾಯಿಗೆ ಸಿಗುವ ಕುಡಿಯುವ ನೀರಿನ 'ಪ್ಲಾಸ್ಟಿಕ್ ಸ್ಯಾಚೆಟ್‌ಗಳು' (ಪೌಚಸ್) ಅತ್ಯಂತ ಅಪಾಯಕಾರಿ. ಇವುಗಳ ಗುಣಮಟ್ಟದ ಮೇಲೆ ಯಾವುದೇ ನಿಯಂತ್ರಣವಿಲ್ಲ ಹಾಗೂ ಇವು ಮಣ್ಣನಲ್ಲಿ ಮಣ್ಣಾಗದೇ ಪರಿಸರಕ್ಕೆ ಮಾರಕವಾಗಿವೆ. ಅಗ್ಗದ ಬೆಲೆಗೆ ಸಿಗುವ ಈ ವಿಷಕಾರಿ ಸ್ಯಾಚೆಟ್‌ಗಳು ಮತ್ತು ಏಕಬಳಕೆಯ ಬಾಟಲಿಗಳನ್ನು ಸರ್ಕಾರ ತಕ್ಷಣ ನಿಷೇಧಿಸಬೇಕು. ಪರಿಸರ ಮತ್ತು ಜೀವ ಸಂಕುಲದ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ನೀರಿನ ಪೌಚಸ್ ನಿರ್ಬಂಧಿಸಬೇಕು.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಪ್ರಸಾದವೋ ಇಲ್ಲ ಪಾಷಾಣವೋ...!?



ನಮ್ಮ ಎಲ್ಲಾ ಸರ್ಕಾರಗಳಿಗೆ ಸಂಕ್ಷೇಪ ಪ್ರಿಯವಾದದ್ದು. ಈಗ ನಮ್ಮ ಕೇಂದ್ರ ಸರ್ಕಾರ ದೇವಸ್ಥಾನಗಳ ಅಭಿವೃದ್ಧಿ ಯೋಜನೆ ಸಂಬಂಧವಾಗಿ ಒಂದು ಅದ್ಭುತವಾದ ಸಂಕ್ಷೇಪವನ್ನು ನೀಡಿದೆ. ಅದು **'ಪ್ರಸಾದ'** (PRASAD-Piligrimage Rejuvenation And Spiritual Heritage Augmentation Drive). ಅರ್ಥಾತ್ 'ತೀರ್ಥಕ್ಷೇತ್ರ ಪುನರುಜ್ಜೀವನ ಹಾಗೂ ಆಧ್ಯಾತ್ಮಿಕ ಪರಂಪರೆಯ ವರ್ಧನೆ ಅಭಿಯಾನ'. ಇದೊಂದು ಮಹತ್ವದ ಯೋಜನೆ.

ಅಬ್ಬಾ! ಒಂದು ಶ್ಲೋಕವನ್ನೇ ಪಠಿಸಿದಂತಾಯ್ತಲ್ಲಾ?

ಧಾರ್ಮಿಕ ಸ್ಥಳಗಳ ಅಭಿವೃದ್ಧಿಗಾಗಿ ಇರುವ ಈ ಯೋಜನೆಯಡಿ ನಮ್ಮ ಮೈಸೂರಿನ ಚಾಮುಂಡಿಬೆಟ್ಟವನ್ನು ಅಭಿವೃದ್ಧಿಪಡಿಸುವ ಚಿಂತನೆ ಕೇಂದ್ರ ಸರಕಾರಕ್ಕೆ ಬಂದಿದೆ. ಅಭಿವೃದ್ಧಿ ಏನೋ ಒಳ್ಳೆಯದೇ. ಆದರೆ...

ಚಾಮುಂಡಿಬೆಟ್ಟ ಎಂಬ ವಾಕ್ಯದಲ್ಲೇ ಅಭಿವೃದ್ಧಿ ಎಂಬ ಪದ ಸೇರಿರುವುದನ್ನು ಕೇಳಿಬಿಟ್ಟರೆ ಸಾಕು, ನಮ್ಮ ಮೈಸೂರಿಗರು ಜಾಗೃತರಾಗಿಬಿಡುತ್ತಾರೆ, ಅದೂ ಒಳ್ಳೆಯ ಕಾರಣಕ್ಕೇ ಅನ್ನಿ.

ಈ ಹಿಂದಿನ ವರ್ಷಗಳಲ್ಲಿ ಅಭಿವೃದ್ಧಿ ಎನ್ನುವ ಹೆಸರಿನಲ್ಲಿ ಚಾಮುಂಡಿಬೆಟ್ಟದಲ್ಲಿ ಏನೇನಾಗಿದೆ ಎಂಬುದನ್ನು ಮೈಸೂರಿಗರು ಗಮನಿಸುತ್ತಲೇ ಬಂದಿದ್ದಾರೆ.

ನಿಧಾನವಾಗಿ ಕಾಂಕ್ರೀಟ್ ರಾಕ್ಷಸ, ಕಟ್ಟಡಗಳು ಮತ್ತು ಬೇಡದ 'ಅನುಕೂಲಗಳ' ಹೆಸರಲ್ಲಿ ಬೆಟ್ಟವನ್ನು ಆವರಿಸಿಕೊಂಡು ಅಲ್ಲಿನ ಹಸಿರನ್ನು ಸಾಕಷ್ಟು ಕಬಳಿಸಿದ್ದಾನೆ.

ಕಳೆದ ಕೆಲ ವರ್ಷಗಳಿಂದ ಪ್ರತಿಯೊಬ್ಬ ರಾಜಕಾರಣಿ ಚಾಮುಂಡಿಬೆಟ್ಟದ ಮೇಲೆ ಒಂದಿಲ್ಲೊಂದು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಉತ್ಸಾಹವನ್ನು ತೋರಿಸುತ್ತಾ, ನಾನಾ ಭರವಸೆಗಳನ್ನು ನೀಡುತ್ತಲೇ ಬಂದಿದ್ದಾರೆ. ಅದು ಜೇಂಟ್ ವ್ಹೀಲ್, ವ್ಯೂ ಪಾಯಿಂಟ್‌ಗೆ ರೋಪ್ ವೇ, ರಸ್ತೆ ಅಗಲೀಕರಣ ಆಗಿರಬಹುದು ಇಲ್ಲ ಎಸ್ಕಲೇಟರ್!

ಈಗ 'ಪ್ರಸಾದ' ಯೋಜನೆಯ ಆಗಮನದೊಂದಿಗೆ, ಚಾಮುಂಡಿಬೆಟ್ಟದಲ್ಲಿ ಅಭಿವೃದ್ಧಿ ಬೇಕೇ, ಬೇಡವೇ ಎಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

ಆದರೆ, ನಿಜವಾಗಿಯೂ ಚರ್ಚೆ ಆಗಬೇಕಾಗಿರುವುದು, ವೈಜ್ಞಾನಿಕ ಮತ್ತು ಅವೈಜ್ಞಾನಿಕ ರೀತಿಯ ಅಭಿವೃದ್ಧಿ ಬಗ್ಗೆ. ಅವಶ್ಯಕ ಸೌಲಭ್ಯಗಳು ಮತ್ತು ಅನಾವಶ್ಯಕ ಯೋಜನೆಗಳ ಯುಕ್ತಾಯುಕ್ತತೆಗಳ ಬಗ್ಗೆ.

2021ರಲ್ಲಿ ಮೊದಲ ಬಾರಿಗೆ 'ಪ್ರಸಾದ'ನ ಬಗ್ಗೆ ಕೇಳಿದಾಗ, ನನಗೆ ಇದು ದುಃಸಾಧ್ಯವಾದ ಮಹಾತ್ವಾಕಾಂಕ್ಷೆ ಎನಿಸಿತ್ತು. ಎಷ್ಟರಮಟ್ಟಿಗೆ ಎಂದರೆ ನನಗೆ ಅದರ ಮಹತ್ವಾಕಾಂಕ್ಷಿ ಅಭಿವೃದ್ಧಿಯ ನೀಲನಕ್ಷೆಯ ಪರಿಕಲ್ಪನೆಯೇ ಸುಸ್ತು ತಂದಿತ್ತು.

ಒಂದು ಸರ್ಕಾರಿ ಯೋಜನೆ ಅದೆಷ್ಟು ತರ್ಕರಹಿತವಾಗಿರಬಹುದು ಎನ್ನುವ ಅಂದಾಜು ನಿಮಗೂ ಬರಬೇಕು ಎಂದರೆ ಈ ಯೋಜನೆಯ ಬಗ್ಗೆ ನೀವೂ ತಿಳಿಯಬೇಕಿದೆ.

ಈ ಯೋಜನೆಯ ಪರಿಕಲ್ಪನೆ ಮೊದಲು ಹೊರಬಂದಾಗ, ಈಗಾಗಲೇ ದೇವಸ್ಥಾನದ ಹೊರಗೆ ಪೂಜಾಸಾಮಾಗ್ರಿಗಳನ್ನು ಮಾರುವ ಅಂಗಡಿಗಳಿರುವ ಕಡೆ, ಮುಖ್ಯ ದೇವಾಲಯದ ಪಕ್ಕಕ್ಕೆ 'ಮಹಾಬಲೇಶ್ವರ ಆವರಣ' ಅಭಿವೃದ್ಧಿಪಡಿಸುವ ಇರಾದೆ ಇತ್ತು.

ಹಾಗೆಯೇ, ಮುಖ್ಯ ದೇವಾಲಯದ ಸಮೀಪದಲ್ಲಿಯೇ ಇರುವ ನಾರಾಯಣ ದೇವಸ್ಥಾನಕ್ಕೆ ತಲುಪುವ ಮಾರ್ಗವನ್ನು ಅಭಿವೃದ್ಧಿಪಡಿಸಿ, 'ದಿಬ್ಬಣ'ದ ಮೆಟ್ಟಿಲುಗಳನ್ನು ದುರಸ್ತಿ ಮಾಡಿ, ಹಳೆಯ ಪಾರ್ಕಿಂಗ್ ಲಾಟ್‌ನಲ್ಲಿ 'ಭಜನಾ ಮಂದಿರ' ನಿರ್ಮಿಸುವ ಯೋಚನೆ ಇತ್ತು.

ಈಗಾಗಲೇ ಇರುವ ವಾಣಿಜ್ಯ ಮಳಿಗೆಗಳ ಸಂಕೀರ್ಣವನ್ನು ತೆರವುಗೊಳಿಸಿ, ಅಲ್ಲಿ 'ಪವಿತ್ರ ಸಂಕೀರ್ಣ'ವನ್ನು ನಿರ್ಮಿಸುವ ಪ್ರಸ್ತಾವನೆಯೂ ಇತ್ತು. **ದೇವರಾಣೆಗೂ ನನಗೆ ಬಿಡಿ**, ತಾಯಿ ಚಾಮುಂಡೇಶ್ವರಿಗೂ ಇದು ಈ ಪವಿತ್ರ ಸಂಕೀರ್ಣ ಏನೆಂದು ಅರ್ಥವಾಗಿರಲಿಕ್ಕಿಲ್ಲ.

ಇಷ್ಟಕ್ಕೇ ನಿಲ್ಲಲಿಲ್ಲ. ಮುಂದೆ ಕೇಳಿ? ಆ ಯೋಜನೆಯಲ್ಲಿ, ನಂದಿಯ ಬಳಿಯೂ ಅಭಿವೃದ್ಧಿ ಕಾರ್ಯ ನಡೆಯಬೇಕಿತ್ತು! ಅಲ್ಲದೆ ಬೆಟ್ಟದ ಮೆಟ್ಟಿಲುಗಳ ಉದ್ದಕ್ಕೂ ಅಲ್ಲಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ತಂಗುದಾಣಗಳು ಮತ್ತು ಬೆಟ್ಟ ಹತ್ತಲು ಸುಗಮವಾಗುವಂತೆ ರೇಲಿಂಗ್‌ಗಳನ್ನು ಕಲ್ಪಿಸುವ ಯೋಚನೆಯೂ ಇತ್ತು. ಜೊತೆಗೆ ದೇವಿಕೆರೆಯನ್ನು ಅಭಿವೃದ್ಧಿಗೊಳಿಸಿ ಅಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಬಟ್ಟೆ ಬದಲಿಸುವ ಕೊಠಡಿಗಳ ವ್ಯವಸ್ಥೆ ಮಾಡಬೇಕೆಂದಿದ್ದರು.

ಏಕೀಕೃತ ಟಿಕೆಟಿಂಗ್ ವ್ಯವಸ್ಥೆಯನ್ನು ಬೆಟ್ಟದ ಬುಡದಲ್ಲಿಯೇ ಕಲ್ಪಿಸಿ, ಎಲ್ಲೆಲ್ಲಿ ವಾಹನ ನಿಲುಗಡೆಗೆ ಅವಕಾಶ ಲಭ್ಯವಿದೆಯೋ ಅದನ್ನು ಬಳಸಿಕೊಂಡು ಅದಕ್ಕೆ 'ಸ್ಮಾರ್ಟ್ ಪಾರ್ಕಿಂಗ್' ಹೆಸರಿಡುವ ಯೋಜನೆಯೂ ಇತ್ತು.

ಎಷ್ಟೊಂದು ಸ್ಮಾರ್ಟ್ ಯೋಜನೆಗಳು! ಆದರೆ ಯಾರಿಗೂ, ಪ್ರಾಕೃತಿಕವಾಗಿ ಸೂಕ್ಷ್ಮ ಪ್ರದೇಶವಾದ ಚಾಮುಂಡಿಬೆಟ್ಟ ಈ ಮಹತ್ತರ ಅಭಿವೃದ್ಧಿಯ ಹೊಡೆತವನ್ನು ತಾಳಿಕೊಳ್ಳಬಹುದೆಂಬ ವಿಚಾರದ ವಿಮರ್ಶೆಯೇ ಬೇಡವಾಗಿತ್ತು ಅಥವಾ ಅದರ ಬಗ್ಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಅದನ್ನು 'ಸ್ಮಾರ್ಟ್' ಆಗಿಯೇ ಕಡೆಗಣಿಸಿದ್ದರು!

ಇಲ್ಲಿಗೇ ಮುಗಿಯಲಿಲ್ಲ, ಇನ್ನೂ ಕೇಳಿ, ಇಡೀ ಯೋಜನೆ ಬೆಟ್ಟವನ್ನೇ ಎರಡು ಭಾಗಗಳನ್ನಾಗಿ ವಿಭಜಿಸುವತ್ತ ಸಾಗಿತ್ತು!–ಹೊರ ಆವರಣ ಮತ್ತು ಒಳ ಆವರಣ!

ಹೊರ ಆವರಣದಲ್ಲಿ ವಿಶ್ರಾಂತಿ ಕೊಠಡಿ, ಮಹಿಳೆಯರು, ಮಕ್ಕಳು ಮತ್ತು ಹಿರಿಯರ ಆರೈಕೆ ಕೇಂದ್ರ, ವಾಹನ ಚಾಲಕರ ವಿಶ್ರಾಂತಿಗೆ ಅನುಕೂಲ ಕಲ್ಪಿಸುವ ವ್ಯವಸ್ಥೆ ಇದ್ದು, ಅಪಾಯ ಮುನ್ಸೂಚನೆಯ ಕೇಂದ್ರವನ್ನೂ ಸ್ಥಾಪಿಸಲಿದ್ದರು.

ಒಳಾವರಣದಲ್ಲಿ, ಅಂದರೆ ದೇವಸ್ಥಾನದ ಸುತ್ತಮುತ್ತ, ಲಾಕರ್ ವ್ಯವಸ್ಥೆ, ಧ್ಯಾನ ಕೇಂದ್ರ, ಶೌಚಾಲಯಗಳು, ಸೈಲೆಂಟ್ ಝೋನ್, ವಿಶ್ರಾಂತಿ ಕೊಠಡಿ... ಈ ಪಟ್ಟಿ ಮುಗಿಯುವುದಿಲ್ಲ ಬಿಡಿ!

ಇವೆಲ್ಲದರ ಜೊತೆಗೆ, ಏಕೀಕೃತ ತ್ಯಾಜ್ಯ ನಿರ್ವಹಣಾ ಮತ್ತು ವಿಲೇವಾರಿ ಘಟಕ, ಸ್ಮಾರ್ಟ್ ಕಸದ ಬುಟ್ಟಿಗಳು 'ಶೂನ್ಯ ತ್ಯಾಜ್ಯದ ದೇವಾಲಯ ಪ್ರಾಂಗಣ' ಗಮನ ಸೆಳೆಯುವಂತಿವೆ.

ಸೌರ ವಿದ್ಯುತ್ ದೀಪದ ವ್ಯವಸ್ಥೆ, ನೀರು ಪೂರೈಕೆ ಘಟಕ, ಐತಿಹಾಸಿಕ ಹಳೆಯ ಬಾವಿಗಳು ಮತ್ತು ಪುರಾತನ ಕಟ್ಟಡಗಳ ಜೀರ್ಣೋದ್ಧಾರ, ವ್ಯೂ ಪಾಯಿಂಟ್ ಸೌಂದರ್ಯೀಕರಣವೂ ಸೇರಿತ್ತು.

> **"ಚಾಮುಂಡಿಬೆಟ್ಟ ಕೇವಲ ಒಂದು ಪ್ರವಾಸಿ ತಾಣವೋ ಅಥವಾ ಎಲ್ಲೆಡೆ ಕಾಣಸಿಗುವಂತಹ ಯಾತ್ರಾಸ್ಥಳವೂ ಅಲ್ಲ. ಅದು ಮೈಸೂರಿನ ಆತ್ಮ. ಅದನ್ನು ಶುದ್ಧವಾಗಿ, ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು. ಕಾರಣ ಅದು ಮೈಸೂರಿನ ಅಸ್ಮಿತೆಯೂ ಹೌದು. ಪ್ರಸಾದ ಯೋಜನೆಯ ಅಭಿವೃದ್ಧಿ ಕಾಮಗಾರಿಗಳು ಚಾಮುಂಡಿಬೆಟ್ಟವನ್ನು ನಿರ್ಜೀವಗೊಳಿಸಲಿದೆಯೇ? ಎನ್ನುವ ಪ್ರಶ್ನೆಗೆ ಉತ್ತರ, ಅದು ಎಷ್ಟರಮಟ್ಟಿಗೆ ಮತ್ತು ಹೇಗೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ ಎನ್ನುವ ಆಧಾರದ ಮೇಲೆ ನಿಂತಿದೆ. ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತರಿಗೆ ಬೇಕಾಗಿರುವುದು ಮೂಲಸೌಕರ್ಯಗಳೇ ಹೊರತು, ಆಡಂಬರದ ಪ್ರಯೋಗಾತ್ಮಕ ತರಾವರಿಯ ಕಟ್ಟಡಗಳಲ್ಲ.**

ಹಾಗೆಯೇ ಸುಮ್ಮನೆ ಓದುತ್ತಾ ಹೋದರೆ, ಭಕ್ತಿ, ತಂತ್ರಜ್ಞಾನ ಮತ್ತು ಪ್ರಕೃತಿಯೆಡೆಗಿನ ಸೂಕ್ಷ್ಮ ಸಂವೇದನೆ ಮತ್ತು ಅರ್ಥೈಸಿಕೊಳ್ಳುವಿಕೆಯನ್ನು ಹದವಾಗಿ ಬೆರೆಸಿ ಸಿದ್ಧಪಡಿಸಿದ ಯೋಜನೆ ಎನಿಸದೇ ಇರುವುದಿಲ್ಲ.

ಆದರೆ ವಾಸ್ತವದ ನೆಲೆಗಟ್ಟಿನಲ್ಲಿ ನೋಡಿದರೆ, ಇದೊಂದು ಸುಂದರ ಕಾಲ್ಪನಿಕ ಕಾದಂಬರಿಯಂತಿತ್ತು.

ಉದಾಹರಣೆಗೆ ತೆಗೆದುಕೊಂಡರೆ, ಬೆಟ್ಟಕ್ಕೆ ಹೊಂದಿಕೊಂಡಂತೆ ಮೈಸೂರಿನ ಒಡೆಯರ್‌ಗಳ ಇತಿಹಾಸ ಕಥನ ಸಾರುವ 'ನಿರೂಪಣಾ ಕಟ್ಟಡ', ಅದರ ಜೊತೆಗೆ 'ಪರಿಸರ ಸಂರಕ್ಷಣಾಲಯ' ಹಾಗೂ ಸ್ಥಳೀಯವಾಗಿ ಬೆಳೆಯುವ ಮರಗಳನ್ನು ಪರಿಚಯಿಸಲು, 'ಲೈವ್ ಟ್ರೀ ಮ್ಯೂಸಿಯಮ್' ಅನ್ನು ಸ್ಥಾಪಿಸಬೇಕೆಂದಿದ್ದರು.

ನಗರದಲ್ಲಿ ಒಂದು ಉದ್ಯಾನವನದ್ದೋ ಇಲ್ಲವೇ ವಿಶ್ವವಿದ್ಯಾಲಯದ ಆವರಣದ ಪ್ಲಾನಿಂಗ್ ನಡೆಯುವಾಗ ಈ ರೀತಿಯ ನಿರ್ಮಾಣ ಪರಿಕಲ್ಪನೆ ಮಾಡಿಕೊಂಡರೆ ಅದಕ್ಕೆ ಒಂದು ಅರ್ಥವಿರುತ್ತದೆ. ಆದರೆ ಚಾಮುಂಡಿಬೆಟ್ಟದಂತಹ ಒಂದು ಧಾರ್ಮಿಕ ಕೇಂದ್ರದಲ್ಲಿ ಈ ರೀತಿಯ ಯೋಜನೆಗಳ ಅಗತ್ಯವಿದೆಯೇ? ಹೋಗಲಿ ಇದು ಸಾಧುವೇ?

ಜೊತೆಗೆ, ಸಹಜವಾಗಿಯೇ ಉದ್ಭವಿಸುವ ಒಂದು ಪ್ರಶ್ನೆ; ಇಷ್ಟೆಲ್ಲಾ ಯೋಜನೆಗಳಿಗೆ 40 ಕೋಟಿ ರೂಪಾಯಿಗಳು ಸಾಕಾಗುತ್ತದೆಯೇ? ಖಂಡಿತವಾಗಿ ಇಲ್ಲ!

ಇದೆಲ್ಲಾ ಹಳೆಯ ಸರ್ಕಾರಿ ಕಂಟ್ರಾಕ್ಟರ್‌ಗಳ ಟ್ರಿಕ್ ಅಷ್ಟೇ. ದುಬಾರಿಯ ಪ್ರಾಜೆಕ್ಟ್ ತೋರಿಸಿ, ಹಣ ಸ್ಯಾಂಕ್ಷನ್ ಮಾಡಿಸಿಕೊಂಡು, ಶೇ.20ರಷ್ಟು ಕಾಮಗಾರಿಯನ್ನು ಮಾಡಿ ಮುಗಿಸುವುದು!

ಆ ಶೇ.20ರಲ್ಲಿ ಶೌಚಾಲಯ, ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ, ತ್ಯಾಜ್ಯ ನಿರ್ವಹಣಾ ಘಟಕಗಳಂತಹ ಒಂದಷ್ಟು ಮೂಲಭೂತವೆನಿಸುವ ಸೌಲಭ್ಯಗಳು ಜನರ ಕಣ್ಣಿಗೆ ಬಿದ್ದರೆ ಸಾಕು, ಕೆಲಸವಾಗಿದೆ ಎಂದು ಜನ ಅಂದುಕೊಳ್ಳುತ್ತಾರೆ. ಅಲ್ಲಿಗೆ ಮುಗಿಯಿತು.

ಚಾಮುಂಡಿಬೆಟ್ಟ ಕೇವಲ ಒಂದು ಪ್ರವಾಸಿ ತಾಣವೋ ಅಥವಾ ಎಲ್ಲೆಡೆ ಕಾಣಸಿಗುವಂತಹ ಯಾತ್ರಾಸ್ಥಳವೂ ಅಲ್ಲ. ಅದು ಮೈಸೂರಿನ ಆತ್ಮ. ಅದನ್ನು ಶುದ್ಧವಾಗಿ, ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು. ಕಾರಣ ಅದು ಮೈಸೂರಿನ ಅಸ್ಮಿತೆಯೂ ಹೌದು.

ಪ್ರಸಾದ ಯೋಜನೆಯ ಅಭಿವೃದ್ಧಿ ಕಾಮಗಾರಿಗಳು ಚಾಮುಂಡಿಬೆಟ್ಟವನ್ನು ನಿರ್ಜೀವಗೊಳಿಸಲಿದೆಯೇ? ಎನ್ನುವ ಪ್ರಶ್ನೆಗೆ ಉತ್ತರ, ಅದು ಎಷ್ಟರಮಟ್ಟಿಗೆ ಮತ್ತು ಹೇಗೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ ಎನ್ನುವ ಆಧಾರದ ಮೇಲೆ ನಿಂತಿದೆ.

ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತರಿಗೆ ಬೇಕಾಗಿರುವುದು ಮೂಲ ಸೌಕರ್ಯಗಳೇ ಹೊರತು, ಆಡಂಬರದ ಪ್ರಯೋಗಾತ್ಮಕ ತರಾವರಿಯ ಕಟ್ಟಡಗಳಲ್ಲ.

ಸರ್ಕಾರ ಅದೇ 40 ಕೋಟಿ ರೂ.ಗಳನ್ನು ಬಳಸಿಕೊಂಡು ದೇವಾಲಯ ಸಂಕೀರ್ಣವನ್ನು ಸ್ವಚ್ಛ, ಇನ್ನು ವ್ಯವಸ್ಥಿತವಾಗಿ ರೂಪಿಸಬಹುದು. ಅಷ್ಟು ಸಾಕು. ಹೆಚ್ಚಿನ ಅವಶ್ಯಕತೆ ಇಲ್ಲ, ಇನ್ನು ಏನೂ ಬೇಕಾಗಿಯೂ ಇಲ್ಲ.

ಯೋಜನೆಯ ಅಗತ್ಯತೆಯನ್ನು ಮೈಸೂರಿಗರು ಪ್ರಶ್ನಿಸಲೇಬೇಕು. ವೈಜ್ಞಾನಿಕವಾದ, ಪ್ರಕೃತಿಗೆ ಹಾನಿಯಾಗದಂತಹ ಯೋಜನೆಗಳ ಜಾರಿಗೆ ಒತ್ತಾಯಿಸಬೇಕು. ಇಲ್ಲವಾದಲ್ಲಿ ಇದೇ **'ಪ್ರಸಾದ ಪಾಷಾಣ'**ವಾಗಿ ಪರಿಣಮಿಸಿ, ನಮ್ಮ ಬೆಟ್ಟವನ್ನು ಸಾಯಿಸಿಬಿಡುತ್ತದೆ. ಹಾಗೇನಾದರೂ ಆದಲ್ಲಿ ಅದಕ್ಕೆ ಮೈಸೂರಿಗರೇ ಹೊಣೆ.

Email: news@mysurumithra.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com




ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 22 ಗುರುವಾರ 2026



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 274 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದಿನಿಂದ ವಿಧಾನ ಮಂಡಲ ವಿಶೇಷ ಅಧಿವೇಶನ

ಗವರ್ನ್‌ಮೆಂಟ್ V/s ಗವರ್ನರ್

ತಮಿಳುನಾಡು, ಕೇರಳ ಬಳಿಕ ಕರ್ನಾಟಕ ವಿಧಾನಸಭೆ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲರ ನಿರಾಕರಣೆ





ಬೆಂಗಳೂರು: ಇತ್ತೀಚೆಗೆ ಕೇರಳ, ತಮಿಳುನಾಡಲ್ಲಿ ಅಲ್ಲಿನ ರಾಜ್ಯಪಾಲರು ವಿಧಾನಮಂಡಲ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ನಿರಾಕರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ಇದರ ಬೆನ್ನಲ್ಲೇ ಇದೀಗ ಕರ್ನಾಟಕ ವಿಧಾನಸಭೆ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರೂ ನಿರಾಕರಿಸಿದ್ದಾರೆ. ರಾಜ್ಯಪಾಲರು ಭಾಷಣ ಮಾಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ರಾಜಭವನದ ನಡುವೆ ಜಟಾಪಟಿ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ನೇತೃತ್ವದ ಉನ್ನತ ಮಟ್ಟದ ನಿಯೋಗವು ಇಂದು ಸಂಜೆ ಲೋಕಭವನಕ್ಕೆ ಭೇಟಿ ನೀಡಿ, ರಾಜ್ಯಪಾಲರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚೆ ನಡೆಸಿತು. ಆದರೆ ರಾಜ್ಯಪಾಲರು ಭಾಷಣದ ಪ್ರತಿ ಬಗ್ಗೆ ಆಕ್ಷೇಪಿಸಿ, ಅದರಲ್ಲಿನ ಆಕ್ಷೇಪಾರ್ಹ ಹಲವು ವಿಷಯಗಳನ್ನು ಒಳಗೊಂಡ 11 ಪ್ಯಾರಾಗಳ ಕೈಬಿಡುವಂತೆ ಪಟ್ಟು ಹಿಡಿದಿದ್ದಾರೆ.


ಸಿದ್ದರಾಮಯ್ಯ

ನಾಳೆಯಿಂದ ಜ.31ರವರೆಗೆ ವಿಧಾನ ಸಭೆ ಜಂಟಿ ಅಧಿವೇಶನ ನಡೆಯಲಿದ್ದು ರಾಜ್ಯಪಾಲರ ಈ ನಡೆ ಬಹಳ ಕುತೂಹಲ ಮೂಡಿಸಿದೆ. ಕೇಂದ್ರವು ಮಹಾತ್ಮಗಾಂಧಿ ನರೇಗಾ ಹೆಸರನ್ನು 'ರದ್ದುಗೊಳಿಸುವುದು' ಸೇರಿದಂತೆ ಹಲವಾರು ವಿಷಯಗಳ ಕುರಿತು ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ–ಜೆಡಿ(ಎಸ್) ಒಕ್ಕೂಟದ ನಡುವೆ ಘರ್ಷಣೆ ನಿರೀಕ್ಷಿಸಲಾಗಿದೆ.

ಯುಪಿಎ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಎಂಜಿಎನ್‌ಆರ್‌ಇಜಿಎ) ಯನ್ನು ರದ್ದುಗೊಳಿಸಿದ್ದ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಕಾಯ್ದೆಯಾಗಿ ಬದಲಾಯಿಸಿದ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ರಾಜ್ಯ ಕಾಂಗ್ರೆಸ್ ನಿರ್ಣಯ ಅಂಗೀಕರಿಸಿತ್ತು. ಎಂಜಿಎನ್‌ಆರ್‌ಇಜಿಎ ಬದಲಿಗೆ ಇತ್ತೀಚೆಗೆ ಜಾರಿಗೆ ತಂದ ವಿಬಿ–ಜಿ ರಾಮ್ ಜಿ ಕಾಯ್ದೆಯನ್ನು ಅಂಗೀಕರಿಸದಿರಲು ಮತ್ತು ಅದರ ವಿರುದ್ಧ ಕಾನೂನು ಹೋರಾಟವನ್ನು ಕೈಗೊಳ್ಳಲು ಕರ್ನಾಟಕ ಸಚಿವ ಸಂಪುಟ ನಿರ್ಧರಿಸಿದೆ. ಹೀಗಾಗಿ ಕೇಂದ್ರಕ್ಕೆ ಮುಜುಗರ ತರುವ ಅಂಶಗಳು ರಾಜ್ಯಪಾಲರ ಭಾಷಣದಲ್ಲಿರುವುದರಿಂದ ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡದಿರಲು ನಿರ್ಧರಿಸಿದ್ದಾರೆ.


ಥಾವರ್‌ಚಂದ್ ಗೆಹ್ಲೋಟ್

ಒಂದು ವೇಳೆ ಜಂಟಿ ಅಧಿವೇಶನಕ್ಕೆ ರಾಜ್ಯಪಾಲರು ಬಾರದಿದ್ದರೆ ಸಾಂವಿಧಾನಿಕ ಬಿಕ್ಕಟ್ಟು ಎದುರಾಗುವ ಸಾಧ್ಯತೆಯಿದೆ. ವರ್ಷದ ಮೊದಲ ಅಧಿವೇಶನವನ್ನು ರಾಜ್ಯಪಾಲರ ಭಾಷಣದೊಂದಿಗೆ ಆರಂಭಿಸಬೇಕು ಎಂಬ ನಿಯಮವಿದೆ. ಜನವರಿ 22ರಂದು ಬೆಳಿಗ್ಗೆ 11 ಗಂಟೆಗೆ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಬೇಕಿದೆ.

ಸರ್ಕಾರ ಸುಪ್ರೀಂಕೋರ್ಟ್ ಮೊರೆ!

ಬೆಂಗಳೂರು, ಜ. 21– ನಾಳೆ (ಜ. 22) ವಿಧಾನ ಮಂಡಲ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಬಾರದೇ ಇದ್ದಲ್ಲಿ ಸುಪ್ರೀಂಕೋರ್ಟ್ ಮೊರೆ ಹೋಗಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇಂದು ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಅಧಿಕೃತ ನಿವಾಸದಲ್ಲಿ ಕಾನೂನು ತಜ್ಞರೊಂದಿಗೆ ಸಭೆ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ.

ರಾಜ್ಯಪಾಲರು ಸಾಂವಿಧಾನಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಒಂದು ವೇಳೆ ಅವರು ಅದನ್ನು ನಿರ್ವಹಿಸದೇ ಇದ್ದಲ್ಲಿ ಅನಿವಾರ್ಯವಾಗಿ ಕಾನೂನು ಮೊರೆ ಹೋಗುವ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿರುವ ಭಾಷಣದಲ್ಲಿನ 11 ಪ್ಯಾರಾಗಳನ್ನು ತೆಗೆಯುವಂತೆ ಪಟ್ಟು ಹಿಡಿದಿದ್ದಾರೆ. ಆದರೆ ಸರ್ಕಾರ ಅದಕ್ಕೆ ಒಪ್ಪದೆ ಕೇವಲ 2 ಪದಗಳನ್ನಷ್ಟೇ ಕೈಬಿಟ್ಟಿದೆ. ಇದಕ್ಕೆ ರಾಜ್ಯಪಾಲರು ಸಮ್ಮತಿಸಿಲ್ಲ.


ಇಷ್ಟಾದರೂ ನಾಳೆ ಬೆಳಗ್ಗೆ 11.15ರವರೆಗೆ ರಾಜ್ಯಪಾಲರಿಗೆ ಸಮಯಾವಕಾಶ ಕಲ್ಪಿಸಲಾಗಿದೆ. ಅಷ್ಟರೊಳಗೆ ಅವರು ಅಧಿವೇಶನಕ್ಕೆ ಹಾಜರಾಗದಿದ್ದಲ್ಲಿ ಸುಪ್ರೀಂಕೋರ್ಟ್ ಮೊರೆ ಹೋಗಲು ತೀರ್ಮಾನಿಸಿರುವ ಸರ್ಕಾರ, ಈಗಾಗಲೇ ರಾಜ್ಯ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿಯವರನ್ನು ವಿಶೇಷ ವಿಮಾನದಲ್ಲಿ ದೆಹಲಿಗೆ ಕಳುಹಿಸಿಕೊಟ್ಟಿದೆ. ಅವರು ನಾಳೆ ಬೆಳಗ್ಗೆಯೇ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಪೀಠಕ್ಕೆ ಅರ್ಜಿ ಸಲ್ಲಿಸಿ ತತ್‌ಕ್ಷಣ ವಿಚಾರಣೆಯನ್ನು ಕೈಗೆತ್ತಿಕೊಳ್ಳುವಂತೆ ಮನವಿ ಮಾಡಿಕೊಳ್ಳಲು ಕಾನೂನು ತಜ್ಞರೊಂದಿಗೆ ಚರ್ಚಿಸಲಾಗಿದೆ.

ಈ ಮಧ್ಯೆ ರಾಜ್ಯಪಾಲರೂ ಸಹ ಕಾನೂನು ತಜ್ಞರ ಸಲಹೆ ಪಡೆಯಲು ನಿರ್ಧರಿಸಿದ್ದು, ವಿಷಯ ಅತ್ಯಂತ ಜಟಿಲ ಸ್ಥಿತಿಯತ್ತ ಸಾಗಿದೆ.

ಜ.24ಕ್ಕೆ ಹಾಸನದಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನ

■ ಸಿದ್ದರಾಮಯ್ಯ ಸರ್ಕಾರದ ವೈಫಲ್ಯದ ವಿರುದ್ಧ; ಪಕ್ಷ ಬಲಪಡಿಸುವ ಉದ್ದೇಶ ■ 3ರಿಂದ 5 ಲಕ್ಷ ಕಾರ್ಯಕರ್ತರ ಸೇರಿಸುವ ಮೂಲಕ ಪಕ್ಷದ ಬೆಳ್ಳಿಹಬ್ಬ ಆಚರಣೆಯೊಂದಿಗೆ ಹೊಸ ರಾಜಕೀಯ ಸಂದೇಶ

ಹಾಸನ, ಜ.21– ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ವೈಫಲ್ಯದ ವಿರುದ್ಧ ಹಾಗೂ ಪಕ್ಷ ಸಂಘಟನೆ ದೃಷ್ಟಿಯಿಂದ ಜಾತ್ಯತೀತ ಜನತಾ ದಳ (ಜೆಡಿಎಸ್) ಹಾಸನದಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶ ಹಮ್ಮಿಕೊಂಡಿದೆ. ಈ ಸಂಬಂಧ ಇಂದು ಕೇಂದ್ರ ಸಚಿವರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಹಾಸನದಲ್ಲಿಂದು ಪೂರ್ವಭಾವಿ ಸಭೆ ನಡೆಯಿತು.


ಹಾಸನದಲ್ಲಿ ಶನಿವಾರ ನಡೆಯಲಿರುವ ಜೆಡಿಎಸ್ ಜನತಾ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮಾಜಿ ಸಚಿವರಾದ ಹೆಚ್.ಡಿ. ರೇವಣ್ಣ, ಸಾರಾ ಮಹೇಶ್ ಇತರರಿದ್ದಾರೆ.

ಪಕ್ಷಕ್ಕೆ 25 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬ ಆಚರಣೆ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮ ಇದು. ಜನವರಿ 24ರಂದು ನಡೆಯಲಿರುವ ಬೃಹತ್ ಸಮಾವೇಶವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಸುಮಾರು 4ರಿಂದ 5 ಲಕ್ಷ ಕಾರ್ಯಕರ್ತರನ್ನು ಸೇರಿಸುವ ಮೂಲಕ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅವರಿಗೆ ತಮ್ಮ ಬಲ ತೋರಿಸಲು ಪಕ್ಷ ಮುಂದಾಗಿದೆ. ಮಾಜಿ ಸಂಸದ ಪ್ರಜ್ವಲ್ ರೇವಣ್ಣ ▶ 10ನೇ ಪುಟಕ್ಕೆ

ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಪಾದಯಾತ್ರಿಕರ ಮೇಲೆ ಚಿರತೆ ದಾಳಿ; ಮಾದಪ್ಪನ ಓರ್ವ ಭಕ್ತ ಬಲಿ

ಹನೂರು, ಜ.21– ರಾಜ್ಯದ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿದ್ದ ಮಾದಪ್ಪನ ಭಕ್ತರ ಮೇಲೆ ಚಿರತೆ ದಾಳಿ ನಡೆಸಿ, ಒಬ್ಬರ ಕೊಂದು ಹಾಕಿರುವ ಘಟನೆ ಬುಧ ವಾರ ಬೆಳಗ್ಗೆ ಬೆಟ್ಟದ ತಪ್ಪಲಿನ ತಾಳು ಬೆಟ್ಟದಲ್ಲಿ ನಡೆದಿದೆ. ಮಂಡ್ಯ ಜಿಲ್ಲೆ ಚೀರನಹಳ್ಳಿ ಗ್ರಾಮದ ನಿವಾಸಿ ಪ್ರವೀಣ್ (30) ಚಿರತೆಗೆ ಬಲಿಯಾದ ಯುವಕ.



ವಿವರ: ತಾಲೂಕಿನ ಮಲೆಮಹದೇಶ್ವರ ಬೆಟ್ಟಕ್ಕೆ ಸಂಪ್ರದಾಯದಂತೆ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಹಾಗೂ ಸುತ್ತಮುತ್ತಲು ಗ್ರಾಮಗಳಿಂದ ನೂರಾರು ಭಕ್ತರು ಪಾದಯಾತ್ರೆ ಕೈಗೊಂಡಿದ್ದರು. ಮಂಗಳವಾರ ರಾತ್ರಿ ತಾಳುಬೆಟ್ಟದಲ್ಲಿ ವಾಸ್ತವ್ಯ ಹೂಡಿದ್ದ ಇವರು, ಬುಧವಾರ ಮುಂಜಾನೆ ತಂಡೋಪತಂಡವಾಗಿ ಮಲೆಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆ ಹಾದಿಯಲ್ಲಿ ಪಾದಯಾತ್ರೆ ಮುಂದುವರೆಸಿದ್ದರು. ಈ ವೇಳೆ ಪ್ರವೀಣ್ ಸ್ನೇಹಿತರೊಂದಿಗೆ ರಂಗಸ್ವಾಮಿ ವಡ್ಡಿನ ಬಳಿ ತೆರಳುತ್ತಿದ್ದಾಗ ಚಿರತೆ ▶ 10ನೇ ಪುಟಕ್ಕೆ

ಮಹದೇಶ್ವರಬೆಟ್ಟ ಪಾದಯಾತ್ರೆಗೆ ತಾತ್ಕಾಲಿಕ ತಡೆ; ಬೈಕ್ ಸಂಚಾರಕ್ಕೂ ನಿರ್ಬಂಧ

ಹನೂರು, ಜ.21– ಪಾದಯಾತ್ರಿಗಳ ಮೇಲೆ ಚಿರತೆ ದಾಳಿ ನಡೆಸಿ ಒಬ್ಬರ ಕೊಂದು ಹಾಕಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ 4 ದಿನಗಳ ಕಾಲ ಬೆಟ್ಟಕ್ಕೆ ಭಕ್ತರ ಪಾದಯಾತ್ರೆಗೆ ತಡೆ ನೀಡಲಾಗಿದೆ. ಅಲ್ಲದೆ ಬೈಕ್‌ನಲ್ಲಿ ಯಾರೂ ತೆರಳಬಾರದು ಎಂದು ನಿರ್ಬಂಧ ವಿಧಿಸಿ ಅಪರ ಜಿಲ್ಲಾಧಿಕಾರಿ ಟಿ.ಜವರೇಗೌಡ ಆದೇಶ ಹೊರಡಿಸಿದ್ದಾರೆ. ತಾಳುಬೆಟ್ಟದಿಂದ ಮಹದೇಶ್ವರಬೆಟ್ಟಕ್ಕೆ ಹೋಗುವ ಮೆಟ್ಟಿಲು ಹಾದಿಯ ರಂಗಸ್ವಾಮಿ ಒಡ್ಡುವಿನ ಬಳಿ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಗ್ರಾಮದ ಪ್ರವೀಣ್ ಮೇಲೆ ಚಿರತೆ ಏಕಾಏಕಿ ದಾಳಿ ▶ 10ನೇ ಪುಟಕ್ಕೆ

ರಾಜ್ಯಪಾಲರು ಕಾಂಗ್ರೆಸ್ ಪಕ್ಷದ ವಕ್ತಾರರಲ್ಲ

ಬೆಂಗಳೂರು, ಜ.21– ಅಭಿವೃದ್ಧಿ ಶೂನ್ಯ ಆಡಳಿತ, ಸಾಲು ಸಾಲು ಭ್ರಷ್ಟಾಚಾರ ಹಗರಣಗಳು ಹಾಗೂ ಆಡಳಿತಾತ್ಮಕ ವೈಫಲ್ಯವನ್ನು ಮರೆಮಾಚಲು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಭಾಷಣವನ್ನು ರಾಜಕೀಯ ಅಸ್ತ್ರವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬುಧವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಅವರು, ರಾಜ್ಯಪಾಲರು ಕಾಂಗ್ರೆಸ್ ಸರ್ಕಾರದ ವಕ್ತಾರರಲ್ಲ; ಅವರು ಸಂವಿಧಾನದ ರಕ್ಷಕರು. ಅವರ ಘನತೆಗೆ ಧಕ್ಕೆ ತರುವ ಮೂಲಕ ಕಾಂಗ್ರೆಸ್ ಸರ್ಕಾರ ಸಂವಿಧಾನ ಮತ್ತು ಫೆಡರಲ್ ವ್ಯವಸ್ಥೆಯ ಮೇಲೆ ನೇರ ದಾಳಿ ನಡೆಸುತ್ತಿದೆ ಎಂದು ಹೇಳಿದರು.



ಸರ್ಕಾರದ ಪತ್ರಕ್ಕೆ ರಾಜ್ಯಪಾಲರು ಯಾಂತ್ರಿಕವಾಗಿ ಬದ್ಧರಾಗಬೇಕಿಲ್ಲ. ಭಾರತದ ಸಂವಿಧಾನದ ವಿಧಿ 175 ಮತ್ತು 176ರ ಅಡಿಯಲ್ಲಿ ರಾಜ್ಯಪಾಲರಿಗೆ ವಿಧಾನಸಭೆ ಮತ್ತು ವಿಧಾನಪರಿಷತ್ತನ್ನು ಉದ್ದೇಶಿಸಿ ಭಾಷಣ ಮಾಡುವ ಸ್ಪಷ್ಟ ಅಧಿಕಾರವಿದೆ. ಆದರೆ ಸರ್ಕಾರ ತಯಾರಿಸಿದ ಪತ್ರದಲ್ಲಿರುವ ಪ್ರತಿಯೊಂದು ಪದವನ್ನೂ ರಾಜ್ಯಪಾಲರು ಕಡ್ಡಾಯವಾಗಿ ಓದಲೇಬೇಕು ಎಂಬ ನಿಯಮ ಸಂವಿಧಾನದಲ್ಲಿಯೂ ಇಲ್ಲ, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ನಿಯಮಗಳಲ್ಲಿಯೂ ಇಲ್ಲ ಎಂದು ಅಶೋಕ್ ಸ್ಪಷ್ಟಪಡಿಸಿದರು.

ಸಂವಿಧಾನದ ವಿಧಿ 163ರ ಪ್ರಕಾರ ರಾಜ್ಯಪಾಲರು ಸಾಮಾನ್ಯವಾಗಿ ಸಚಿವ ಸಂಪುಟದ ಸಲಹೆಯಂತೆ ಕಾರ್ಯನಿರ್ವಹಿಸಬೇಕಾದರೂ, ಅವರಿಗೆ ನಿರ್ದಿಷ್ಟ ▶ 10ನೇ ಪುಟಕ್ಕೆ

ಡಿಜಿಪಿ ಡಾ.ರಾಮಚಂದ್ರರಾವ್ ಪ್ರಕರಣ

ಐಪಿಎಸ್ V/s ಐಪಿಎಸ್

ಮತ್ತೋರ್ವ ಹಿರಿಯ ಐಪಿಎಸ್ ಅಧಿಕಾರಿಯಿಂದ 9 ಕೋಟಿ ಹಣ ದುರುಪಯೋಗ ಪ್ರಕರಣದೊಂದಿಗೆ ಡಿಜಿಪಿ ರಾಸಲೀಲೆ ವಿಡಿಯೋ ವೈರಲ್ ಲಿಂಕ್!?

ಮೈಸೂರು, ಜ.21(ಆರ್‌ಕೆ)– ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಡಿಸಿಆರ್‌ಇ)ದ ಪೊಲೀಸ್ ಮಹಾ ನಿರ್ದೇಶಕರಾದ, 1993ರ ತಂಡದ ಐಪಿಎಸ್ ಅಧಿಕಾರಿ ಡಾ. ಕೆ. ರಾಮಚಂದ್ರ ರಾವ್ ಅವರು ತಮ್ಮ ಅಧಿಕೃತ ಕಚೇರಿ ಕೊಠಡಿಯಲ್ಲೇ, ಅದೂ ಪೊಲೀಸ್ ಸಮವಸ್ತ್ರದಲ್ಲೇ ಮಹಿಳೆಯೊಂದಿಗೆ ಸರಸ–ಸಲ್ಲಾಪದಲ್ಲಿ ತೊಡಗಿರುವ ದೃಶ್ಯ ಸಾಮಾಜಿಕ ಮಧ್ಯಮಗಳಲ್ಲಿ ವೈರಲ್ ಆಗಿದೆ.

ಇದನ್ನು ಡಾ. ರಾಮಚಂದ್ರರಾವ್ ನಿರಾಕರಿಸಿದ್ದು, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ರೂಪಿಸಿ, ಹರಿಬಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ವೈರಲ್ ಆಗಿರುವ ವಿಡಿಯೋಗಳ ಬಗ್ಗೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾದ ನಂತರ ಡಾ. ರಾಮಚಂದ್ರರಾವ್ ಅವರನ್ನು ಅಮಾನತುಗೊಳಿಸಿ, ಸಮಗ್ರ ತನಿಖೆಗೆ ಸರ್ಕಾರ ಆದೇಶಿಸಿದೆ.


ಡಾ.ರಾಮಚಂದ್ರರಾವ್, ಐಪಿಎಸ್


?????, ಐಪಿಎಸ್

ವೀಡಿಯೊಗಳ ಸತ್ಯಾಸತ್ಯತೆ ಮತ್ತು ಈ ಹಿರಿಯ ಐಪಿಎಸ್ ಅಧಿಕಾರಿಯ ತನಿಖೆ ಆರಂಭವಾಗುವ ಮೊದಲೇ ಒಂದು ಕಾಲದಲ್ಲಿ ತಮಗೆ ಪರಮಾಪ್ತರಾಗಿದ್ದ ಮತ್ತೊಬ್ಬ ಹಿರಿಯ ಶ್ರೇಣಿ ಐಪಿಎಸ್ ಅಧಿಕಾರಿ ನಡುವಿನ ಜಟಾಪಟಿಯು ರಾವ್‌ಗೆ ಸಂಬಂಧಿಸಿದ ದೃಶ್ಯಗಳು ಸೋರಿಕೆಯಾಗಲು ಪ್ರಮುಖ ಕಾರಣ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಸ್ನೇಹ ಸಂಬಂಧ ಹದಗೆಟ್ಟಿತ್ತು: ಈ ವಿಡಿಯೋಗಳನ್ನು ಸೋರಿಕೆ ಮಾಡಿದವರ್‍ಯಾರು ಎಂಬ ಚರ್ಚೆ ಡಾ. ರಾಮಚಂದ್ರ ರಾವ್ ಮತ್ತು ರಾಜ್ಯ ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ. 'ಮೈಸೂರು ಮಿತ್ರ'ನಿಗೆ ಪೊಲೀಸ್ ಮೂಲಗಳು ತಿಳಿಸಿರುವ ಪ್ರಕಾರ ಡಾ.ರಾವ್ ಅವರು ಪೊಲೀಸ್ ಇಲಾಖೆಯ ಮತ್ತೊಂದು ವಿಭಾಗದ ಹಿರಿಯ ಐಪಿಎಸ್ ಅಧಿಕಾರಿ, ಪೊಲೀಸ್ ಕಲ್ಯಾಣ ಯೋಜನೆಗಾಗಿ ಮಂಜೂರಾದ ಸುಮಾರು 9 ಕೋಟಿ ರೂ ಹಣವನ್ನು ದುರುಪಯೋಗ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ಸರ್ಕಾರಕ್ಕೆ ಒದಗಿಸುತ್ತಿದ್ದುದೇ ಇವರ ವೀಡಿಯೊ ವೈರಲ್ ಆಗಲು ಕಾರಣವೆಂದು ಹೇಳಲಾಗುತ್ತಿದೆ.

> ▶ ಈಗ ಬಹಿರಂಗವಾಗಿರುವ ವೀಡಿಯೋಗಳ ಸಂಬಂಧ ತನಿಖೆಯನ್ನು ಕೈಗೆತ್ತಿ ಕೊಂಡಿರುವ ರಾಜ್ಯ ಸರ್ಕಾರ, ಹಾಗೆಯೇ 9 ಕೋಟಿ ರೂ. ಭ್ರಷ್ಟಾಚಾರ ಪ್ರಕರಣದ ತನಿಖೆಯನ್ನೂ ಕೈಗೊಂಡು ಇವೆರಡಕ್ಕೆ ತಳುಕು ಹಾಕಿಕೊಂಡಿರುವ ರಹಸ್ಯ ಬಯಲು ಮಾಡಿದ ನಂತರವಷ್ಟೇ ಈ ಇಬ್ಬರೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ನಿರ್ಧಾರವಾಗಬೇಕಿದೆ.

ಡಾ. ರಾಮಚಂದ್ರ ರಾವ್ ಅವರ ಈ ವರ್ತನೆಯಿಂದ ಬೇಸತ್ತಿದ್ದ ಆ ಹಿರಿಯ ಐಪಿಎಸ್ ಅಧಿಕಾರಿಯು ಹಗರಣ ಬೆಳಕಿಗೆ ಬಂದರೆ ತಾನು ತೊಂದರೆಗೆ ಸಿಲುಕುತ್ತೇನೆಂದು, ಪ್ರತಿಯಾಗಿ ಡಾ. ರಾವ್ ಅವರನ್ನು ಯಾವುದಾದರೊಂದು ಸಮಸ್ಯೆಗೆ ಸಿಲುಕಿಸಲು ಸಮಯ ಕಾಯುತ್ತಿದ್ದರು. ಹಾಗಾಗಿ ಡಾ. ರಾವ್ 8 ವರ್ಷಗಳ ಹಿಂದೆ ಬೆಳಗಾವಿಯಲ್ಲಿ ಐಜಿಪಿಯಾಗಿದ್ದಾಗ ಸೆರೆಹಿಡಿದಿದ್ದ ವೀಡಿಯೊ ಮತ್ತು ಆಡಿಯೋ ತುಣುಕುಗಳಿರುವ ಮಾಹಿತಿ ಹೇಗೋ ಆ ಹಿರಿಯ ಪೊಲೀಸ್ ಅಧಿಕಾರಿಗೆ ತಲುಪಿದೆ.

ಕೊಠಡಿ ಬಾಗಿಲು ತೆರೆದಾಗ: ಡಾ. ರಾವ್, ಬೆಳಗಾವಿಯಲ್ಲಿ ಐಜಿಪಿಯಾಗಿದ್ದಾಗ ತಮ್ಮ ಅಧಿಕೃತ ಕಚೇರಿಯಲ್ಲಿ ಸಮವಸ್ತ್ರದಲ್ಲೇ ಮಹಿಳೆಯೊಂದಿಗೆ ಸರಸ– ಸಲ್ಲಾಪದಲ್ಲಿ ತೊಡಗಿದ್ದಾಗ, ತಮ್ಮ ಕಚೇರಿ ಆಡಳಿತ ಶಾಖೆ ಸಿಬ್ಬಂದಿ ತುರ್ತು ಕಡತ ಒಂದಕ್ಕೆ ಸಹಿ ಹಾಕಿಸಲೆಂದು ಹಠಾತ್ತನೆ ಕೊಠಡಿಯ ಬಾಗಿಲು ತೆಗೆದು ಒಳ ಬಂದಾಗ ಆ ದೃಶ್ಯ ಅವರ ಕಣ್ಣಿಗೆ ಬಿದ್ದಿತ್ತು ಎಂದು ಮೂಲಗಳು ತಿಳಿಸಿವೆ.

ಅವಮಾನಿಸಿದ್ದರೇ?: ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯೊಬ್ಬರಿಗೆ ಕಡತ ನಿರ್ವಹಣೆಗೆ ಸಂಬಂಧಿಸಿದಂತೆ ಇತರೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ▶ 10ನೇ ಪುಟಕ್ಕೆ

ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷೆ ಡಾ.ಆರ್.ಸುನಂದಮ್ಮನವರಿಗೆ ಸನ್ಮಾನ

ಸಾಹಿತ್ಯ ಗೋಷ್ಠಿಗಳಲ್ಲಿ ಮಹಿಳಾ ಲೇಖಕಿಯರಿಗೆ ಅವಕಾಶಕ್ಕಾಗಿ ಹೋರಾಡುವಂತೆ ಕರೆ



ಕನ್ನಡ ಲೇಖಕಿಯರ ಟ್ರಸ್ಟ್, ಕರ್ನಾಟಕ ಲೇಖಕಿಯರ ಸಂಘ ಮೈಸೂರು ಶಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಿರಿಯ ಲೇಖಕಿ, ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷೆ ಡಾ.ಆರ್.ಸುನಂದಮ್ಮರನ್ನು ಅಭಿನಂದಿಸಲಾಯಿತು.

ಮೈಸೂರು, ಜ.21(ಎಂಕೆ)– ಕನ್ನಡ ಲೇಖಕಿಯರ ಟ್ರಸ್ಟ್, ಕರ್ನಾಟಕ ಲೇಖಕಿಯರ ಸಂಘ ಮೈಸೂರು ಶಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಿರಿಯ ಲೇಖಕಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಾ.ಆರ್.ಸುನಂದಮ್ಮ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಬುಧವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹಿರಿಯ ಸಂಗೀತ ವಿದುಷಿ ಹೆಚ್.ಆರ್.ಲೀಲಾವತಿ ಅವರು ಡಾ.ಆರ್.ಸುನಂದಮ್ಮ ಅವರಿಗೆ ಶಾಲಿನ ಜೊತೆಗೆ ಸೀರೆ ಹೊದಿಸಿ ದಂಪತಿಯನ್ನು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಹಿರಿಯ ಲೇಖಕಿ ಡಾ.ಆರ್.ಸುನಂದಮ್ಮ, 70–80ರ ದಶಕದಲ್ಲಿ ಅಡುಗೆ ಮನೆಗೆ ಸಿಮೀತಗೊಳಿಸಲಾಗಿದ್ದ ಮಹಿಳಾ ಸಾಹಿತ್ಯಕ್ಕೆ ಪ್ರತೀ ಗೋಷ್ಠಿಗಳಲ್ಲಿಯೂ ಸಮಾನ ಅವಕಾಶ ಮತ್ತು ಆದ್ಯತೆ ನೀಡುವಂತೆ ಹೋರಾಟ ಮಾಡಬೇಕಿದೆ ಎಂದು ಕರೆ ನೀಡಿದರು.

ಹೆಣ್ಣು ಮಕ್ಕಳು ಬರೆದ ಕಥೆ–ಕಾದಂಬರಿಗಳನ್ನು ಅಡುಗೆ ಮನೆಗೆ ಸಿಮೀತಗೊಳಿಸಿ, ಓದದಂತೆಯೂ ರಾಜಕೀಯ ಮಾಡಲಾಗಿತ್ತು ಮಹಿಳಾ ಲೇಖಕಿಯರ ಹೆಸರನ್ನು ಪ್ರಸ್ತಾಪಿಸದೆ ಸಾಹಿತ್ಯವನ್ನು ಮೂಲೆಗುಂಪು ಮಾಡಲಾಗುತ್ತಿತ್ತು. ಇದರಿಂದ ಮಹಿಳಾ ಲೇಖಕಿಯರು ಸಾಕಷ್ಟು ನೋವು, ಅಸಹಾಯಕತೆ ಅನುಭವಿಸಿದ್ದಾರೆ. ಭಾರತದಲ್ಲಿ ಮಾತ್ರವಲ್ಲದೆ ಕೆಲ ಬೇರೆ ಬೇರೆ ದೇಶಗಳಲ್ಲಿಯೂ ಮಹಿಳೆಯರ ಸಾಹಿತ್ಯಕ್ಕೆ ಆದ್ಯತೆ ನೀಡುತ್ತಿರಲಿಲ್ಲ ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಮಹಿಳಾ ಬರಹಗಾರರ ಸಂಖ್ಯೆ ಹೆಚ್ಚಾಗುತ್ತಿದ್ದು, 18–30 ವರ್ಷದೊಳಗಿನ ಲೇಖಕಿಯರಿಗೆ ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ. ಆದ್ದರಿಂದ ಎಲ್ಲಾ ಬಗೆಯ ಕವಿಗೋಷ್ಠಿಗಳಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ ನೀಡಬೇಕು. ಹಾಗೆಯೇ ಕರ್ನಾಟಕ ಲೇಖಕಿಯರ ಸಂಘಕ್ಕೆ ಪ್ರೋತ್ಸಾಹ ನೀಡಬೇಕೆಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಲೇಖಕಿ ಡಾ.ಎಂ.ಎಸ್.ವೇದಾ ಅಭಿನಂದನಾ ನುಡಿಗಳನ್ನಾಡಿದರು. ಬಳಿಕ ಲೇಖಕಿ ಹೆಚ್.ಎಸ್.ಮಧುರಾಣಿ ಅಧ್ಯಕ್ಷತೆ ಹಾಗೂ ಲೇಖಕಿ ಬಿ.ಕೆ.ಮೀನಾಕ್ಷಿ ಅವರ ನಿರ್ವಹಣೆಯೊಂದಿಗೆ ಕವಿಗೋಷ್ಠಿ ನಡೆಯಿತು.

ಲೇಖಕಿಯರಾದ ಕೆರೋಡಿ ಲೋಲಾಕ್ಷಿ, ಸುಧಾ ರಮೇಶ್, ಬಿ.ಸುಜಾತಾ, ಸುಚಿತ್ರಾ ಹೆಗಡೆ, ಕೆ.ಲಕ್ಷ್ಮಿ, ಕೆ.ಟಿ.ಶ್ರೀಮತಿ, ಸುಜಾತಾ ರವೀಶ್, ಎಸ್.ಎಲ್.ವರಲಕ್ಷ್ಮಿ ಮಂಜುನಾಥ್ ಕವನ ವಾಚಿಸಿದರು.

ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಲೇಖಕಿಯರ ಟ್ರಸ್ಟ್ ಉಪಾಧ್ಯಕ್ಷೆ ಮಂಜುಳಾ ಮಾನಸ, ಕಾರ್ಯದರ್ಶಿಗಳಾದ ಹೇಮಾ ನಂದೀಶ್, ಮೀನಾ ಮೈಸೂರು, ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷೆ ಉಷಾ ನರಸಿಂಹನ್ ಮತ್ತಿತರರಿದ್ದರು.

ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ಹಿಂದುಳಿದ ವರ್ಗಗಳ ಜನರ ಬೆನ್ನೆಲುಬಾಗಿ ನಿಂತಿದ್ದ ವಚನಕಾರರು: ಎಂಎಲ್‌ಸಿ ಡಾ.ತಿಮ್ಮಯ್ಯ ಅಭಿಮತ



ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತ, ನಗರಪಾಲಿಕೆ, ಕನ್ನಡ–ಸಂಸ್ಕೃತಿ ಇಲಾಖೆ ವತಿಯಿಂದ 'ಅಂಬಿಗರ ಚೌಡಯ್ಯ ಜಯಂತಿ' ಆಚರಿಸಲಾಯಿತು.

ಮೈಸೂರು, ಜ.21(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತ, ನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 'ಅಂಬಿಗರ ಚೌಡಯ್ಯ ಜಯಂತಿ' ಆಚರಿಸಲಾಯಿತು.

ಅಂಬಿಗರ ಚೌಡಯ್ಯ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಅಂಬಿಗರ ಚೌಡಯ್ಯ ರಚಿತ ವಚನಗಳ ತತ್ವ ಸಾರವನ್ನು ಪ್ರತಿಯೊಬ್ಬರು ಅರಿತು, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಾಂಸ್ಕೃತಿಕ ನಾಯಕರಾದ ಬಸವಣ್ಣನವರ ಅನುಭವ ಮಂಟಪದಲ್ಲಿ ಅಂಬಿಗರ ಚೌಡಯ್ಯ ಹಿಂದುಳಿದ ವರ್ಗಗಳ ಜನರ ಬೆನ್ನೆಲುಬಾಗಿ ನಿಂತಿದ್ದರು. ದೋಣಿ ನಡೆಸುವ ಕಾಯಕ ಮಾಡುತ್ತಿದ್ದ ಅವರು, ನೇರ, ನಿಷ್ಠುರ ಮತ್ತು ಸೌಮ್ಯ ಸ್ವಭಾವದ ವಚನಕಾರರಾಗಿದ್ದರು. ಶ್ರೇಣಿಕೃತ ಸಮಾಜದಲ್ಲಿನ ಲೋಪದೋಷಗಳನ್ನು ಕುರಿತು ಪ್ರಸ್ತಾಪಿಸುತ್ತಿದ್ದರು. ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿ ಸಮಾಜದ ಬೆಳವಣಿಗೆ ತಮ್ಮ ಕಾಯಕದಲ್ಲಿ ತೊಡಗಿದರು ಎಂದು ಹೇಳಿದರು.

ಅಂಬಿಗರ ಚೌಡಯ್ಯ ಅವರ ಕುರಿತು ಉಪನ್ಯಾಸ ನೀಡಿದ ಡಾ.ಎಲ್.ಭವಾನಿ, ಅಂಬಿಗರ ಚೌಡಯ್ಯ ಅವರು ತುಂಗಭದ್ರಾ ತೀರದ ಶಿವಪುರ ಎಂಬ ಸ್ಥಳದಲ್ಲಿ ಜನಿಸಿದರು. ಬಸವಣ್ಣ ಅವರ ತತ್ವ ಸಿದ್ದಾಂತಗಳಿಂದ ಪ್ರೇರಣೆ ಪಡೆದು ಅನುಭವ ಮಂಟಪದ ಸದ್ಯಸರಾದರು. ಬಸವಣ್ಣರಂತೆ ಚೌಡಯ್ಯ ಅವರು ಕೂಡ ವಚನಗಳ ಮೂಲಕ ತಮ್ಮ ತತ್ವ–ಸಿದ್ದಾಂತ ತಿಳಿಸಿದ್ದಾರೆ ಎಂದರು.

ಮೂಢನಂಬಿಕೆಯನ್ನು ಖಂಡಿಸುತ್ತಿದ್ದ ಅಂಬಿಗರ ಚೌಡಯ್ಯನವರು, ಸಮಾಜದಲ್ಲಿನ ಅಜ್ಞಾನ, ಮೂಢನಂಬಿಕೆ ಮತ್ತು ವಂಚನೆಗಳನ್ನು ತೊಡೆದು ಹಾಕುವಲ್ಲಿ ಪ್ರಯತ್ನಿಸುತ್ತಿದ್ದರು. ತರ್ಕ, ವ್ಯಾಕರಣ, ಛಂದಸ್ಸುಗಳ ಬಗ್ಗೆ ತಿಳಿಸಿದ್ದ ಅವರು, ಸಮಾಜದ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು ಎಂದರು. ಗಂಗಮತದ ಅಧ್ಯಕ್ಷರಾದ ವಸಂತಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಗಂಗಮತದ ಮುಖಂಡರಾದ ಬಸವಯ್ಯ, ಕಾರ್ಯದರ್ಶಿ ಚಿಕ್ಕ ಲಿಂಗ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

> "ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮುಂದುವರೆಯಲು ಕಾನೂನಿನಲ್ಲಿ ಅವಕಾಶವಿದ್ದು, ಸಂವಿಧಾನಾತ್ಮಕವಾಗಿ ನೀಡಿರುವ ಹಕ್ಕು–ಅಧಿಕಾರಗಳನ್ನು ಪಡೆದುಕೊಳ್ಳಲು ಅಸಂಘಟಿತ ಸಮಾಜಗಳು ಸಂಘಟಿತರಾಗಬೇಕು. ಎಲ್ಲರೂ ಒಂದುಗೂಡಿದಾಗ ಮಾತ್ರವೇ ಸಮುದಾಯದಲ್ಲಿನ ಸಮಸ್ಯೆಗಳು ನಿವಾರಣೆಯಾಗಲಿವೆ.
>
> –ಡಾ.ಡಿ.ತಿಮ್ಮಯ್ಯ, ಎಂಎಲ್‌ಸಿ

ಮಸೀದಿ ಬಿಲಾಲ್ ನಿರ್ಮಾಣಕ್ಕೆ ಶಂಕುಸ್ಥಾಪನೆ



ಇಲವಾಲ ಹೋಬಳಿಯ ಸಾಗರಕಟ್ಟೆ ಗ್ರಾಮದಲ್ಲಿ ಮಸೀದಿ ಬಿಲಾಲ್ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು, ಜ. 21– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಇಲವಾಲ ಹೋಬಳಿಯ ಸಾಗರಕಟ್ಟೆ (ಎಸ್.ಹೊಮ್ಮನಹಳ್ಳಿ) ಗ್ರಾಮದಲ್ಲಿ ಮಸೀದಿ ಬಿಲಾಲ್ ಮತ್ತು ಅರೇಬಿಕ್ ಮದರಸಾ ಮ್ಯಾನೇಜಿಂಗ್ ಕಮಿಟಿ ಇದೆ. ಪ್ರಸ್ತುತ ಇರುವ ಮಸೀದಿಯನ್ನು 60 ವರ್ಷಗಳ ಹಿಂದೆ ವಕ್ಫ್ ಬೋರ್ಡ್ ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಸದ್ಯ ಮಸೀದಿಯ ಛಾವಣಿ ಮತ್ತು ಗೋಡೆಗಳು ಶಿಥಿಲಾವಸ್ಥೆಯಲ್ಲಿತ್ತು. ಹಾಗಾಗಿ ಮಳೆ ಬಂದಾಗ ನೀರು ಸೋರುತ್ತಿತ್ತು.

ಈ ಹಿನ್ನೆಲೆಯಲ್ಲಿ, ಎರಡು ತಿಂಗಳ ಹಿಂದೆ ಮೈಸೂರು ಜಿಲ್ಲಾ ವಕ್ಫ್ ಮಂಡಳಿ ಸಲಹಾ ಸಮಿತಿಯು ಮಸೀದಿ ಕಟ್ಟಡವನ್ನು ಪುನರ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವಂತೆ ವಿನಂತಿಸಿತ್ತು. ಜಿಲ್ಲಾ ವಕ್ಫ್ ಮಂಡಳಿ ಅಧ್ಯಕ್ಷ ಅಜೀಜುಲ್ಲಾ ಅಜ್ಜು, ಸದಸ್ಯರು ಮತ್ತು ವಕ್ಫ್ ಅಧಿಕೃತ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದರು.

ಅಲ್ಲಿ 40 x 40 ಅಡಿಯ ಖಾಲಿ ಜಾಗವಿದೆ. ಸಮಿತಿಯು ಕರ್ನಾಟಕ ರಾಜ್ಯ ವಕ್ಫ್, ಅಲ್ಪಸಂಖ್ಯಾತ ಮತ್ತು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತು ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಮಸೀದಿಯು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿತ್ತು. ತದನಂತರ ಹೊಸ ಮಸೀದಿ ಕಟ್ಟಡ ನಿರ್ಮಿಸಲು ನಿರ್ಧಾರ ಕೈಗೊಂಡು ಅನುಮತಿ ನೀಡಲಾಯಿತು.

ಹಾಗಾಗಿ ಶಾಸಕ ಜಿ.ಟಿ.ದೇವೇಗೌಡರು ಮಸೀದಿಯ ಆವರಣದಲ್ಲಿ ಅಡಿಗಲ್ಲು ಹಾಕಿದರು. ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್ ಸಾಹೇಬ್, ಮೈಸೂರಿನ ದಾರುಲ್ ಉಲೂಮ್ ಸಿದ್ದಿಕಿಯಾ ಅರೇಬಿಕ್ ಮದ್ರಸಾದ ಶರಿಯತ್ ಖಾಜಿ ಹಜರತ್ ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್ ಸಾಹೇಬ್, ಜಿಲ್ಲಾ ವಕ್ಫ್ ಮಂಡಳಿ ಅಧ್ಯಕ್ಷ ಅಜೀಜ್ ಉಲ್ಲಾ ಅಜ್ಜು, ಸದಸ್ಯರಾದ ಮೌಲಾನಾ ಅಬ್ದುಲ್ ಸಲಾಂ ರಿಜ್ವಿ ಸಾಹೇಬ್, ಮೌಲಾನಾ ಮೊಹಮ್ಮದ್ ಇಬ್ರಾಹಿಂ, ನಿಸಾರ್ ಅಹಮದ್, ನಸೀರುದ್ದೀನ್ ಬಾಬು, ಎ.ಆರ್.ಎಂ ಅಮ್ಜದ್ ಪಾಷಾ, ಜಿಲ್ಲಾ ವಕ್ಫ್ ಅಧಿಕಾರಿ ಮೊಹಮ್ಮದ್ ಮುಷ್ತಾಕ್, ಬಿಲಾಲ್ ಮಸೀದಿ ಅಧ್ಯಕ್ಷ ಶಬೀರ್ ಮತ್ತು ಮಸೀದಿ ಪದಾಧಿಕಾರಿಗಳು, ಇಮಾಮ್ ಹಜರತ್ ಅರ್ಷದ್ ಉಲ್ ಖಾದ್ರಿ ಸಾಹೇಬ್, ಇ.ಪಿ. ರವಿ, ಶಿವಣ್ಣ ನಾಯಕ್, ಸದಸ್ಯರು, ಗ್ರಾಮ ಪಂಚಾಯತ್ ಉಪಾಧ್ಯಕ್ಷ ಮಾದೇಗೌಡ, ಗುಂಗ್ರಾಲ್ ಛತ್ರ ಅಧ್ಯಕ್ಷರಾದ ಮಂಜುಳಾ, ಸದಸ್ಯರಾದ ಬಸವರಾಜು, ಶಿವಣ್ಣ, ಸಮೀ ಅಜ್ಜು, ಅಫ್ಸರ್ ಪಾಷಾ, ಸಿವಿಲ್ ಇಂಜಿನಿಯರ್ ಫಾಜಿಲ್ ಸಾಹೇಬ್, ಪ್ರದೇಶದ ನಿವಾಸಿಗಳು ಮತ್ತು ಧಾರ್ಮಿಕ ಮುಖಂಡರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಇಂದಿನಿಂದ ಮುಡುಕುತೊರೆ ಜಾತ್ರಾ ಮಹೋತ್ಸವ



ಮುಡುಕುತೊರೆ ಜಾತ್ರಾ ಮಹೋತ್ಸವದ ಪೋಸ್ಟರ್ ಅನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು.

ಉಸ್ತುವಾರಿ ಸಚಿವರಿಂದ ಪೋಸ್ಟರ್ ಬಿಡುಗಡೆ

ಮೈಸೂರು, ಜ.21(ಎಂಕೆ)– ಟಿ.ನರಸೀಪುರ ತಾಲೂಕಿನ ಇತಿಹಾಸ ಪ್ರಸಿದ್ಧ ಮುಡುಕುತೊರೆ ಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವದ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬುಧವಾರ ಬಿಡುಗಡೆ ಮಾಡಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆ ಹಾಗೂ ತಾಲೂಕು ಆಡಳಿತದ ವತಿಯಿಂದ ಜ.22ರಿಂದ 31ರವರೆಗೆ ನಡೆಯುವ ಮುಡುಕುತೊರೆ ಜಾತ್ರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು.

ಪ್ರಸಿದ್ಧ ಮುಡುಕುತೊರೆ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಕ್ಕೆ ಪ್ರವಾಸಿಗರು ಹಾಗೂ ಯಾತ್ರಾರ್ಥಿಗಳ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಸ್ಥಳವಾಗಿದ್ದು, ವಿಜೃಂಭಣೆಯಿಂದ ಜರುಗುವ ಜಾತ್ರೆಗೆ ಲಕ್ಷಾಂತರ ಜನರು ಆಗಮಿಸಲಿದ್ದಾರೆ. ಜ.22ರಿಂದ ಪ್ರಾರಂಭವಾಗುವ ಜಾತ್ರಾ ಮಹೋತ್ಸವ, ಜ.28ರಂದು ಬ್ರಹ್ಮ ರಥೋತ್ಸವ, ಜ.31ರಂದು ತೆಪ್ಪೋತ್ಸವ ಹಾಗೂ ಫೆ.4ರಂದು ಗಿರಿಪ್ರದಕ್ಷಿಣೆ ಪೂಜಾ ಕೈಂಕರ್ಯದೊಂದಿಗೆ ಫೆ.6ರಂದು ನಡೆಯುವ ಮಹಾಭಿಷೇಕದೊಂದಿಗೆ ಸಂಪನ್ನಗೊಳ್ಳಲಿದೆ. ಪೋಸ್ಟರ್ ಬಿಡುಗಡೆ ವೇಳೆ ಶಾಸಕ ಜಿ.ಟಿ.ದೇವೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ, ತಲಕಾಡು ವೈದ್ಯನಾಥೇಶ್ವರ ಸಮೂಹ ದೇವಾಲಯ ಸಮಿತಿ ಅಧ್ಯಕ್ಷ ನಾಗರಾಜು, ಲೋಕೇಶ್, ಮಾದೇಶ್, ಶಾಂತರಾಜು ಮತ್ತಿತರರು ಸೇರಿದಂತೆ ಉಪಸ್ಥಿತರಿದ್ದರು.

ಮೈಸೂರಲ್ಲಿ ನಾಳೆಯಿಂದ ಪ್ಲಾಸ್ಟಿಕ್ ತಂತ್ರಜ್ಞಾನ ಪ್ರದರ್ಶನ ಓಪನ್ ಹೌಸ್

ಮೈಸೂರು, ಜ.21(ಜಿಎ)–ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ(ಸಿಪೆಟ್) ವತಿಯಿಂದ ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಸಂಸ್ಥೆಯಲ್ಲಿ ಜ.23ರಿಂದ 25ರವರೆಗೂ ಪ್ಲಾಸ್ಟಿಕ್ ತಂತ್ರಜ್ಞಾನ ಪ್ರದರ್ಶನ ಓಪನ್ ಹೌಸ್ ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೂ ಸಂಸ್ಥೆ ಮುಕ್ತವಾಗಿ ತೆರೆದಿರುತ್ತದೆ. ಪೋಷಕರು, ಕೈಗಾರಿಕ ಉದ್ಯೋಗಿಗಳು ಮತ್ತು ಸಾರ್ವಜನಿಕರು ಭೇಟಿ ನೀಡಿ ವೃತ್ತಿ ಮಾರ್ಗದರ್ಶನ ಮತ್ತು ಸಮಾಲೋಚನೆ ಮಾಡಬಹುದಾಗಿದೆ. ಜೊತೆಗೆ ಲ್ಯಾಬ್, ಟೂಲ್ ರೂಮ್ ಮತ್ತು ಪ್ಲಾಸ್ಟಿಕ್ ಉತ್ಪನಗಳ ತಯಾರಿಕಾ ಘಟಕಗಳನ್ನು ವೀಕ್ಷಿಸಲು ಅವಕಾಶವಿದೆ ಎಂದರು.

ಪ್ಲಾಸಿಕ್ ಕೈಗಾರಿಕೆಯಲ್ಲಿ ಬಳಸುವ ಆಧುನಿಕ ತಂತ್ರಜ್ಞಾನ ಮತ್ತು ಸುಧಾರಿತ ಯಂತ್ರೋಪಕರಣಗಳ ಲೈವ್ ಡೆಮೋ ನೋಡಬಹುದು. ಅನುಭವಿ ಅಧ್ಯಾಪಕರು ಕೈಗಾರಿಕಾ ತಜ್ಞರಿಂದ ಉಪನ್ಯಾಸಗಳನ್ನು ಕೇಳಬಹುದು ಮತ್ತು ವೃತ್ತಿ ಮಾರ್ಗದರ್ಶನ ಪಡೆಯಬಹುದು ಎಂದರು.

ಸಂಸ್ಥೆಯಲ್ಲಿ 'ಡಿಪ್ಲೋಮ ಇನ್ ಪ್ಲಾಸಿಕ್ ಟೆಕ್ನಾಲಜಿ' ಮತ್ತು 'ಡಿಪ್ಲೋಮ ಇನ್ ಪ್ಲಾಸ್ಟಿಕ್ಸ್ ಮೋಲ್ಡ್ ಟೆಕ್ನಾಲಜಿ' ಎರಡು ವರ್ಷದ ಕೋರ್ಸ್‌ಗಳು ಇದ್ದು, ರಾಜ್ಯದಿಂದ ಕೇವಲ 60 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ವ್ಯಾಸಂಗ ಮಾಡಿದವರು ಈ ಕೋರ್ಸ್‌ಗಳನ್ನು ಪಡೆದು ಕೊಳ್ಳಬಹುದು ನೋಂದಣಿ ಈಗಾಗಲೇ ಆರಂಭವಾಗಿದ್ದು ಹೆಚ್ಚಿನ ಮಾಹಿತಿಗಾಗಿ 9480253024, 9483431968 ಸಂಪರ್ಕಿಸಿ ಎಂದು ತಿಳಿಸಿದರು.

ಜ.25 ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯಿಂದ ಪ್ರಾಂತೀಯ ಸಮ್ಮೇಳನ

ಮೈಸೂರು, ಜ.21(ಜಿಎ)–ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ ಅಸೋಸಿಯೇಷನ್ ಸಭಾಂಗಣದಲ್ಲಿ ಜ.25ರಂದು ಬೆಳಗ್ಗೆ 10.30ಕ್ಕೆ ಅಂತರ ರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಜಿಲ್ಲೆ 317ಜಿ ಪ್ರಾಂತೀಯ ಸಮ್ಮೇಳನವನ್ನು 'ಸ್ವಸ್ಥ ಸಮಾಜ ನಿರ್ಮಾಣಕ್ಕೆ ಯುವಜನರ ಪಾತ್ರ' ಘೋಷವಾಕ್ಯದೊಂದಿಗೆ ಏರ್ಪಡಿಸಲಾಗಿದೆ ಎಂದು ಪ್ರಾಂತೀಯ ಅಧ್ಯಕ್ಷ ಬಿ.ಜೆ.ಮನು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಆಗಮಿಸಲಿದ್ದಾರೆ. ಹಿರಿಯ ಪತ್ರಕರ್ತರಾದ ರವಿಹೆಗ್ಡೆ ಅವರು 'ಸ್ವಸ್ಥ ಸಮಾಜ ನಿರ್ಮಾಣಕ್ಕೆ ಯುವಜನರ ಪಾತ್ರ' ಕುರಿತು ಮಾತನಾಡಲಿದ್ದಾರೆ. ಈ ವೇಳೆ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಹಾಗೂ ಸಮಾಜ ಸೇವಕ ನರಸಿಂಹಮೂರ್ತಿ ಅವರನ್ನು ಅಭಿನಂದಿಸಲಾಗುವುದು ಎಂದರು.

ಸಮ್ಮೇಳನದಲ್ಲಿ ಲ್ಯಾಪ್ ಟಾಪ್, ಹೊಲಿಗೆ ಯಂತ್ರ ಹಾಗೂ ಟ್ರ್ಯಾಕ್ ಸೂಟ್, ನೀರಿನ ಫಿಲ್ಟರ್ ಸೇರಿದಂತೆ 3 ಲಕ್ಷ ರೂ. ವೆಚ್ಚದಲ್ಲಿ ಸೇವಾ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಲಯನ್ ಡಾ.ಎನ್.ಕೃಷ್ಣೇಗೌಡ, ಲಯನ್ ಎಂ.ಸಿದ್ದೇಗೌಡ, ಲಯನ್ ಬಿ.ಎನ್.ಸುಧಾಕರ್, ಲಯನ್ ಆರ್.ರಮೇಶ್‌ಕುಮಾರ್, ಲಯನ್ ಬಿ.ಮಾದೇಶ್ ಉಪಸ್ಥಿತರಿದ್ದರು.

ಹುಣಸೂರು ಆಭರಣ ಮಳಿಗೆ ದರೋಡೆ ಪ್ರಕರಣ

ಬಂಧಿಸಿದ್ದ ಇಬ್ಬರು ಆರೋಪಿಗಳು 10 ದಿನ ಪೊಲೀಸ್ ವಶಕ್ಕೆ

ಮೈಸೂರು,ಜ.21(ಆರ್‌ಕೆ)– ಹುಣಸೂರಿನ ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್ ಆಭರಣ ಮಳಿಗೆಯಲ್ಲಿ ನಡೆದಿದ್ದ ದರೋಡೆ ಪ್ರಕರಣ ಸಂಬಂಧ ಇಬ್ಬರನ್ನು ಬಂಧಿಸಿದ್ದ ಜಿಲ್ಲಾ ಪೊಲೀಸರು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ 10 ದಿನಗಳ ಕಾಲ ತಮ್ಮ ವಶಕ್ಕೆ ಪಡೆದಿದ್ದಾರೆ.


ತನಿಖೆ ವೇಳೆ ಆರೋಪಿಗಳು ಬಿಹಾರ ಮೂಲದವರೆಂಬುದು ತಿಳಿದು ಬಂದಿತ್ತು. ಅಲ್ಲಿನ ಪೊಲೀಸರನ್ನು ಸಂಪರ್ಕಿಸಿದಾಗ, ಆರೋಪಿಗಳ ಗುರುತು ಪತ್ತೆಹಚ್ಚಿದರು. ಈ ಹಿನ್ನೆಲೆಯಲ್ಲಿ ಇನ್ಸ್‌ಸ್ಪೆಕ್ಟರ್ ಸಂತೋಷ್ ಕಶ್ಯಪ್, ಡಿ.ಎಂ.ಪುನೀತ್, ಪಿಎಸ್‌ಐ ಅಜಯ್ ಕುಮಾರ್ ನೇತೃತ್ವದ ತಂಡವು ಬಿಹಾರ ರಾಜ್ಯಕ್ಕೆ ತೆರಳಿತ್ತು. ನಂತರ ಬಿಹಾರ ಪೊಲೀಸರ ನೆರವಿನೊಂದಿಗೆ ದರ್ಬಾಂಗ್ ಜಿಲ್ಲೆಯಲ್ಲಿ ಸದರಿ ದರೋಡೆಯಲ್ಲಿ ಭಾಗಿಯಾಗಿದ್ದ ದೆಹಲಿ ಮೂಲದ ರಿಷಿಕೇಶ್‌ಕುಮಾರ್ ಸಿಂಗ್ ಹಾಗೂ ಕೃತ್ಯಕ್ಕೆ ಯೋಜನೆ ರೂಪಿಸಿದ್ದ ಬಾಗಲ್ಪುರ್ ಜಿಲ್ಲೆಯ ಪಂಕಜ್‌ಕುಮಾರ್‌ನನ್ನು ಬಂಧಿಸಲಾಗಿತ್ತು.

ಆರೋಪಿಗಳನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ ವಾರಂಟ್ ಪಡೆದು, ಇದೀಗ ನಗರದ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಿ ವಶಕ್ಕೆ ಪಡೆಯಲಾಗಿದೆ. ಈ ಪ್ರಕರಣದಲ್ಲಿ 10ಕ್ಕೂ ಹೆಚ್ಚು ಆರೋಪಿಗಳಿದ್ದು, ಉಳಿದ ಆರೋಪಿಗಳ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಮುಂದುವರೆಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಜ.21– ದೇವನೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಕೋಣನೂರು ಎನ್‌ಜೆವೈ ಮಾರ್ಗದ ನಿರ್ವಹಣೆಯ ಕೆಲಸದ ನಿಮಿತ್ತ ಜ.23 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಗಟ್ಟವಾಡಿ, ಗಟ್ಟವಾಡಿಪುರ, ಹರಗನಪುರ, ಹೆಳವರಹುಂಡಿ, ಚಿಕ್ಕಕೌಲಂದೆ, ದೊಡ್ಡಕೌಲಂದೆ, ಕೆ.ಆರ್.ಪುರ, ಬಸವರಾಜಪುರ, ಕೋಣನೂರು ಗ್ರಾಮಗಳು ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಸಮ್ಮೇಳನದಲ್ಲಿ ಡಾ.ಪ್ರೊ.ಹೆಚ್.ಹನುಮಂತಪ್ಪ ಭಾಗಿ



ಮೈಸೂರು, ಜ.21– ಬೆಂಗಳೂರಿನಲ್ಲಿ ಜ.29ರಿಂದ ಫೆ.1ರವರೆಗೆ ನಡೆಯಲಿರುವ ರಾಷ್ಟ್ರೀಯ ಚರ್ಮ, ಲೈಂಗಿಕ ಮತ್ತು ಕುಷ್ಟ ರೋಗಗಳ ತಜ್ಞರ ಸಮ್ಮೇಳನದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಚರ್ಮರೋಗ ತಜ್ಞ ಡಾ.ಪ್ರೊ.ಹೆಚ್.ಹನುಮಂತಪ್ಪ ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ಇಸುಬು ಎಂಬ ಉಪನ್ಯಾಸ ಮಾಲೆ ವೈಜ್ಞಾನಿಕ ಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಹನುಮಂತಪ್ಪನವರು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದು, ಅನೇಕ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅಲ್ಲದೇ ಅನೇಕ ವೈಜ್ಞಾನಿಕ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.1.2026 ಗುರುವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಅಪೂರ್ವ ಸ್ನೇಹ ಬಳಗ :** ಅಯೋಧ್ಯ ಪ್ರಭು ಶ್ರೀ ರಾಮದೇವರ ಪ್ರತಿಷ್ಠಾಪನೆಯಾಗಿ ಎರಡನೇ ವರ್ಷದ ವಾರ್ಷಿಕೋತ್ಸವ ಸಂಭ್ರಮಾಚರಣೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ, ಮಾಜಿ ನಗರ ಪಾಲಿಕಾ ಸದಸ್ಯ ಮಾ.ವಿ. ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸ್ಥಳ: ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಮುಂಭಾಗ, ಬೆಳಗ್ಗೆ 8.30ಕ್ಕೆ
- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಫಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ವಿಭಾಗ :** ಬೆಳಗ್ಗೆ 10ಕ್ಕೆ ಸಂಶೋಧನಾ ವಿಧಾನದ ಪಾಂಡಿತ್ಯ ಕುರಿತು ಉಚಿತ ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ ಎನ್. ನಾಗರಾಜು, ವಿಶೇಷ ಆಹ್ವಾನಿತರು : ಮೈಸೂರು ವಿವಿ ಎಂಎಂಟಿಟಿಸಿ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ನಿವೃತ್ತ ಗ್ರಂಥ ಪಾಲಕ ರಾಮಶೇಷ್, ಗ್ರಂಥ ಪಾಲಕರಾದ ಡಾ. ಪಿ. ಸರಸ್ವತಿ, ಸಹಾಯಕ ಗ್ರಂಥ ಪಾಲಕ ಎ.ಎನ್. ರಮೇಶ್; ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಸಮಾರೋಪ ಭಾಷಣ : ನಿವೃತ್ತ ಗ್ರಂಥಪಾಲಕ ರಾಮಶೇಷ್, ಉಪಸ್ಥಿತರು: ಗ್ರಂಥಾಲಯ ಸಹಾಯಕರಾದ ಶ್ರೀಮತಿ ಸಿ. ಸ್ವಪ್ನ, ಸ್ಥಳ: ಮಾನಸ ಮೀಡಿಯಾ ಸಭಾಂಗಣ, ಗ್ರಂಥಾಲಯ.
- **ಯೂನಿವರ್ಸಿಟಿ ಆಫ್ ಮೈಸೂರ್ ಸ್ಕೂಲ್ ಆಫ್ ಲಾ :** ಏರ್ ಅಂಡ್ ಸ್ಪೇಸ್ ಲಾ ಕುರಿತು ಅಂತರ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಡಾ. ಸುದರ್ಶನ ರಾಮರಾಜು, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಸ್ಕೂಲ್ ಆಫ್ ಲಾ ನಿರ್ದೇಶಕ ಪ್ರೊ. ಟಿ.ಆರ್. ಮಾರುತಿ, ಸ್ಥಳ: ಸ್ಕೂಲ್ ಆಫ್ ಲಾ, ಮೈಸೂರು ವಿವಿ, ಬೆಳಗ್ಗೆ 10ಕ್ಕೆ
- **ಅಮೃತಾಂಶು ಟ್ರಸ್ಟ್, ಜೀವಧಾರ ರಕ್ತನಿಧಿ ಕೇಂದ್ರ, ಜಿಲ್ಲಾ ಅಂಧತ್ವ ನಿಯಂತ್ರಣ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್. ಆಸ್ಪತ್ರೆ :** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: 2767, ಪಾಂಚಜನ್ಯ, 5ನೇ ಮುಖ್ಯ ರಸ್ತೆ, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್., 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎ.ಎನ್. ಶೀಲಾ, ವ್ಯಾಖ್ಯಾನ– ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ – ವಿದ್ವಾನ್ ನೇದನೂರಿ ಕೃಷ್ಣಮೂರ್ತಿ –ಹಾಡುಗಾರಿಕೆ, 11.00 ಸುತ್ತ ಮುತ್ತ– ಪ್ರಸ್ತುತಿ–ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಅರ್ಚನಾ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ, ಹಣ್ಣು–ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ ಮಾವಿನ ತೋಟಗಾರಿಕಾ ಬೆಳೆಗಳಲ್ಲಿ ಸಸ್ಯ ಪೋಷಕಾಂಶಗಳ ಮಹತ್ವ ಕೊರತೆ ಲಕ್ಷಣಗಳು ಹಾಗೂ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ತಾಲ್ಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ವಿಜ್ಞಾನಿಗಳಾದ ಡಾ. ಎಸ್. ಮೋಹನ್ ಕುಮಾರ್ ಮತ್ತು ಡಾ. ಕೆ.ಎಂ.ಶಿವಕುಮಾರ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ವಿಧಾನ ಮಂಡಲದಲ್ಲಿ ಇಂದು, 8.00 ಯುವವಾಣಿ – ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ:ವ್ಯವಹಾರ ಅಧ್ಯಯನ, ಭಾಗವಹಿಸುವವರು–ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು ಚಿನಕುರಳಿಯ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ನಿಶಾಂತ್ ಎ. ನಾಯ್ಡು, ಪ್ರಸ್ತುತಿ– ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ–ವೈಶಾಲಿಯ ನಗರವಧು

ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಕಾಮಗಾರಿ ವಿರೋಧಿಸಿ ಮುಂದುವರೆದ ಪ್ರತಿಭಟನೆ

ವಿವಿಧ ಸಂಘಟನೆಗಳಿಂದ 'ಪ್ರಸಾದ್' ಕಾಮಗಾರಿ ಸ್ಥಗಿತಗೊಳಿಸಲು ಒತ್ತಾಯ

ಮೈಸೂರು,ಜ.21(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಯೋಜನೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದ್ದು, ದಿನಕ್ಕೊಂದು ಸಂಘ–ಸಂಸ್ಥೆಗಳು ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿವೆ.

ಬುಧವಾರ ಚಾಮುಂಡಿಬೆಟ್ಟದಲ್ಲಿ ಪರಿಸರ ಪ್ರೇಮಿಗಳು ಸೇರಿದಂತೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿ 'ಪ್ರಸಾದ್' ಯೋಜನೆಯಡಿ ನಡೆಯುತ್ತಿರುವ ಕಾಮಗಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಚಾಮುಂಡಿಬೆಟ್ಟದ ದೇವಾಲಯದ ಪಕ್ಕದಲ್ಲಿರುವ ಜಾಗದಲ್ಲಿ ಪ್ರಸಾದ ಯೋಜನೆಯಡಿ ಮಂಟಪ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿ ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕೇತ್ರ ಅಭಿವೃದ್ಧಿ ಪ್ರಾಧಿಕಾರದ ನಡೆಗೆ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿದ್ದಾರೆ. ಆದರೂ ಕಾಮಗಾರಿ ಮುಂದುವರೆಸಿರುವ ಹಿನ್ನೆಲೆಯಲ್ಲಿ ಬುಧವಾರ 'ಪರಿಸರಕ್ಕಾಗಿ ನಾವು' ಸಂಘಟನೆ, ಮೈಸೂರು ರಕ್ಷಣಾ ವೇದಿಕೆ, ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಚಾಮುಂಡಿಬೆಟ್ಟದಲ್ಲಿ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.





ಪ್ರಸಾದ್ ಯೋಜನೆಯ ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ಮುಂದೆ ಪರಿಸರಕ್ಕಾಗಿ ನಾವು ಸಂಘಟನೆಯ ಮುಖಂಡರು ಪ್ರತಿಭಟನೆ ನಡೆಸಿದರು. ಚಾಮುಂಡಿಬೆಟ್ಟದ ದೇವಾಲಯದ ಪಕ್ಕ ನಡೆಯುತ್ತಿರುವ ಕಾಮಗಾರಿ ಸ್ಥಳದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟಿಸುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮಹಿಷಾಸುರ ಪ್ರತಿಮೆ ಮುಂದೆ: ಪರಿಸರಕ್ಕಾಗಿ ನಾವು ಸಂಘಟನೆಯ ಪರಿಸರವಾದಿಗಳು ಚಾಮುಂಡಿಬೆಟ್ಟದಲ್ಲಿರುವ ಮಹಿಷಾಸುರ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿ, ಚಾಮುಂಡಿಬೆಟ್ಟದ ನೈಜ ಪರಿಸರ ಹಾಗೂ ಪಾವಿತ್ರ್ಯತೆ ಕಾಪಾಡುವಂತೆ ಒಕ್ಕೊರಲಿನಿಂದ ಆಗ್ರಹಿಸಿದರು. ಚಾಮುಂಡಿಬೆಟ್ಟದಲ್ಲಿ ಈಗಾಗಲೇ ದೊಡ್ಡ ದೊಡ್ಡ ಕಟ್ಟಡಗಳು ನಿರ್ಮಾಣಗೊಂಡಿವೆ. ಅಲ್ಲದೆ ವಸತಿ ಪ್ರದೇಶದಲ್ಲೂ ಹೆಚ್ಚಿನ ಮನೆ ನಿರ್ಮಿಸಲಾಗಿದೆ. ಇದರಿಂದ ಬೆಟ್ಟದ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬೆಟ್ಟದ ಕುಸಿತಕ್ಕೆ ನಾಂದಿಯಾಗಲಿದೆ. ಈ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿದರು.

ಅವೈಜ್ಞಾನಿಕ ಕಾಮಗಾರಿಯನ್ನು ನಿಲ್ಲಿಸದಿದ್ದರೆ, ಮುಂದಿನ ದಿನಗಳಲ್ಲಿ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ. ಬೆಟ್ಟದಲ್ಲಿರುವ ಪ್ರಾಣಿ–ಪಕ್ಷಿ, ಸಸ್ಯ ಸಂಕುಲಕ್ಕು ದಕ್ಕೆಯಾಗುವುದನ್ನು ತಡೆಗಟ್ಟಲು ಕಾಮಗಾರಿ ಸ್ಥಗಿತಗೊಳಿಸಬೇಕು. ಬೆಟ್ಟದ ನೈಜ ಪರಿಸ್ಥಿತಿ ಉಳಿಸಿಕೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ನಿರುಪಯುಕ್ತವಾಗಿವೆ ಕಟ್ಟಡಗಳು: 'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಯೋಜನೆಯ ಅವೈಜ್ಞಾನಿಕ ಕಾಮಗಾರಿಯಿಂದ ಇಡೀ ಚಾಮುಂಡಿ ಬೆಟ್ಟಕ್ಕೆ ದೊಡ್ಡ ಮಟ್ಟದ ಸಮಸ್ಯೆಯಾಗಲಿದೆ. ಕಾಂಕ್ರಿಟ್ ಕಾಡು ಮಾಡುವುದರಿಂದ ಪರಿಸರದ ಮೇಲೆ ದುಷ್ಪಾರಿಣಾಮ ಉಂಟಾಗಿ, ಜನರು ಪಶ್ಚಾತಾಪ ಪಡುವಂತಾಗಲಿದೆ. ಈಗಾಗಲೇ ಬೆಟ್ಟದಲ್ಲಿ ಕಟ್ಟಿರುವ ದೊಡ್ಡ ದೊಡ್ಡ ಕಟ್ಟಡಗಳು ಬಳಕೆಯಾಗದೇ ನಿರುಪಯುಕ್ತವಾಗಿ ಬಿದ್ದಿವೆ. ವಾಣಿಜ್ಯ ಮಳಿಗೆ ಕಟ್ಟಡ ಬಳಕೆಯಾಗುತ್ತಲೇ ಇಲ್ಲ. ಇದೀಗ ಮಂಟಪ ನಿರ್ಮಾಣ ಯಾವ ಪುರುಷಾರ್ಥಕ್ಕಾಗಿ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಪರಿಸರವಾದಿ ಭಾಮಿ ವಿ.ಶೆಣೈ, ಪರಿಸರಕ್ಕಾಗಿ ನಾವು ಸಂಘಟನೆಯ ಲೀಲಾ ಶಿವಕುಮಾರ್, ಶೋಭ ಶಿವಕುಮಾರ್, ಸುಗುಣ, ಸುಶೀಲ, ಶೈಲಜೇಶ್,ಸ್ಮಿತಾ, ಲೀಲಾ ವೆಂಕಟೇಶ್, ಮೈಸೂರು ಗ್ರಾಹಕ ಪರಿಷತ್ ಕಾರ್ಯದರ್ಶಿ ಪ್ರಭಾ ನಂದೀಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಕಾಮಗಾರಿ ಸ್ಥಳದ ಮುಂದೆ: ಚಾಮುಂಡಿಬೆಟ್ಟದ ದೇವಾಲಯದ ಪಕ್ಕ ನಡೆಸುತ್ತಿರುವ ಕಾಮಗಾರಿ ಸ್ಥಳದಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕಾಮಗಾರಿ ಅವೈಜ್ಞಾನಿಕವಾಗಿದೆ. ಬೆಟ್ಟದ ಪಾವಿತ್ರತೆ, ಧಾರ್ಮಿಕ ಮಹತ್ವ ಕಾಪಾಡಿಕೊಳ್ಳಲು ಪ್ರಸಾದ್ ಯೋಜನೆಯ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದರು.

ಯಾರಿಗೂ ಗೊತ್ತೇ ಇಲ್ಲ: ಇದೇ ವೇಳೆ ಬಿಜೆಪಿ ಮುಖಂಡ ಡಾ.ಸುಶ್ರೂತ್‌ಗೌಡ ಮಾತನಾಡಿ, ಪ್ರಸಿದ್ಧ ಪುಣ್ಯಕ್ಷೇತ್ರ ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆಯಲ್ಲಿ ನಡೆಸುತ್ತಿರುವ ಕಾಮಗಾರಿ ಬೆಟ್ಟದ ಅಧಃಪತನಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಬೆಟ್ಟದ ರಕ್ಷಣೆಗಾಗಿ ಅಭಿಯಾನ ಆರಂಭಿಸಲಾಗಿದೆ. ಅವೈಜ್ಞಾನಿಕ ಕಾಮಗಾರಿ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಧಾರ್ಮಿಕ ಕ್ಷೇತ್ರವನ್ನು ವ್ಯಾಪಾರೀಕರಣ ಮಾಡಲು ಹೊರಟಿರುವುದು ಖಂಡನೀಯ ಎಂದರು.

ಬೆಟ್ಟದಲ್ಲಿ ನಡೆಸುತ್ತಿರುವ ಅಭಿವೃದ್ಧಿ ಕಾಮಗಾರಿ ಬಗ್ಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮಾಹಿತಿ ಇದೆಯೋ ಇಲ್ಲವೋ ಅದೂ ಗೊತ್ತಿಲ್ಲ, ಇದರಲ್ಲಿ ಯಾರ ಕೈವಾಡ ಇದೆಯೋ ಗೊತ್ತಿಲ್ಲ. ಕಾಮಗಾರಿ ನಿಲ್ಲಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಮೈಸೂರು ರಕ್ಷಣಾ ವೇದಿಕೆ ಮೈ.ಕಾ.ಪ್ರೇಮ್ ಕುಮಾರ್, ಕನ್ನಡಪರ ಸಂಘಟನೆಯ ಡಿಪಿಕೆ ಪರಮೇಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ಪ್ರಥಮ ಬಾರಿಗೆ ಸಮಗ್ರ ರೊಬೊಟಿಕ್ ಶಸ್ತ್ರಚಿಕಿತ್ಸೆ



ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯು ಪ್ರಪ್ರಥಮ ಬಾರಿಗೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಕಾರ್ಯಕ್ರಮವನ್ನು ಆರಂಭಿಸಿದೆ.

ಮೈಸೂರು, ಜ.21– ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯು ಪ್ರಪ್ರಥಮ ಬಾರಿಗೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಕಾರ್ಯಕ್ರಮವನ್ನು ಆರಂಭಿಸಿದ್ದು, ಇದು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಆರೈಕೆಯಲ್ಲಿ ಈ ಭಾಗದಲ್ಲೇ ಮೈಲಿಗಲ್ಲಾಗಿದೆ.

ಈ ಕಾರ್ಯಕ್ರಮವು ಸಾಮಾನ್ಯ ಶಸ್ತ್ರಚಿಕಿತ್ಸೆ, ಮೂತ್ರಶಾಸ್ತ್ರ, ಕಾರ್ಡಿಯೋಥ್ರಾಸಿಕ್ ಮತ್ತು ನಾಳೀಯ ಶಸ್ತ್ರಚಿಕಿತ್ಸೆ (CTVS), ಇಎನ್‌ಟಿ, ಸ್ತ್ರೀರೋಗ ಶಸ್ತ್ರಚಿಕಿತ್ಸೆ, ಮೂಳೆಚಿಕಿತ್ಸೆ ಅಂಕೊಲಾಜಿ, ಜಠರಗರುಳಿನ ಮತ್ತು ಹೆಚ್‌ಪಿಬಿ ಸಂಬಂಧಿಸಿದಂತಹ ರೊಬೊಟಿಕ್ ನೆರವಿನ ಶಸ್ತ್ರಚಿಕಿತ್ಸೆಗಳನ್ನು ಒಂದೇ ಸೂರಿನಡಿ ಮಾಡಲಾಗುತ್ತದೆ. ರೊಬೊಟಿಕ್ ಶಸ್ತ್ರಚಿಕಿತ್ಸೆಯು ನಿಜವಾದ 3D ಹೈ–ಡೆಫಿನಿಷನ್‌ಅನ್ನು ನಿಖರವಾಗಿ ನೀಡುತ್ತದೆ. ಸಂಕೀರ್ಣ ಅಂಗರಚನಾ ಪ್ರದೇಶಗಳನ್ನೂ ಸುಲಭವಾಗಿ ಕೈಗೆ ಸಿಗುವಂತೆ ಮಾಡುತ್ತದೆ. ಜೊತೆಗೆ ಪ್ರಮುಖ ಅಂಗ ರಚನೆಗಳಿಗೆ ರಕ್ಷಣೆ ಒದಗಿಸುತ್ತದೆ. ಇದರಿಂದ ನೋವು ಕಡಿಮೆ ಜೊತೆಗೆ ರಕ್ತದ ನಷ್ಟ ಕಡಿತವಾಗುತ್ತದೆ. ಅಲ್ಲದೇ, ರೋಗಿಗಳಿಗೆ ತ್ವರಿತ ಚೇತರಿಕೆ ಸಾಧ್ಯವಾಗುತ್ತದೆ.

ಈ ವೇಳೆ ಮಾತನಾಡಿರುವ ಅಪೋಲೊ ಬಿಜಿಎಸ್ ಆಸ್ಪತ್ರೆಯ ವರಿಷ್ಠರು, ಈ ತಂತ್ರ ಜ್ಞಾನ ಪರಿಚಯಿಸುವ ಮೂಲಕ ಅಪೋಲೊ ಬಿಜಿಎಸ್ ಆಸ್ಪತ್ರೆಯು ವಿಶ್ವ ದರ್ಜೆಯ ಶಸ್ತ್ರಚಿಕಿತ್ಸಾ ತಂತ್ರಜ್ಞಾನವನ್ನು ಮೈಸೂರಿಗೂ ತರುವ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಚಿಕಿತ್ಸೆಗಾಗಿ ಮೆಟ್ರೋ ನಗರಗಳಿಗೆ ರೋಗಿಗಳು ಪ್ರಯಾಣಿಸುವ ಪ್ರಮೇಯವನ್ನು ಈ ಪ್ರಯತ್ನ ತಗ್ಗಿಸುತ್ತದೆ ಎಂದು ಹೇಳಿದರು.

ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸಕರ ಕಾರ್ಯವೈಖರಿಯು ಅಪ್ರತಿಮವಾಗಿರುತ್ತದೆ. ಇದರಿಂದ ರೋಗಿಗಳು ತ್ವರಿತವಾಗಿ ಚೇತರಿಸಿಕೊಳ್ಳಬಹುದು ಎಂದು ಅಪೋಲೊ ಆಸ್ಪತ್ರೆಗಳ ಕರ್ನಾಟಕ ರಾಜ್ಯ ಹಿರಿಯ ಉಪಾಧ್ಯಕ್ಷ ಎನ್.ಜಿ.ಭರತೀಶ ರೆಡ್ಡಿ ಹೇಳಿದರು.


ನಮ್ಮ ರೊಬೊಟಿಕ್ ಶಸ್ತ್ರಚಿಕಿತ್ಸಾ ತಂಡವು ನಿಖರ ಶಸ್ತ್ರಚಿಕಿತ್ಸೆ ನಡೆಸುವುದರೊಂದಿಗೆ ರೋಗಿಯ ಸುರಕ್ಷತೆ ಕಾಪಾಡುವ ಬದ್ಧತೆ ಹೊಂದಿದೆ. ನಾವು ಸುಧಾರಿತ ತಂತ್ರಜ್ಞಾನವನ್ನು ಪರಿಣತಿಯೊಂದಿಗೆ ಸಂಯೋಜಿಸುವ ಮೂಲಕ ಶಸ್ತ್ರಚಿಕಿತ್ಸೆಗಳನ್ನು ಕಡಿಮೆ ಗಾಯ ಹಾಗೂ ರೋಗಿಗಳನ್ನು ತ್ವರಿತವಾಗಿ ಚೇತರಿಸಿಕೊಳ್ಳುವಂತೆ ಮಾಡುವ ಗುರಿ ಹೊಂದಿದ್ದೇವೆ ಎಂದು ಅಪೋಲೊ ಬಿಜಿಎಸ್‌ಆಸ್ಪತ್ರೆಗಳ ರೋಬೋಟಿಕ್ ಶಸ್ತ್ರಚಿಕಿತ್ಸಕರ ತಂಡ ಹೇಳಿದೆ. ಈ ಕಾರ್ಯಕ್ರಮಕ್ಕೆ ತರಬೇತಿ ಪಡೆದ ರೋಬೋಟಿಕ್ ಶಸ್ತ್ರಚಿಕಿತ್ಸಕರು, ಅರಿವಳಿಕೆ ತಜ್ಞರು ಮತ್ತು ಕ್ಲಿನಿಕಲ್ ಸಿಬ್ಬಂದಿಯ ತಂಡದ ಬೆಂಬಲವಿದೆ. ಹೀಗಾಗಿ ಇದು ರೋಗಿಗಳ ಆರೈಕೆ ಮತ್ತು ಸುರಕ್ಷೆಯ ದೃಷ್ಟಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಮಾನದಂಡಗಳಿಗೆ ಸರಿಸಮಾನವಾಗಿದೆ

6ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದು:ಖತಪ್ತರು:
ಪತ್ನಿ: ಕಾವ್ಯಶ್ರೀ M.R.
ಮಗ: ಕೃತಿಕ್ S. ಗೌಡ
ಹಾಗೂ ಕುಟುಂಬವರ್ಗದವರು
ಶ್ಯಾಮ್. ಪಿ

ನಿಧನ



ಕೆ.ಸಿ. ನಟೇಶ್
ಕಾಂಗ್ರೆಸ್ ಮುಖಂಡರು
ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಗ್ರಾಮ

ಇವರು ಇಂದು ಬುಧವಾರ ಮೈಸೂರಿನ ಅಪೊಲೋ ಆಸ್ಪತ್ರೆಯಲ್ಲಿ ನಿಧನರಾದರು, ಮೃತರು ತಿ. ನರಸೀಪುರ ಪಿ –ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ರವರ ಬಾಮೈದ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ ಸಿ. ಕೃಷ್ಣಪ್ಪ ರವರ ಸಹೋದರರಾಗಿದ್ದು, ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು 22.01.2026 ಗುರುವಾರ ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಗ್ರಾಮದ ಅವರ ತೋಟದಲ್ಲಿ ಮಧ್ಯಾಹ್ನ 12 ಗಂಟೆಗೆ ಜರುಗಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಅವರು ಸಂತಾಪ ಸೂಚಿಸಿದ್ದಾರೆ.

4ನೇ ವರ್ಷದ ಪುಣ್ಯಸ್ಮರಣೆ



ಹೆಚ್.ಎನ್.ರವಿಕಿರಣ
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ ನಿನ್ನ ತಾಯಿ, ಅಣ್ಣ, ಅತ್ತಿಗೆ, ಮಾಮ ಹಾಗೂ ಪ್ರೀತಿಯ ಗೆಳೆಯರು

ಗೌರವಾನ್ವಿತ 6ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
ಪಿ. & ಎಸ್.ಸಿ. ಸಂಖ್ಯೆ: 06/2025
ಅರ್ಜಿದಾರರುಗಳು :ಚಿನ್ನಸ್ವಾಮಿ ಬಿನ್ ಲೇಟ್ ಸಿದ್ದಪ್ಪ
ವಯಸ್ಸು ಸುಮಾರು 56 ವರ್ಷ
ವಾಸ : ಕುಪ್ಪರವಳ್ಳಿ ಗ್ರಾಮ, ಬಿಳಿಗೆರೆ ಹೋಬಳಿ
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ
ವಿರುದ್ಧ
ಎದುರುದಾರರು : ಇಲ್ಲ

ಸಾರ್ವಜನಿಕ ಪ್ರಕಟಣೆ


ಮೇಲ್ಕಂಡ ಅರ್ಜಿದಾರರು ತಮ್ಮ ಅತ್ತೆಯವರಾದ (ತಂದೆಯ ಅಕ್ಕ) ದೇವೀರಮ್ಮ ಬಿನ್ ಯಳವರಹುಂಡಿ ಬಸಪ್ಪ ರವರು ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಕುಪ್ಪರವಳ್ಳಿ ಗ್ರಾಮದಲ್ಲಿ ದಿನಾಂಕ 01/02/1981 ರಂದು ಮರಣ ಹೊಂದಿರುತ್ತಾರೆ. ಅವರ ಜೀವಿತ ಕಾಲದಲ್ಲಿ ದಿನಾಂಕ 26/12/1974 ರಂದು ಈ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಅರ್ಜಿದಾರರ ಪರವಾಗಿ ವಿಲ್ ಮಾಡಿರುತ್ತಾರೆ. ಇದೀಗ ಮೇಲ್ಕಂಡ ಅರ್ಜಿದಾರರು ಖಾತೆ ವಗೈರೆಗಳಿಗಾಗಿ ಪ್ರೋಬೇಟ್ ಪಡೆಯಲು ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಯಾವುದೆ ತಂಟೆ ತಕರಾರು ಇದ್ದಲ್ಲಿ ದಿನಾಂಕ 28/2/2026 ರಂದು ಬೆಳಿಗ್ಗೆ 11.00 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ತಕರಾರು ಏನು ಇಲ್ಲವೆಂದು ತಿಳಿದು ಏಕಪಕ್ಷೀಯ ಆದೇಶವನ್ನು ಮಾಡುತ್ತದೆ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತುಗಳು

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಕುಪ್ಪರವಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 152/2ಬಿ1 ರ ವಿಸ್ತೀರ್ಣ 0.10 ಗುಂಟೆ ಮತ್ತು ಸರ್ವೆ ನಂ.152/2ಬಿ2 ರ ವಿಸ್ತೀರ್ಣ 0.06 ಗುಂಟೆ (ಹಳೆಸರ್ವೆ ನಂ.152/1ರ ವಿಸ್ತೀರ್ಣ 0.16 ಗುಂಟೆ) ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಸುಬ್ಬಪ್ಪ ವಗೈರೆ ರವರ ಜಮೀನು, ಪಶ್ಚಿಮಕ್ಕೆ : ಕಲ್ಮಹಳ್ಳಿ ನಂಜಮ್ಮನವರ ಜಮೀನು, ಉತ್ತರಕ್ಕೆ: ಮಾದಪ್ಪನ ಜಮೀನು, ದಕ್ಷಿಣಕ್ಕೆ : ಪ್ಯಾಲೇಸ್ ಜಮೀನು

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮೈಸೂರು

ಸಹಿ/– ಎಂ.ಮಹದೇವಸ್ವಾಮಿ
ಅರ್ಜಿದಾರರ ಪರ ವಕೀಲರು
ಮೈಸೂರು



ಚಿರಸ್ಮರಣೆ
ಸಿ. ಕೃಷ್ಣ
ಕಾಂಗ್ರೆಸ್ ಪಕ್ಷದ ಮುಖಂಡರು
ಮಂಚೇಗೌಡನಕೊಪ್ಪಲು, ಮೈಸೂರು
-ಕುಟುಂಬವರ್ಗ, ಹೋಟೆಲ್ ಕಲ್ಯಾಣಿ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ:ಮೈಅಪ್ರಾ/ವಕ–2/2025–26 ದಿನಾಂಕ: 17.11.2025

ಪತ್ರಿಕಾ ಪ್ರಕಟಣೆ

ಶ್ರೀ.ಹೆಚ್.ಕೆ.ಕೃಷ್ಣಮೂರ್ತಿ ಬಿನ್ ಲೇಟ್.ಕೇಶವ್ ಪಾಧ್ಯ ರವರಿಗೆ ಮೈಸೂರು ನಗರದ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ವತಿಯಿಂದ ಜೆ.ಸಿ.ಎಸ್.ಟಿ ಎಂ–ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ: 98/ಎಫ್ ಅಳತೆ 30 x 40 ಅಡಿ ನಿವೇಶನವು ಪ್ರಾಧಿಕಾರದಿಂದ ದಿನಾಂಕ:16.04.1992 ರಂದು ಮಂಜೂರಾಗಿರುತ್ತದೆ. ದಿನಾಂಕ: 15.05.1992 ರಂದು ಗುತ್ತಿಗೆ ಕರಾರು ಪತ್ರ ಪಡೆದು ನೊಂದಾಯಿಸಿ, ದಿ:22.05.1992 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ.ಹೆಚ್.ಕೆ.ಕೃಷ್ಣಮೂರ್ತಿ ರವರು ಶ್ರೀ.ಚಂದ್ರು ಬಿನ್ ಶ್ರೀ ಸುಬ್ಬೇಗೌಡ ರವರಿಗೆ 1ನೇ ಪುಸ್ತಕದ 4570ನೇ ಸಂಪುಟದಲ್ಲಿ 52–54ನೇ ಪುಟದಲ್ಲಿ 3126ನೇ ನಂಬರ್ ಆಗಿ ದಿನಾಂಕ:27.09.1995 ರಂದು ನೊಂದಾಯಿತ ಶುದ್ಧಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ನಂತರ ಮಹಾನಗರ ಪಾಲಿಕೆಯಲ್ಲಿ ಖಾತಾ ವರ್ಗಾವಣೆ ಮಾಡಲಾಗಿರುತ್ತದೆ.

ಸದರಿ ಕ್ರಯದಾರರಾದ ಶ್ರೀ.ಚಂದ್ರು ರವರು ದಿನಾಂಕ:25.04.2021 ರಂದು ಮರಣ ಹೊಂದಿರುವ ಬಗ್ಗೆ ಮೈಸೂರು ಮಹಾನಗರಪಾಲಿಕೆ ಮೈಸೂರು ಮರಣ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಹಾಗೂ ಉಪ ತಹಶೀಲ್ದಾರ್ ಕಸಬಾ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರು ನೀಡಿರುವ ಮೃತರ ಕುಟುಂಬ ಜೀವಂತ ಸದಸ್ಯರ ದೃಡೀಕರಣ ಪತ್ರದ RD5018882818795 ದಿನಾಂಕ:05.09.2023 ರಂದು ನೀಡಿರುವ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಸದರಿ ಜೀವಂತ ಸದಸ್ಯರ ದೃಡೀಕರಣ ಪತ್ರದಲ್ಲಿ ಲೇಟ್.ಚಂದ್ರು ರವರ ಧರ್ಮಪತ್ನಿಯಾದ ಶ್ರೀಮತಿ.ವಿ.ಎಸ್.ಸಾವಿತ್ರಿ ಹಾಗೂ ಇವರ ಮಕ್ಕಳುಗಳಾದ ಶ್ರೀಮತಿ.ಲೀನಾ ರೂಪೇಶ್ ಮತ್ತು ಶ್ರೀ.ಲೋಹಿತ್.ಸಿ ರವರುಗಳ ಹೆಸರು ನಮೂದಿಸಿದ್ದು, ಅದರಂತೆ ಜಂಟಿಯಾಗಿ ಪೌತಿ ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುವುದರಿಂದ. ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನದ ಪೌತಿ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ –2, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು



ಮೈಸೂರು ಮಿತ್ರ ಗುರುವಾರ 22 ಜನವರಿ 2026

ಜಿಲ್ಲೆಯ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಮುಂಬಡ್ತಿ


ಬಾರಿಕೆ ದಿನೇಶ್


ಐ.ಪಿ.ಮೇದಪ್ಪ

ಮಡಿಕೇರಿ: ಜಿಲ್ಲೆಯ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ ಒಳಾಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಎಸ್.ರಶ್ಮಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಬಾರಿಕೆ ದಿನೇಶ್ ಕುಮಾರ್ ಅವರಿಗೆ ಲೋಕಾಯುಕ್ತ ಎಸ್.ಪಿ. ಹುದ್ದೆಗೆ ಪದೋನ್ನತಿ ನೀಡಿ ಬೆಂಗಳೂರಿಗೆ ವರ್ಗಾಯಿಸಲಾಗಿದೆ. ಮೂಲತಃ ಭಾಗಮಂಡಲ ದವರಾದ ಬಾರಿಕೆ ದಿನೇಶ್ ಕುಮಾರ್ ಕಳೆದ ವರ್ಷ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬಂದಿದ್ದರು. ಈಗ ಇವರನ್ನು ಬೆಂಗಳೂರು ಲೋಕಾಯುಕ್ತದ ಪೊಲೀಸ್ ವರಿಷ್ಠಾಧಿಕಾರಿಯಾಗಿ ನಿಯೋಜಿಸಲಾಗಿದೆ.

ಡಿಎಸ್‌ಬಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿರುವ ಐ.ಪಿ.ಮೇದಪ್ಪ ಡಿವೈಎಸ್‌ಪಿ ಹುದ್ದೆಗೆ ಮುಂಬಡ್ತಿ ಪಡೆದಿದ್ದಾರೆ. ಇವರಿಗೆ 2020ನೇ ಏ.29ರಿಂದ ಅನ್ವಯ ಆಗುವಂತೆ ಮುಂಬಡ್ತಿ ನೀಡಲಾಗಿದೆ. 2005ರ ಫೆ.9ಕ್ಕೆ ಅನ್ವಯವಾಗುವಂತೆ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ ಹೊಂದಿದ್ದರು. 2020ರ ಸಾಲಿನಿಂದ ಡಿವೈಎಸ್‌ಪಿ ಹುದ್ದೆಯ ಬಡ್ತಿ ಬಾಕಿ ಉಳಿದಿದ್ದ ಹಿನ್ನೆಲೆಯಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹಾಗೂ ಇಲಾಖೆ ಅಧಿಕಾರಿಗಳ ಗಮನ ಸೆಳೆಯುವುದರ ಮೂಲಕ ಮುಂಬಡ್ತಿ ಮಾಡಿಸಿದ್ದಾರೆ.

ಮೂತ್ರಪಿಂಡ ಸಮಸ್ಯೆ ಪುರುಷರಲ್ಲಿ ಹೆಚ್ಚು

ಮೈಸೂರಿನ ಮಣಿಪಾಲ್ ಆಸ್ಪತ್ರೆ ಆರೋಗ್ಯ ತಜ್ಞರ ಅಭಿಮತ

ಮಡಿಕೇರಿ, ಜ.21–ಪ್ರತಿ ವರ್ಷ ದೇಶಾದ್ಯಂತ ಲಕ್ಷಾಂತರ ಪುರುಷರ ಪ್ರಾಸ್ಟೇಟ್ ಗ್ರಂಥಿ ಹಿಗ್ಗುವುದು, ಪ್ರಾಸ್ಟೇಟ್ ಕ್ಯಾನ್ಸರ್, ಅಧಿಕ ರಕ್ತದೊತ್ತಡಕ್ಕೆ ಸಂಬಂಧಿಸಿದ ಮೂತ್ರ ಪಿಂಡದ ಹಾನಿ ಮತ್ತು ದೀರ್ಘಕಾಲದ ಮೂತ್ರ ಪಿಂಡ ಕಾಯಿಲೆಗಳಂತಹ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆ ತಜ್ಞರು ಎಚ್ಚರಿಸಿದ್ದಾರೆ.

ಪುರುಷರ ಆರೋಗ್ಯದ ಬಗ್ಗೆ ಮುಕ್ತ ಚರ್ಚೆಗಳು ನಡೆಯುತ್ತಿಲ್ಲ. ಈ ಕಾಯಿಲೆಗಳ ಲಕ್ಷಣಗಳು ತೀವ್ರವಾಗುವ ಮುನ್ನವೇ ಎಚ್ಚರಿಕೆ ವಹಿಸುವುದು ಅತ್ಯಗತ್ಯ. 50 ವರ್ಷ ಮೇಲ್ಪಟ್ಟ ಪುರುಷರಲ್ಲಿ ಪ್ರೊಸ್ಟೇಟ್ ಗ್ರಂಥಿ ದೊಡ್ಡದಾಗುವ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಹಾಗೂ ಯುರಾಲಜಿ ಮತ್ತು ಆಂಡ್ರಾಲಜಿ ವಿಭಾಗದ ಕನ್ಸಲ್ಟೆಂಟ್ ಡಾ. ಕೆ.ಎ.ತಿಮ್ಮಯ್ಯ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಫಿಸಿಶಿಯನ್ ಹಾಗೂ ನೆಫ್ರಾಲಜಿ ವಿಭಾಗದ ಕನ್ಸಲ್ಟೆಂಟ್ ಡಾ. ವಿಪಿನ್ ಕಾವೇರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಮೈಸೂರಿನ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಪದೇ ಪದೇ ಮೂತ್ರ ವಿಸರ್ಜನೆ ಮಾಡುವುದು ಅಥವಾ ರಾತ್ರಿ ವೇಳೆ ಅತಿಯಾಗಿ ಬಾತ್‌ರೂಮ್‌ಗೆ ಹೋಗುವುದು ವಯಸ್ಸಾದ ಮೇಲೆ ಇದೆಲ್ಲಾ ಸಾಮಾನ್ಯ ಎಂದು ನಿರ್ಲಕ್ಷಿಸುತ್ತಾರೆ. 45 ವರ್ಷ ಮೇಲ್ಪಟ್ಟವರು ಮತ್ತು ಕುಟುಂಬದಲ್ಲಿ ಇಂತಹ ಕಾಯಿಲೆಯ ಹಿನ್ನೆಲೆ ಇರುವವರು ತಪ್ಪದೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕು. ಎಂದರು.

ಮೂತ್ರಪಿಂಡದ ಆರೋಗ್ಯದ ಕುರಿತು ಮಾಹಿತಿ ಹಂಚಿಕೊಂಡ ಡಾ. ವಿಪಿನ್ ಕಾವೇರಪ್ಪ, ಮಧುಮೇಹ ಮತ್ತು ರಕ್ತದೊತ್ತಡದಂತಹ ಸಮಸ್ಯೆಗಳು ಕಿಡ್ನಿ ಹಾನಿಗೆ ಪ್ರಮುಖ ಕಾರಣವಾಗುತ್ತಿವೆ. ಇಂತಹ ಸಮಸ್ಯೆಗಳು ಯಾವುದೇ ಲಕ್ಷಣವಿಲ್ಲದೆ ಮೂತ್ರಪಿಂಡದ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಬಹುದು.

40 ವರ್ಷ ದಾಟಿದ ಪುರುಷರು ಮತ್ತು ರೋಗದ ಲಕ್ಷಣವಿರುವವರು ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಅಂಶ ಹಾಗೂ ಕಿಡ್ನಿ ಕಾರ್ಯ ನಿರ್ವಹಣೆಯ ತಪಾಸಣೆಯನ್ನು ನಿರ್ಲಕ್ಷಿಸಬಾರದು. ಕಡಿಮೆ ಉಪ್ಪು ತಿನ್ನುವುದು, ಹೆಚ್ಚು ನೀರು ಕುಡಿಯುವುದು, ನೋವು ನಿವಾರಕ ಮಾತ್ರೆಗಳನ್ನು ವೈದ್ಯರ ಸಲಹೆ ಇಲ್ಲದೆ ಬಳಸುವುದನ್ನು ನಿಲ್ಲಿಸದೆ, ಕಾಲ ಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಮೂತ್ರಪಿಂಡವನ್ನು ಆರೋಗ್ಯವಾಗಿಟ್ಟುಕೊಳ್ಳಬಹುದು ಎಂದು ತಿಳಿಸಿದರು.

ಮಾದಕ ವಸ್ತು ಸೇವನೆ: ಮೂವರ ಬಂಧನ

ನಾಪೋಕ್ಲು, ಜ.21–ಪ್ರಯಾಣಿಕರ ಬಸ್ಸು ತಂಗುದಾಣದ ಸಮೀಪ ಮಾದಕ ವಸ್ತು ಸೇವನೆ ಮಾಡುತ್ತಿದ್ದ ಮೂವರು ಕಾರ್ಮಿಕರನ್ನು ಪೊಲೀಸರು ಬಂಧಿಸಿದ್ದಾರೆ.

ಇಲ್ಲಿಗೆ ಸಮೀಪದ ಬೇತು ಗ್ರಾಮದ ಕೂಡು ರಸ್ತೆಯಲ್ಲಿ ಮತ್ತು ಎಮ್ಮೆಮಾಡು, ಕೂರುಳಿ ಸಂಪರ್ಕಿಸುವ ರಸ್ತೆಯಲ್ಲಿರುವ ಪ್ರಯಾಣಿಕರ ಬಸ್ಸು ತಂಗುದಾಣದ ಸಮೀಪ ಗಾಂಜಾ ಸೇವನೆ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಇಲ್ಲಿಯ ಪೊಲೀಸರು ಕಾರ್ಯಾಚರಣೆ ನಡೆಸಿ ಅಸ್ಸಾಂನ ಧಾರಾಂಗ್ ಜಿಲ್ಲೆ ಯವರಾದ ನೂರ್ ಮೊಹಮ್ಮದ್ (25) ಸಾಧಿಕ್ ಆಲಿ (35) ಸೈದುಲ್ ರಹಮಾನ್(27) ಆರೋಪಿಗಳನ್ನು ಇಲ್ಲಿಯ ಪೊಲೀಸ್ ಠಾಣಾ ಅಧಿಕಾರಿ ಪಿ.ಜಿ ರಾಘವೇಂದ್ರ ಮತ್ತು ಸಿಬ್ಬಂದಿಗಳು ವಶಕ್ಕೆ ಪಡೆದಿದ್ದಾರೆ. ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮೂವರು ಗಾಂಜಾ ಸೇವನೆ ಮಾಡಿರುವ ಬಗ್ಗೆ ವೈದ್ಯರು ದೃಢಪಡಿಸಿರುವುದರಿಂದ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ.


ಬಂಧಿಸಲ್ಪಟ್ಟ ಆರೋಪಿಗಳಾದ ನೂರ್ ಮೊಹಮ್ಮದ್, ಸಾಧಿಕ್ ಆಲಿ ಮತ್ತು ಸೈದುಲ್ ರಹಮಾನ್

ಮಡಿಕೇರಿಗೆ ಆಗಮಿಸಿದ ಮಾಜಿ ಸೈನಿಕರ ಬೈಕ್ ರ್‍ಯಾಲಿ

ಮಡಿಕೇರಿ: ಭಾರತೀಯ ಸೇನೆಯ ಮದ್ರಾಸ್ ರೆಜಿಮೆಂಟ್ ಅಭಿಲೇಖಾಲಯವು ಎಂಆರ್‌ಸಿ ಮಾಜಿ ಸೈನಿಕರು ಹಾಗೂ ವೀರ ನಾರಿಯರೊಂದಿಗೆ ಪರಸ್ಪರ ಸಂಪರ್ಕ ಸುಗಮಗೊಳಿಸುವ ಗುರಿಯೊಂದಿಗೆ ಬೈಕ್ ರ್‍ಯಾಲಿ ಆಯೋಜಿಸಿತ್ತು.

ಬೈಕ್ ರ್‍ಯಾಲಿಯ ಮೂಲಕ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಕುಂದುಕೊರತೆ ಪರಿಹರಿಸುವ ನಿಟ್ಟಿನಲ್ಲಿ ನಗರಕ್ಕೆ ಬಂದ ರ್‍ಯಾಲಿಯಲ್ಲಿ 8 ಮಾಜಿ ಸೈನಿಕರು ಪಾಲ್ಗೊಂಡಿದ್ದರು. ಮಾಜಿ ಸೈನಿಕರ ಸಮಸ್ಯೆ ಬಗ್ಗೆ ಮಾಹಿತಿ ಪಡೆದು ಮತ್ತು ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ರ್‍ಯಾಲಿ ಆಯೋಜಿಸಿದ್ದು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಾರ್ಯಾಲಯದಲ್ಲಿ ಸಭೆ ನಡೆಸಿದರು.

ಅಭಿವೃದ್ಧಿ ಕಾಮಗಾರಿಗಳಿಗೆ 20 ಕೋಟಿ ಅನುದಾನ


ಶಾಸಕ ಎ.ಎಸ್.ಪೊನ್ನಣ್ಣ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದರು.

ವಿರಾಜಪೇಟೆ, ಜ.21–ಅಭಿವೃದ್ಧಿ ಕಾಮಗಾರಿಗಳಿಗಾಗಿ ಮುಖ್ಯಮಂತ್ರಿಗಳು 20 ಕೋಟಿ ಅನುದಾನ ನೀಡಿದ್ದಾರೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಇಲ್ಲಿನ ಶಿವಕೇರಿ ವಾರ್ಡ್‌ನಲ್ಲಿ 27 ಲಕ್ಷ ಅನುದಾನದಲ್ಲಿ ಮುಖ್ಯ ರಸ್ತೆಯಿಂದ ಶ್ರೀ ಮಾರಿಯಮ್ಮ ದೇವಸ್ಥಾನಕ್ಕೆ ನೂತನ ಕಾಂಕ್ರೀಟ್ ರಸ್ತೆ, ದುರ್ಗಿ ವಿಷ್ಣು ದೇವಸ್ಥಾನ ಬಳಿಯಿಂದ ಸಾರ್ವಜನಿಕ ರಸ್ತೆ ಅಭಿವೃದ್ಧಿ ಮತ್ತು ಇಲ್ಲಿನ ರುದ್ರಭೂಮಿಗೆ ರಸ್ತೆ ನಿರ್ಮಾಣ ಹಾಗೂ ಚರಂಡಿಗಳನ್ನು ಉದ್ಘಾಟಿಸಿದ ಬಳಿಕ ಮಾರಿಗುಡಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷ ಹಿಂದಿನಿಂದಲೂ ಬಡವರು ಹಿಂದುಳಿದ ಜನಾಂಗದ ಏಳಿಗೆಗೆ ಕೆಲಸ ಮಾಡುತ್ತಿದೆ. ಪುರಸಭೆಗೆ ಬಂದಿರುವ 20 ಕೋಟಿ ಅನುದಾನದಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಕಾಮಗಾರಿ ನಡೆಸುತ್ತಿದ್ದು, ಕೆಲವು ಪೂರ್ಣಗೊಂಡಿದ್ದರೆ, ಮತ್ತೆ ಕೆಲ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ. ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಈ ವೇಳೆ ಶಿವಕೇರಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವವಿರುವುದರಿಂದ ತೆರೆದ ಬಾವಿ ನಿರ್ಮಿಸಿಕೊಡುವಂತೆ ಸ್ಥಳೀಯ ನಿವಾಸಿಗಳು ಮನವಿ ಮಾಡಿಕೊಂಡಾಗ ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾಮಗಾರಿ ಮಾಡಿಸಿ ಕೊಡುವುದಾಗಿ ಶಾಸಕ ಪೊನ್ನಣ್ಣ ಭರವಸೆ ನೀಡಿದರು.

ವೇದಿಕೆಯಲ್ಲಿ ವಾರ್ಡ್ ಮಾಜಿ ಸದಸ್ಯೆ ಪೂರ್ಣಿಮಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಅಧ್ಯಕ್ಷ ಪಿ.ಎ.ಹನೀಫ್, ದಲಿತ ಸಮಿತಿ ಮುಖಂಡರಾದ ಗಾಯತ್ರಿ ನರಸಿಂಹ, ಎಚ್.ಜಿ. ಗೋಪಾಲ, ಗ್ರಾಮದ ಹಿರಿಯರಾದ ವಿಠಲ, ಸೂರಜ್, ರಾಕೇಶ್, ಸಾಗರ್, ಶ್ರೀನಿವಾಸ್, ಸಚೀನ್ ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಅಭಿಯಂತರ ಹೇಮಕುಮಾರ್, ಮಾಜಿ ಸದಸ್ಯ ಅತಿಫ್ ಮನ್ನ ಉಪಸ್ಥಿತರಿದ್ದರು. ಎ.ವಿ.ಮಂಜುನಾಥ್ ಸ್ವಾಗತಿಸಿದರು.

ಬೆಟ್ಟಗೇರಿ ಅಬ್ದುಲ್ಲಾ ನಿಧನ



ನಾಪೋಕ್ಲು, ಜ.21–ಸ್ಥಳೀಯ ಚೆರಿಯಪರಂಬು ನಿವಾಸಿ ಬೆಟ್ಟಗೇರಿ ಅಬ್ದುಲ್ಲಾ(59) ಅನಾರೋಗ್ಯದಿಂದ ಬುಧವಾರ ನಿಧನರಾದರು. ಮೃತರು ಪತ್ನಿ, ಐವರು ಪುತ್ರರು, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚೆರಿಯಪರಂಬು ಜುಮಾ ಮಸೀದಿಯ ಖಬರ್ ಸ್ಥಾನದಲ್ಲಿ ಜರುಗಿತು.

ಧರ್ಮಸ್ಥಳ ಸಂಸ್ಥೆಯಿಂದ ಮಹಿಳೆಯರ ಸಬಲೀಕರಣ, ಜಾಗೃತಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಚಿನಕುರಳಿ, ಜ.21– ಗ್ರಾಮೀಣ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಜೊತೆಗೆ ಅವರನ್ನು ಜಾಗೃತರನ್ನಾಗಿ ಮಾಡುವ ಕೆಲಸವನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಗ್ರಾಮದ ಶ್ರೀರಾಮೇಶ್ವರ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಡೆದ ಸಾಮೂಹಿಕ ಗಣಹೋಮ, ಶಿವಹೋಮ, ಶಿವಬಿಲ್ವಾರ್ಚನೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕುಟುಂಬದಲ್ಲಿ ಹೆಣ್ಣು ಮಕ್ಕಳು ಜಾಗೃತರಾದರೇ ಇಡೀ ಕುಟುಂಬವೇ ಜಾಗೃತವಾಗುತ್ತದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಅಸ್ತಿತ್ವಕ್ಕೆ ಬಂದ ಬಳಿಕ ಗ್ರಾಮೀಣ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು ಆರ್ಥಿಕವಾಗಿ ಸದೃಢರಾಗಿದ್ದಾರೆ ಎಂದರು.

2006ರಲ್ಲಿ ನಾನು ಶಾಸಕನಾಗಿದ್ದಾಗ ಬೇಬಿ ಬೆಟ್ಟದಲ್ಲಿ ನಡೆದ ಸಾಮೂಹಿಕ ಸರಳ ವಿವಾಹಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಆಹ್ವಾನಿಸಿದ್ದ ವೇಳೆ ನಾನು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕಾರ್ಯಕ್ರಮ ರೂಪಿಸಬೇಕೆಂದು ಮನವಿ ಮಾಡಿದ್ದೆ. ಆದಾದ ಆರೇಳು ವರ್ಷದ ಬಳಿಕ ಅವರು ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆರಂಭಿಸಿ ಉತ್ತಮ ಕಾರ್ಯಕ್ರಮಗಳನ್ನು ಗ್ರಾಮೀಣ ಜನರಿಗೆ ನೀಡಿದರು. 2018ರಲ್ಲಿ ಸಣ್ಣ ನೀರಾವರಿ ಸಚಿವನಾಗಿ ಕೆಲಸ ಮಾಡುವ ವೇಳೆ ಧರ್ಮಸ್ಥಳ ಸಂಸ್ಥೆ ಮೂಲಕ ವೀರೇಂದ್ರ ಹೆಗ್ಗಡೆ ಅವರು ಕೆರೆಗಳ ಜೀರ್ಣೋದ್ಧಾರ ಮಾಡುವ ಹೊಸ ಕಾರ್ಯಕ್ರಮ ಜಾರಿಗೊಳಿಸಿದ್ದರು. ಆ ವೇಳೆ ನನ್ನ ಸಣ್ಣ ನೀರಾವರಿ ಇಲಾಖೆಯಿಂದ 92 ಕೋಟಿ ಅನುದಾನ ಮಂಜೂರು ಮಾಡಿ ಕೆರೆಗಳ ಅಭಿವೃದ್ಧಿಗೆ ನೆರವಾದೆ. ಬಳಿಕ ಧರ್ಮಸ್ಥಳ ಸಂಸ್ಥೆ ನೂರಾರು ಕೋಟಿ ವೆಚ್ಚ ಮಾಡಿ ರಾಜ್ಯದ ವಿವಿಧೆಡೆ ಕೆರೆಗಳ ಜೀರ್ಣೋದ್ಧಾರ ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲೂ ಹಲವು ಕೆರೆಗಳ ಅಭಿವೃದ್ಧಿಯಾಗಿದೆ. ಜೊತೆಗೆ ದೇವಸ್ಥಾನ, ಡೇರಿ ಕಟ್ಟಡ ಅಭಿವೃದ್ಧಿಗೂ ಹಣ ನೀಡಿದ್ದಾರೆ ಎಂದರು.


ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಧರ್ಮಸ್ಥಳ ಸಂಸ್ಥೆ ಮಹಿಳೆಯರ ಸಾಂಸ್ಕೃತಿಕ ಮತ್ತು ಚಟುವಟಿಕೆಗೂ ಆದ್ಯತೆ ನೀಡಬೇಕು. ಹೀಗಾಗಿ ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟ ಆಯೋಜಿಸಿದ ವಿಜೇತರಿಗೆ ಚಿನ್ನದ ಬಹುಮಾನ ನೀಡುವ ಕೆಲಸ ಮಾಡಬೇಕು. ಈ ಕಾರ್ಯಕ್ರಮಕ್ಕೆ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದ ನಾಗಮ್ಮ ಲೇ.ನಿಂಗರಾಜು ಅವರ ಪುತ್ರ ಸಿ.ಎನ್.ಅಭಿಷೇಕ್ ಮೈಸೂರು ವಿವಿಯಲ್ಲಿ 7 ಚಿನ್ನದ ಪದಕ ಪಡೆದು ನಮ್ಮೂರಿಗೆ ಕೀರ್ತಿ ತಂದಿದ್ದಾರೆ. ಗ್ರಾಮದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಆತನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಿಂದ ಉಚಿತವಾಗಿ ಲ್ಯಾಪ್‌ಟಾಪ್ ನೀಡಿದ್ದೇವೆ. ಜೊತೆಗೆ ವಿದ್ಯಾರ್ಥಿ ಐಐಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಶಿಕ್ಷಣ ಪಡೆಯಬೇಕು ಎಂಬ ಅಭಿಲಾಷೆ ವ್ಯಕ್ತಪಡಿಸಿದ್ದು, ನಾನು ಆತನ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತೇನೆ ಎಂದು ಭರವಸೆ ನೀಡಿದರು.

ಸಂಸ್ಥೆ ಜಿಲ್ಲಾ ನಿರ್ದೇಶಕಿ ಮಮತಾರಾವ್ ಮಾತನಾಡಿ, ರಾಜ್ಯದಲ್ಲಿ 6.5 ಸ್ವಸಹಾಯ ಸಂಘಗಳಿದ್ದು, 55 ಲಕ್ಷ ಸದಸ್ಯರಿದ್ದಾರೆ. ಈ ಪೈಕಿ 50 ಲಕ್ಷ ಮಹಿಳಾ ಸದಸ್ಯರಿದ್ದಾರೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು. 7 ಚಿನ್ನದ ಪದಕ ಪಡೆದ ಸಿ.ಎನ್.ಅಭಿಷೇಕ್ ಅವರನ್ನು ಅಭಿನಂದಿಸಲಾಯಿತು. ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲ ಗೌಡ, ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಸಿ.ಎ.ಲೋಕೇಶ್, ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯರಾದ ಹೆಚ್.ಸಿ.ಧನಂಜಯ್, ಶಾಂತಲಾ ರಾಮಕೃಷ್ಣೇಗೌಡ, ಹೆಚ್.ಆರ್.ಧನ್ಯಕುಮಾರ್, ಸಿ.ಡಿ.ಮಹದೇವು ಸೇರಿದಂತೆ ಹಲವರಿದ್ದರು.

6 ತಾಲೂಕಿನಲ್ಲಿ 2013ರಲ್ಲಿ ಸಂಘ ಆರಂಭಗೊಂಡಿತು. ಇಲ್ಲಿವರೆಗೆ 6200 ಸ್ವಸಹಾಯ ಸಂಘಗಳು ಸ್ಥಾಪನೆಯಾಗಿದ್ದು, 42 ಕೋಟಿ ರೂ. ಉಳಿತಾಯ ಹಣ ಸಂಗ್ರಹವಾಗಿದೆ. 1500 ಕೋಟಿಗೂ ಅಧಿಕ ಹಣ ವಿನಿಯೋಗ ಮಾಡಿದೆ. ತಾಲೂಕಿನ 74 ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ 1.78 ಕೋಟಿ ಹಾಗೂ 54 ಡೇರಿಗಳ ಕಟ್ಟಡ ಅಭಿವೃದ್ಧಿಗೆ 1.24 ಕೋಟಿ ಅನುದಾನ ನೀಡಲಾಗಿದ್ದು, 8 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. **–ಯಶವಂತ್, ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ.**

ಗಿಲ್ಲಿ ನಟನಿಂದ ಮಂಡ್ಯ ಕೀರ್ತಿ ಅಂತಾರಾಷ್ಟ್ರೀಯ ಮಟ್ಟಕ್ಕೆ


ಮಂಡ್ಯದಲ್ಲಿ ಕಲಾವಿದರನ್ನು ಅಭಿನಂದಿಸಲಾಯಿತು.

ಮಂಡ್ಯ, ಜ.21– ಬಿಗ್‌ಬಾಸ್ ಸೀಸನ್–12ರಲ್ಲಿ ಗೆಲುವು ಸಾಧಿಸುವ ಮೂಲಕ ಗಿಲ್ಲಿ ನಟ (ನಟರಾಜ್) ಮಂಡ್ಯದ ಕೀರ್ತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂದು ತಾಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ಬಣ್ಣಿಸಿದರು.

ನಗರದ ಕಲಾಮಂದಿರದ ಆವರಣದಲ್ಲಿ ದೆಹಲಿಯ ಒಕ್ಕಲಿಗರ ಸಂಘ ಆಯೋಜಿಸಿರುವ ಸಾಂಸ್ಕೃತಿಕ ಸಮ್ಮಿಲನ ಕಾರ್ಯಕ್ರಮಕ್ಕೆ ತೆರಳುತ್ತಿರುವ ಕಲಾವಿದರನ್ನು ಅಭಿನಂದಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆ ಹಲವು ಹೋರಾಟಗಳಿಗೆ ಪ್ರಥಮವಾಗಿದ್ದು, ಸಾಂಸ್ಕೃತಿಕ ಕ್ಷೇತ್ರದಲ್ಲೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇತ್ತೀಚೆಗೆ ಬಿಗ್‌ಬಾಸ್‌ನಲ್ಲಿ ವಿಜೇತರಾದ ಗಿಲ್ಲಿ ಅವರ ಕಲೆ ಇಡೀ ರಾಷ್ಟ್ರದ ಗಮನವನ್ನೇ ಸೆಳೆದಿದೆ. ದೇಶ ವಿದೇಶಗಳಿಂದಲೂ ಅವರಿಗೆ ಮತ ಚಲಾವಣೆಯಾಗಿರುವುದು ಅವರ ಕಲೆಗೆ ಸಾಕ್ಷಿ ಎಂದರು.

ದೆಹಲಿಯ ಒಕ್ಕಲಿಗರ ಸಂಘ ಮಂಡ್ಯದ ಕಲಾವಿದರನ್ನು ಆಯ್ಕೆ ಮಾಡಿರುವುದು ಅಭಿನಂದನೀಯ. ಜಿಲ್ಲೆಯ ಕಲಾವಿದರ ಪ್ರತಿಭೆಯನ್ನು ಗುರುತಿಸಿ ಅವಕಾಶ ಕಲ್ಪಿಸಿರುವುದು ಉತ್ತಮ ಬೆಳವಣಿಗೆ. ಈ ಕಲಾವಿದರು ಅತ್ಯುತ್ತಮ ಪ್ರದರ್ಶನ ನೀಡಿ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಆಶಿಸಿದರು.

ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಅಧ್ಯಕ್ಷ ಮಂಗಲ ಎಂ.ಯೋಗೀಶ್ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ವಕ್ತಾರ ಸಿ.ಎಂ.ದ್ಯಾವಪ್ಪ, ಡಿ.ದೇವರಾಜ ಅರಸು ವೇದಿಕೆ ಅಧ್ಯಕ್ಷ ಸಂದೇಶ್, ನಿರ್ದೇಶಕ ಗೊರವಾಲೆ ಮಹೇಶ್, ಜಾನಪದ ಕಲಾವಿದರಾದ ಗೊರವಾಲೆ ರುದ್ರಪ್ಪ, ಮುಖಂಡರಾದ ದೇವರಾಜ್ ಕೊಪ್ಪ, ಲಿಂಗಪ್ಪ, ಪರಮೇಶ್, ಪ್ರದೀಪ್ ಇತರರಿದ್ದರು.

ಇದೇ ವೇಳೆ ಕಲಾವಿದರಾದ ಸಂತೆಕಸಲಗೆರೆ ಬಸವರಾಜು, ಹನಿಯಂಬಾಡಿ ಶೇಖರ್, ಕಿರಣ್‌ಕುಮಾರ್, ನಾಗೇಶ್, ಶಶಾಂಕ್, ಪ್ರೇಮಕುಮಾರಿ, ವೈರಮುಡಿ ಇತರರನ್ನು ಅಭಿನಂದಿಸಿ ಬೀಳ್ಕೊಡಲಾಯಿತು.

ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಿರಿ

ಶ್ರೀರಂಗಪಟ್ಟಣ, ಜ.21– ಸಹಕಾರಿ ಸಂಘಗಳಲ್ಲಿರುವ ಆದಾಯದ ಮೂಲಗಳನ್ನು ಬಳಸಿಕೊಂಡು ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ಶಾಸಕ ರಮೇಶ್‌ಬಾಬು ತಿಳಿಸಿದರು.

ತಾಲೂಕಿನ ಬೆಳಗೊಳ ಕೃಷಿ ಪತ್ತಿನ ಸಹಕಾರ ಸಂಘದ ನವೀಕರಣಗೊಂಡ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಬೆಳಗೊಳ ಸಹಕಾರ ಸಂಘ ಈ ಭಾಗದ ರೈತರಿಗೆ ಆಸರೆಯಾಗಿದೆ. ರೈತರಿಗೆ ಅಗತ್ಯವಿರುವ ಗೊಬ್ಬರ ಸೇರಿದಂತೆ ಕೃಷಿ ಪರಿಕರಗಳ ದಾಸ್ತಾನು ಮತ್ತು ವಿತರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಸಂಘದ ಅಭಿವೃದ್ಧಿಗೆ ಸಹಕಾರ ಇಲಾಖೆ ಜೊತೆಗೆ ನನ್ನ ವೈಯಕ್ತಿಕ ಸಹಕಾರವೂ ಸದಾ ಇರುತ್ತದೆ ಎಂದು ಭರವಸೆ ನೀಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಗಿರೀಶ್, ಪೀಕಾರ್ಡ್ ಬ್ಯಾಂಕ್ ನಿರ್ದೇಶಕ ರವೀಶ್, ಗ್ರಾಪಂ ಅಧ್ಯಕ್ಷೆ ಸವಿತಾ, ಪಿಎಸಿಎಸ್ ಅಧ್ಯಕ್ಷೆ ಸುಪ್ರಿಯಾ, ಉಪಾಧ್ಯಕ್ಷ ಸಿದ್ದರಾಜು, ನಿರ್ದೇಶಕರಾದ ಬಿ.ಕೆ.ಪುಟ್ಟಸ್ವಾಮಿ, ಬಿ.ವಿ.ಹರೀಶ್, ನಾಗೇಂದ್ರ, ಲಕ್ಷ್ಮಿ, ಎಂಡಿಸಿಸಿ ಬ್ಯಾಂಕ್ ಸೂಪರ್‌ವೈಸರ್ ಕಿರಣ್ ಕುಮಾರ್, ಸಂಘದ ಮ್ಯಾನೇಜರ್ ಶಿವಕುಮಾರ್, ತಾಪಂ ಮಾಜಿ ಸದಸ್ಯ ಬಿ.ಎಂ.ಸ್ವಾಮಿಗೌಡ, ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಬಿ.ವಿ.ಸುರೇಶ್, ಪುಟ್ಟರಾಜು, ರವಿಕುಮಾರ್, ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ್, ಪಿಡಿಓ ಕುಳ್ಳೇಗೌಡ, ಯಜಮಾನರಾದ ಶ್ರೀನಿವಾಸೇಗೌಡ, ವಿಷಕಂಠೇಗೌಡ ಇತರರಿದ್ದರು.


ಸಹಕಾರ ಸಂಘದ ಕಚೇರಿಯನ್ನು ಶಾಸಕ ರಮೇಶ್‌ಬಾಬು ಉದ್ಘಾಟಿಸಿದರು.

ಚಾಮರಾಜನಗರದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ

ಒತ್ತಡ ನಿವಾರಣೆಗೆ ಕ್ರೀಡಾಕೂಟ ಸಹಕಾರಿ: ಎಆರ್‌ಕೆ


ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಚಾಮರಾಜನಗರ, ಜ.21– ಸರ್ಕಾರಿ ನೌಕರರು ನಿತ್ಯ ಒತ್ತಡದಲ್ಲಿ ಕಾರ್ಯ ನಿರ್ವಹಿಸುವುದರಿಂದ ಕ್ರೀಡೆಯಲ್ಲಿ ಪಾಲ್ಗೊಂಡು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ವತಿಯಿಂದ 2 ದಿನಗಳ ಕಾಲ ನಡೆಯುವ ಚಾಮರಾಜನಗರ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಚಾಮರಾಜನಗರ ಸಾಂಸ್ಕೃತಿಕ ಕಲೆಗಳ ತವರೂರು. ಕಲೆ ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಕ್ರೀಡಾಕೂಟ ಆಯೋಜನೆ ಸಂತಸ ತಂದಿದೆ. ಸರ್ಕಾರಿ ನೌಕರರು ಪ್ರತಿದಿನ ಒತ್ತಡದೊಂದಿಗೆ ಕೆಲಸ ಮಾಡುವ ಅನಿವಾರ್ಯತೆ ಎದುರಾಗಿದೆ. ನೌಕರರಿಗೂ ವೈಯಕ್ತಿಕ ಬದುಕಿದೆ. ಇದನ್ನು ಮನಗಂಡಿರುವ ರಾಜ್ಯ ಸರ್ಕಾರ ಸರ್ಕಾರಿ ನೌಕರರು ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದೆ ಎಂದರು.

ಸರ್ಕಾರಿ ನೌಕರರಿಗೆ ಇದು ಕ್ರೀಡಾ ಉತ್ಸವ. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ನೌಕರರು ದೇಹವನ್ನು ಸದೃಢವಾಗಿಟ್ಟುಕೊಳ್ಳಬೇಕು. ನೌಕರರು ಪ್ರತಿದಿನ ಕ್ರೀಡೆಯಲ್ಲಿ ತೊಡಗುವುದರಿಂದ ದೇಹ ಮತ್ತು ಮನಸ್ಸು ಸಮಸ್ಥಿತಿಗೆ ಬರಲಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸಿ.ಎನ್.ರೇಣುಕಾದೇವಿ ಮಾತನಾಡಿ, ಸದಾ ಒತ್ತಡದಲ್ಲಿರುವ ಸರ್ಕಾರಿ ನೌಕರರು ಒತ್ತಡದಿಂದ ಮುಕ್ತರಾಗಲು ಈ ಕ್ರೀಡಾಕೂಟವನ್ನು ಶಿಸ್ತುಬದ್ಧವಾಗಿ ಆಯೋಜಿಸಲಾಗಿದೆ. ಸರ್ಕಾರಿ ನೌಕರರು ಕ್ರೀಡಾ ಮನೋಭಾವನೆ ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಪಂ ಸಿಇಓ ಮೋನಾರೋತ್ ಪಥಸಂಚಲನ ವಂದನೆ ಸ್ವೀಕರಿಸಿದರು. ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಕ್ರೀಡಾಜ್ಯೋತಿ ಸ್ವೀಕರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಡಿಸಿ ಜವರೇಗೌಡ, ಎಸ್ಪಿ ಶಶಿಧರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ್, ಸಂಘದ ಜಿಲ್ಲಾ ಕಾರ್ಯದರ್ಶಿ ಡಿ.ಎನ್.ಭರತ್ ಭೂಷಣ, ಖಜಾಂಚಿ ಶಿವಕುಮಾರಯ್ಯ, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ರಾಜ್ಯ ಪರಿಷತ್ ಸದಸ್ಯ ನಟರಾಜು, ಗೌರವಾಧ್ಯಕ್ಷ ಎಸ್.ಮಹದೇವಯ್ಯ, ರಾಜ್ಯ ಜಂಟಿ ಕಾರ್ಯದರ್ಶಿ ಬಾಲ ಸುಬ್ರಹ್ಮಣ್ಯಂ, ಸಂಘಟನಾ ಕಾರ್ಯದರ್ಶಿ ಭವಾನಿದೇವಿ, ತಾಲೂಕು ಪ್ರಾಥಮಿಕ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ರಾಜ್ಯ ಸಹ ಕಾರ್ಯದರ್ಶಿ ಗುರುಸ್ವಾಮಿ, ವೀರಭದ್ರಸ್ವಾಮಿ, ಹಿರಿಯ ಜಿಲ್ಲಾ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಪ್ರಕಾಶ್, ಡಾ.ಮಹೇಶ್, ತಾಲೂಕು ಅಧ್ಯಕ್ಷರಾದ ಗುಂಡ್ಲುಪೇಟೆ ಪ್ರಸಾದ್, ಯಳಂದೂರು ಮಹೇಶ್, ಕೊಳ್ಳೇಗಾಲ ಜೋಸೆಫ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಹಾಗೂ ತಾಲೂಕು ಶಾಖೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಜರಿದ್ದರು.

ನಾಳೆ ಉಪನ್ಯಾಸ ಕಾರ್ಯಕ್ರಮ

ಚಾಮರಾಜನಗರ, ಜ.21– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ ಸಹಯೋಗದಲ್ಲಿ ಡಿವಿಜಿ ಉಪನ್ಯಾಸ ಮಾಲೆ–3 ಅಡಿ 'ನಮ್ಮ ಸಂವಿಧಾನ' ಎಂಬ ವಿಷಯವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಜ.23 ರಂದು ನಗರದಲ್ಲಿ ಹಮ್ಮಿಕೊಂಡಿದೆ.


ನಗರದ ಪತ್ರಕರ್ತರ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಕೀಲರಾದ ವಿರೂಪಾಕ್ಷ ಅವರು ನಮ್ಮ ಸಂವಿಧಾನ ಕುರಿತು ವಿಶೇಷ ಉಪನ್ಯಾಸ ನೀಡುವರು. ಸಾಹಿತಿ ಕೆ.ವೆಂಕಟರಾಜು ಪ್ರಾಸ್ತಾವಿಕವಾಗಿ ಮಾತನಾಡುವರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಉಪಸ್ಥಿತರಿರುವರು. ಪತ್ರಕರ್ತರು ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಶಾರ್ಟ್ ಸರ್ಕ್ಯೂಟ್: ಮನೆ, ಲಕ್ಷಾಂತರ ರೂ., ಚಿನ್ನಾಭರಣ ಭಸ್ಮ

ಕೊಳ್ಳೇಗಾಲ, ಜ.21– ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಮನೆ ಹಾಗೂ ಲಕ್ಷಾಂತರ ರೂ. ಮತ್ತು ಚಿನ್ನಾಭರಣ ಭಸ್ಮವಾಗಿರುವ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಮುಳ್ಳೂರು ಗ್ರಾಮದ ನಿವಾಸಿಯೂ ಆದ ಗ್ರಾಪಂ ಸದಸ್ಯ ಮಹೇಶ್ ಅವರ ಮನೆ ಭಸ್ಮವಾಗಿರುವುದು. ಅಲ್ಲದೇ ಮನೆಯಲ್ಲಿದ್ದ 40 ಗ್ರಾಂ ಚಿನ್ನಾಭರಣ, 2 ಲಕ್ಷ ರೂ., ಟಿವಿ, ಫ್ಯಾನ್ ಸೇರಿದಂತೆ ದಿನಬಳಕೆಯ ವಸ್ತುಗಳು ಸುಟ್ಟು ಹೋಗಿದೆ. ಬುಧವಾರ ಬೆಳಗ್ಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಮನೆಗೆ ಬೆಂಕಿ ಆವರಿಸಿಕೊಂಡಿದೆ. ಈ ವೇಳೆ ಸ್ಥಳದಲ್ಲಿದ್ದ ಸಾರ್ವಜನಿಕರು ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ವಿಷಯ ಮುಟ್ಟಿಸಿದರು. ಆದರೆ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಮಿಸಿ ಬೆಂಕಿ ನಂದಿಸುವುರೊಳಗೆ ಮನೆಯಲ್ಲಿದ್ದ ಲಕ್ಷಾಂತರ ರೂ., ಚಿನ್ನಾಭರಣ, ದಾಖಲಾತಿಗಳು ಹಾಗೂ ದಿನಬಳಕೆಯ ವಸ್ತುಗಳು ಸೇರಿದಂತೆ ಎಲ್ಲವೂ ಬೆಂಕಿಗೆ ಆಹುತಿಯಾಗಿದೆ. ಈ ವೇಳೆ ಮನೆಯಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಸ್ಥಳಕ್ಕಾಗಮಿಸಿದ ಗ್ರಾಪಂ ಅಧ್ಯಕ್ಷೆ ಕಮಲಮ್ಮ ಹಾಗೂ ಸದಸ್ಯರು ಮತ್ತು ಮುಖಂಡರು ಪರಿಶೀಲನೆ ನಡೆಸಿ ಮಾತನಾಡಿ, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಮನೆ ಸೇರಿದಂತೆ ಚಿನ್ನಾಭರಣ ಸುಟ್ಟು ಹೋಗಿ ಸಾಕಷ್ಟು ನಷ್ಟ ಸಂಭವಿಸಿದೆ. ಹೀಗಾಗಿ ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸುವ ಜೊತೆಗೆ ಗ್ರಾಪಂ ಸದಸ್ಯ ಮಹೇಶ್ ಅವರ ಕುಟುಂಬ ಉಳಿದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು. ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಶಾರ್ಟ್ ಸರ್ಕ್ಯೂಟ್‌ಗೆ ಮನೆ ಭಸ್ಮವಾಗಿರುವುದು.

ಗುಂಡ್ಲುಪೇಟೆ ಅಭಿವೃದ್ಧಿಗೆ 5 ಕೋಟಿ ಬಿಡುಗಡೆ: ಪುರಸಭೆ ಮುಖ್ಯಾಧಿಕಾರಿ


ಪುರಸಭೆ ಮುಖ್ಯಾಧಿಕಾರಿ ಎಸ್.ಶರವಣ ಪಟ್ಟಣದ ವಿವಿಧೆಡೆ ಪರಿಶೀಲನೆ ನಡೆಸಿದರು.

ಗುಂಡ್ಲುಪೇಟೆ, ಜ.21(ಸೋಮ್.ಜಿ)– ಪಟ್ಟಣದ ಅಭಿವೃದ್ಧಿ ಕಾಮಗಾರಿಗಳಿಗೆ 5 ಕೋಟಿ ರೂ. ಮಂಜೂರಾಗಿದ್ದು, ಶೀಘ್ರದಲ್ಲೇ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಪುರಸಭೆ ಮುಖ್ಯಾಧಿಕಾರಿ ಎಸ್.ಶರವಣ ತಿಳಿಸಿದ್ದಾರೆ.

ಪಟ್ಟಣದ ವಿವಿಧ ಭಾಗಗಳಿಗೆ ಕೆಆರ್‌ಐಎಲ್ ಕಾರ್ಯಪಾಲಕ ಇಂಜಿನಿಯರ್ ತಿಪ್ಪಾರೆಡ್ಡಿ ಮತ್ತು ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣ ವ್ಯಾಪ್ತಿ ಊಟಿ ರಸ್ತೆಯ ಹೆದ್ದಾರಿಯಲ್ಲಿ 2 ಬದಿಯಲ್ಲಿ ಪಾದಚಾರಿ ಮಾರ್ಗ ನಿರ್ಮಾಣ, ರೈಲಿಂಗ್, ವಾಲ್ಮೀಕಿ ಭವನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳ ಪರಿಶೀಲನೆ ನಡೆಸಲಾಗಿದೆ ಎಂದರು.

ಪುರಸಭೆ ಇಂಜಿನಿಯರ್ ಮಂಜುನಾಥ್, ಅನುಪಮಾ ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಾರಾಟಕ್ಕಿದೆ
ಮನೆ ಮಾರಾಟಕ್ಕಿದೆ ಮತ್ತು ಕರ್ಮಷಿಯಲ್ Property ದಟ್ಟಗಳ್ಳಿಯಲ್ಲಿ 20x30, 30x40, 40x60 ಮನೆ/ನಿವೇಶನ ಮಾರುವವರು ಕೊಳ್ಳುವವರು ಮತ್ತು ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ. ಬಿಳಿಕೆರೆ ಹತ್ತಿರ ಜಮೀನು ಮಾರಾಟಕ್ಕೆ ಇದೆ.
9611539340

MUDA ALLOTED SITE FOR SALE
30'x40' N/F
Vijayanagara 4th Stage Near NPS School.
Call : 9886048471

ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್(ಪುರುಷರು) ಬನ್ನಿಮಂಟಪ, ಶ್ರೀನಿವಾಸ ಟಾಕೀಸ್ ಪಕ್ಕ, ವಿಜಯನಗರ, ಜಯಲಕ್ಷ್ಮಿ ಪುರಂ, ಒಂಟಿಕೊಪ್ಪಲ್, ದೇವೇಗೌಡ ವೃತ್ತ & ಹೆಬ್ಬಾಳ್, ಇಎಸ್‌ಐ, ಪಿಎಫ್ ಕಡಿತದ ನಂತರ ತಿಂಗಳ ವೇತನ ರೂ. 14000/–
9900481819
9972945905

Go Mysore Holidays
ತಿರುಪತಿ, ತಿರುಮಲ, ಕಾಳಹಸ್ತಿ ಪ್ಯಾಕೇಜ್,
23–01–2026 ಹೊರಡುವುದು ಎರಡು ದಿನದ ಪ್ರವಾಸ, ಕೆ.ಡಿ.ಸರ್ಕಲ್, ವಿಜಯನಗರ 2ನೇ ಹಂತ
* ಕೆಲವೇ ಸೀಟುಗಳು ಮಾತ್ರ
9448738617
9036154301

SITE FOR SALE
30x70
S/W CORNER
13TH CROSS, RAMANUJA ROAD, AGRAHARA, MYSORE
9886226764

SITE FOR SALE @ KNS CALISTO
40'x60'
EAST FACE
60 ft Road Width
Call : 9886048471

ಶ್ರೀ ಗೌರೀಶಂಕರ ಟ್ರಾವೆಲ್ಸ್
20–2–2026 (3 ದಿನ): ಶಿರಡಿ, ಘೃಷ್ಣೇಶ್ವರ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ
1–4–2026 (6 ದಿನ): ದೆಹಲಿ, ಮಥುರ, ಆಗ್ರಾ, ಅಯೋಧ್ಯೆ, ಕಾಶಿ.
8–5–2026 (10 ದಿನ): ಅಯೋಧ್ಯೆ, ಪೋಕ್ರ, ಮುಕ್ತಿನಾಥ್, ಕಠ್ಮಂಡು, ಕಾಶಿ.
24–5–2026 (12 ದಿನ): ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್.
(ವಿಮಾನ, ಬಸ್, ಊಟ, ರೂಂ)
Mob: 9448499538

CHANGE OF NAME
I, Mahadevu Sandeep Aged 39 years Residing at Thandava pura Village, Chikkaiahna Chatra Hobli, Nanjanagudu Taluk, Mysore District-571301, have Changed my name from Mahadeva Sandeep to Mahadevu Sandeep, vide Affidavit Sworn Before Notary Suresh on 13.01.2026 at Nanjangudu.
Sd/- Mahadevu Sandeep

CHANGE OF NAME
I, Mahadevu Malegowda Residing at Thandavapura Village, Chikkaiahna Chatra Hobli, Nanjanagudu Taluk, Mysore District-571301, have Changed my name from Mahadeva Malegowda to Mahadevu Malegowda, vide Affidavit Sworn Before Notary Suresh on 13.01.2026 at Nanjangudu.
Sd/- Mahadevu Malegowda

REVISION CLASSES
10ನೇ ತರಗತಿ ವಿದ್ಯಾರ್ಥಿಗಳಿಗೆ ಮುಂಬರುವ ಪರೀಕ್ಷೆಗೆ ಎಲ್ಲಾ subjects revision classes ನೀಡಲಾಗುವುದು. ವಿಜಯನಗರ 3ನೇ ಹಂತ, ಮೈಸೂರು.
Timings: 5pm - 9pm
9663745923 / 9880207555

STAFF WANTED
SRM AUTO PARTS
Any Degree, age 20 to 30, for Marketing Purpose, (Salary 20,000 to 30,000) Contact :
9994758431

TO-LET
Cellar (3000 sq.ft.)
Ground floor (3500 sq.ft.)
1st Floor (3500 sq.ft.)
Bhanavi Complex, Dattagalli, Mysore.
Mob: 8123043095

HIRING
* Pharmacist * CSSD Technician * Secretary (Typist) * System Admin / IT Executive * Maintenance Staff * Security.
Location: Bhanavi Hospital
Mob: 9972982665
Email: siddalingayya.hr@bhanavihospital.com

ಬೇಕಾಗಿದ್ದಾರೆ
ಮಗು ನೋಡಿಕೊಳ್ಳಲು 30 ವರ್ಷ ವರ್ಷದೊಳಗಿನ ಹುಡುಗಿಯರು ಬೇಕಾಗಿದ್ದಾರೆ.
ವಿಜಯನಗರ 3ನೇ ಹಂತ ಮೈಸೂರು.
8105886004, 7022470930

ಕೆಲಸಕ್ಕೆ ಬೇಕಾಗಿದ್ದಾರೆ
ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
(ಸಂಬಳ 10000)+Incentive)
ಸ್ಥಳ : ಚಾಮುಂಡಿಪುರಂ ಮತ್ತು ಎನ್‌ಆರ್ ಮೊಹಲ್ಲಾ Field Executives
(ಸಂಬಳ 17000)+(Incentive)
Collection Department Field Collection Manager
(ಸಂಬಳ – 22000)
81500 05111

ಕೆಲಸಕ್ಕೆ ಬೇಕಾಗಿದ್ದಾರೆ
ಬನ್ನಿಮಂಟಪ ಹುಡ್ಕೋ ಬಾಲಾಜಿ ಟಾಕೀಸ್ ಹತ್ತಿರ ಇರುವ ವೇರ್‌ಹೌಸ್ ಅಲ್ಲಿ ಕೆಲಸ ಮಾಡಲು ವಿದ್ಯಾವಂತ ಅನುಭವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮತ್ತು ಹಿನಕಲ್ ಬಸ್ ಸ್ಟ್ಯಾಂಡ್ ಹತ್ತಿರ ಇರುವ ಅಪಾರ್ಟ್‌ಮೆಂಟ್ ಅಲ್ಲಿ ಕೆಲಸ ಮಾಡಲು ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಸಕ್ತಿ ಇರುವವರು ದಾಖಲಾತಿಗಳೊಂದಿಗೆ ಸಂದರ್ಶನ ಮಾಡಬಹುದು.
8073722464

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿಗಳಿಗೆ, ಆಫೀಸ್ ವರ್ಕ್‌ಗಳಿಗೆ 7th, 10th, PUC, ITI, Diploma, BE, BA, B.Com., Degree (ಪಾಸ್ / ಫೇಲ್) ಆದಂತ ನಗರ ಗ್ರಾಮೀಣ ಹಳ್ಳಿಗಳ ಯುವಕರಿಗೆ, ಯುವತಿಯರಿಗೆ ವಸತಿಯೂಟವಿರುತ್ತದೆ. ಸಂಬಳ + ಓಟಿ ರೂ. 18000 – 35000.
Mob: 9916788422

ನೇರ ಆಯ್ಕೆ
ಉದ್ಯೋಗವಕಾಶ ವರ್ಕ್ ಫ್ರಂ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ಮಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್ / ಫೇಲ್ ಆದವರು 21,000 ದಿಂದ 35,000.
Mob: 9742133993

LOAN
1. Housing Loan, 2. Balance Transfer, 3. Composite Loan 4. Plot Loans, 5. Mortgage Loan 6. Commercial Properties (We provide Loans for All type of Khatha), Shri Sai Financial Services : Contact No.
8884447314 / 8884447318

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಕಂಟೇನರ್ ವಾಹನವನ್ನು ಚಲಾಯಿಸಲು ಭಾರೀ ವಾಹನದ DL ನೊಂದಿಗೆ ಕನಿಷ್ಠ 5 ವರ್ಷಗಳ ಅನುಭವವುಳ್ಳ ಚಾಲಕರು ಬೇಕಾಗಿದ್ದಾರೆ.
Mob: 7259376020

Teacher Required
for Teaching all Subjects for Residential CBSE School in Mysore City
8495983613

ಬೇಕಾಗಿದ್ದಾರೆ
1) ಸಪ್ಲೇಯರ್, ಸಂಬಳ : 16,000/–
2) ಬಿಲ್ಲಿಂಗ್ ಆಪರೇಟರ್, ಸಂಬಳ : 15,000/–
ಸ್ಥಳ : ಮೈಸೂರು
9740007737

6 ದಿನಗಳ ದುಬೈ ಪ್ರವಾಸ 18–02–2026
9 ದಿನಗಳ ಅಯೋಧ್ಯಾ ಮತ್ತು ನೇಪಾಳ ಪ್ರವಾಸ 19–02–2026
8 ದಿನಗಳ ಗುಜರಾತ್ ಪ್ರವಾಸ 21–2–2026
4 ದಿನಗಳ ಕಾಶಿ ಪ್ರವಾಸ 05–02–2026
ಸುವರ್ಣ ಯಾತ್ರಾ
9008381022 / 9019462508

SITE FOR SALE
30x70
East Face
IPS Srinivasa Nagara (Police Layout 3rd Stage)
9480555474

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022,

WANTED
ACCOUNTANT
GRAPHIC DESIGNER (FRESHER)
TATA ACE DRIVER
9448067939 | 9739569260

Affidavit
I, Rizwana Banu S H, W/o Mushtaq Pasha Aged 48 yrs, Resding at No. 711, 3rd Stage, Rajivnagar, Mysore -19 My name has Been Wrongly Entered as "RIZWANA BANU"in My Daughter SSLC Marks Card but My Correct name is "Rizwana Banu S H" Sworn in Front of Notary C.R SEETHARAM dated 19-01-2026
Sd/- Rizwana Banu S H

ಬೇಕಾಗಿದ್ದಾರೆ
ಮೇಲ್ವಿಚಾರಕ (Supervisor) ಕಾಂಕ್ರೀಟ್ ಬ್ಲಾಕ್ ಫ್ಯಾಕ್ಟರಿಗೆ ಬೇಕಾಗಿದ್ದಾರೆ, ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಮೈಸೂರು.
Contact: 9986919694

ಸಿಪೆಟ್:ಸಿ.ಎಸ್.ಟಿ.ಎಸ್, ಮೈಸೂರು
ಓಪನ್ ಹೌಸ್
ದಿನಾಂಕ: 23.01.2026 - 25.01.2026
ಬೆಳಗ್ಗೆ 9.00 ರಿಂದ ಸಂಜೆ 6.00 ರವರೆಗೆ
ಪೋಷಕರು, ಕೈಗಾರಿಕಾ ಉದ್ಯೋಗಿಗಳು ಹಾಗೂ ಸಾರ್ವಜನಿಕರು ಭಾಗವಹಿಸಬಹುದು
ವಿಳಾಸ: ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ ಮೈಸೂರು – 570016.
ಪ್ರವೇಶ ಉಚಿತ
97496 61667, 99593 33419

ಬೇಕಾಗಿದ್ದಾರೆ
ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.
8951593118

ಬೇಕಾಗಿದ್ದಾರೆ
ಕಂಪ್ಯೂಟರ್ ಮತ್ತು ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿ ಅಥವಾ ಹುಡುಗ ಬೇಕಾಗಿದ್ದಾರೆ. ಸ್ಥಳ: ಮೈಸೂರು
9480918242

SITE FOR SALE
30x40 West Face
Brahmanandasagar Phase-2, Opp. St. Joseph Central School, Ilwala.
Mob: 9972399939
DIRECT OWNER

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
Near Ashoka Road, Mysuru.
Mob: 9916514950

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು) ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಳ್ಳಿ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಬೋಗಾದಿ ಹತ್ತಿರ, ಬೋಗಾದಿ ರಿಂಗ್ ರೋಡ್, ಕುವೆಂಪು ನಗರ, ವಿಜಯನಗರ 1st, ವಿಜಯನಗರ 4th stage,Jaylaksksshmi puram, K D circle, ಒಂಟಿಕೊಪ್ಪಲ್. ತಿಲಕ್ ನಗರ.
9606808975

ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ
ಕೆಲಸ ಯೂನಿಫಾರಂ ಶಾಪ್‌ಗೆ ಹೆಲ್ಪರ್ ಲೇಡಿಸ್ ಮಾತ್ರ ವಯಸ್ಸು 18 ರಿಂದ 35 ಮಧ್ಯಾಹ್ನ 3pm to 8.30 ಕ್ಕೆ 1ಪೋಸ್ಟ್ ಬರುವ ಇಚ್ಛೆ ಇರುವ ಮಾತ್ರ ನಿಮ್ಮ ಆಧಾರ್ ಕಾರ್ಡನ್ನು ವಾಟ್ಸಪ್ ಮಾಡಿ ಅಗ್ರಹಾರ ಬಸವೇಶ್ವರ ರಸ್ತೆ, ಮೈಸೂರು
9591327746

CHANGE OF NAME
I, Batul Murtaza Eranpurwala, W/o. Hussain Murtuza Madraswala residing at No. 129/1, "Aspire Elegance' 4th Main, Bannimantap C Layout, Mysore-570015 do hereby state on oath that after my marriage my name has changed to Batul Hussain Madraswala on my own free will sworn in before Notary Syed Ameer vide affidavit dated 9/10/2024.
Sd/-Batul Hussain Madraswala

ಬೇಕಾಗಿದ್ದಾರೆ
ಪಿಜಿಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಕಡ್ಡಾಯವಾಗಿ ಪಿಜಿಯಲ್ಲೇ ಉಳಿಯಬೇಕು. ಊಟ–ವಸತಿ ಇರುತ್ತದೆ.
Mob: 9902122021

WANTED
Accountant (Fresher)
Salary: 10 - 18K
Timings: 10.30 am to 7 pm
Irwin Road, Mysore
Mob: 9972594577

ಬ್ರಾಹ್ಮಣ ವರ ಬೇಕಾಗಿದ್ದಾರೆ
ಬ್ರಾಹ್ಮಣ ಕನ್ಯೆ ವಧುವಿನ ವಯಸ್ಸು: 28, ಎಸ್‌ಎಸ್‌ಎಲ್‌ಸಿ ಕಲಿತಿರುವ / ವಯಸ್ಸು 34, ಪಿಯುಸಿ ಕಲಿತಿರುವ ವಧುವಿಗೆ ಆದಾಯವಿರುವ ಸದ್ಗುಣವಂತ ವರ ಬೇಕಾಗಿದ್ದಾರೆ. ವಿವಾಹ ವೇದಿಕೆ
Mob: 7349119088

ಬೇಕಾಗಿದ್ದಾರೆ
ಛೇರ್ಮನ್ ಕಾರು ಚಲಾಯಿಸಲು ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ವಾಹನ ಚಲಾಯಿಸಿ ಅನುಭವವಿರುವ, ಹೆವಿ ಲೈಸನ್ಸ್ ಉಳ್ಳ, ಮೈಸೂರು ನಗರ ವ್ಯಾಪ್ತಿಯಲ್ಲಿ ವಾಸವಿರುವ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ: 70228 49856
ಆಸಕ್ತರು ಒಂದು ವಾರದೊಳಗೆ ನೀಡಲಾದ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

Site for Sale
30x40
Suvarna Layout (MUDA) (Near Udbur Gate) H.D kote Road Site No- 279 (north) 40feet Road
Rate: 27L (Slightly Negotiable)
9448739000

CORNER SHOP FOR RENT
Sankranthi Circle, Hebbal, Two Sides Rolling Shutters SUITABLE FOR CLINIC Size 14x15 Feet
7975033509

WANTED
AUDIT ASSISTANT FOR CA FIRM
Vijayanagar 2nd Stage, Mysuru.
Qualification: Graduation in Commerce.
Mob: 9686666992
Mail id: satisharassociates@gmail.com

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ ವಸತಿಯಿರುತ್ತದೆ ಸಂಬಳ+ಓಟಿ, 15200 – 86000
7892046990

FOR SALE
30x40|30x50 Sites, Near RT Ngr, Brahmins Lyt, HD Kote Rd.
20x30, 30x40 MUDA Approved Sites Near Rainbow School Bogadi
40x60 Site@ Shardha Lyt,JP Ngr
40x45 Duplex House @ Vijay Ngr
2-3 BHK Apartments @RK Ngr
Commercial Properties Also Available
PRAKRUTHI PROPERTIES
95386 90359, 90359 90359



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ A.W.G ಕಂಪನಿಯೊಂದಕ್ಕೆ SSLC - PUC, ITI, Dip any Degree ಆದಂತಹ 219 ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ವಯೋಮಿತಿ : 18-31 years ತಿಂಗಳಿಗೆ : 20,500 – 24500, (ಉಚಿತ ಊಟ+ವಸತಿಯಿದೆ) ಕೂಡಲೇ ಕರೆಮಾಡಿ. ರಚನಾ
7349699460 / 7090212014

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (SSLC ಮತ್ತು ITI Any Trade) (Company : JK Tyre ಮತ್ತು Automotive Axle Ltd.) Age : 18 ರಿಂದ 35 ವರ್ಷ Salary : 18,000/- ಸೌಲಭ್ಯತೆ : ESI, PF ಮತ್ತು Canteen ಸೌಲಭ್ಯವಿರುತ್ತದೆ.
6362491336 / 7019822622

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಉತ್ತರ ಪೂರ್ವ ಕಾರ್ನರ್, ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಪ್ತಮಾತೃಕ ಹಂತ–01 ಮಹಾವೀರ್‌ನಗರ, ಮೈಸೂರು
9448601655

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 18,500 (8 hrs, 26 Days) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819 / 9620667819

ಆಶ್ರಮ ಮತ್ತು ಗೋಶಾಲೆಗೆ
ನಮ್ಮ ಕೈಲಾಸಂ ಆಶ್ರಮಕ್ಕೆ ದೊಡ್ಡ ಬಂಗಲೆ, ದೊಡ್ಡ ಮನೆ ಮತ್ತು ಗೋಶಾಲೆಗೆ ಜಮೀನು ಬೇಕಾಗಿದೆ. ಆಸಕ್ತರು ನೇರ ಸಂಪರ್ಕಿಸಿ:
6361740552
9449408551

ತಕ್ಷಣ ಬೇಕಾಗಿದ್ದಾರೆ
ತಿ.ನರಸೀಪುರ ಏರಿಯಾದಲ್ಲಿನ ಕೆಂಪಯ್ಯನಹುಂಡಿ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 19000 (8 hrs, 26 Days) ESI, PF ಸೌಲಭ್ಯವಿರುತ್ತದೆ.
9880727819 / 9620667819

ಬೇಕಾಗಿದ್ದಾರೆ
ರೂಮ್ ಬಾಯ್–1
ಶ್ರೀ ಗಣೇಶ್‌ಪ್ರಸಾದ್ ಲಾಡ್ಜ್ #1096, ಶಿವರಾಂಪೇಟೆ ಮುಖ್ಯ ರಸ್ತೆ, ಮೈಸೂರು–570001, ಸಮಯ – 3 pm to 6 pm
9986756866

3 BHK INDEPENDENT HOUSE FOR RENT
NEXT TO NAVKIS SCHOOL, MYSORE-BANNUR ROAD
RENT :- 21000/- P.M
8310573491
Ready to Occupy

ಸದ್ಗುರು ಮ್ಯಾರೇಜಸ್
1) ಒಕ್ಕಲಿಗ BE, MBA ಸುಂದರ ಶ್ರೀಮಂತ ವಧುಗೆ, 2) ಬಲಿಜ MBBS, MD ಸುಂದರ ಶ್ರೀಮಂತ ವಧುಗೆ, 3) ಆದಿಕರ್ನಾಟಕ MBBS, MD ಸುಂದರ ಶ್ರೀಮಂತ ವಧುಗೆ, 4) ಬ್ರಾಹ್ಮಣ B.Com ಸುಂದರ ಶ್ರೀಮಂತ ವಧುಗೆ, 5) ಲಿಂಗಾಯತ BE ಸುಂದರ ಶ್ರೀಮಂತ ವಧುಗೆ, 6) ಕುರುಬ BE ಸುಂದರ ಶ್ರೀಮಂತ ವಧುಗೆ ಸೂಕ್ತ ವರಗಳು ಬೇಕು.
9448229184
7899625268

WANTED
For Mellow Travel Company & The Quorum Hotel
1. Yellow board driver (Taxi) - 03 no's (Salary: 10000/- + Bata), 2. Stewards & Banquet staff's - 05 no's, 3. Electrician cum Plumber - 01 no, 4. HK Helpers - 04 no's, Walk in Interview
The Quorum Hotel
#2257/1, Vinobha road, Mysore- 570005.
9620274629 / 9035062106

ಉಚಿತ ಸಾಮೂಹಿಕ ವಿವಾಹ
26–04–2026 ಭಾನುವಾರ
ಗೀತಾ ಮಂದಿರ ಕಲ್ಯಾಣ ಮಂಟಪ ಅಶೋಕ ರಸ್ತೆ, ಮೈಸೂರು
ಅಧ್ಯಕ್ಷರು ಕಸ್ತೂರಿಚಂದ್ರು
88676-88676

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ. 1. ಕ್ಯಾಪ್ಟನ್, 2. ಸ್ಟೋರ್ ಕೀಪರ್, ತಕ್ಷಣ ಸಂಪರ್ಕಿಸಿ:
9591642450
9148648485

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸ್ಥಳ: ಸಿದ್ದಲಿಂಗಪುರ, ಭೂಗತಹಳ್ಳಿ ಹಾಗೂ ಹುಲಿಕೆರೆ-KRS ಹತ್ತಿರ. ವಯೋಮಿತಿ 50 ವರ್ಷದ ಒಳಗೆ.
9900212487, 9035050656

WANTED
A driver for car and Shop staff boys in a wholesale shop in APMC Yard, Bandipalya.
Contact details
9845333588 / 8951699396

S.K. Construction
ಕೆಲಸಕ್ಕೆ ಬೇಕಾಗಿದ್ದಾರೆ
Site Construction Writer Office ಕೆಲಸಕ್ಕೆ ಬೇಕಾಗಿದ್ದಾರೆ.
Mob: 8904202804

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್(SSLC Pass) 12 ಘಂಟೆ ಪಾಳಿ 16 ಸಾವಿರ (ESI & PF ಸೌಲಭ್ಯ ಮೇಟಗಳ್ಳಿ ಸುತ್ತಮುತ್ತ ಪ್ರದೇಶ
9035367083 / 6361548626

ಕಳೆದಿದೆ
ನಂದಾ. ಸಿ W/o ವಿಶ್ವನಾಥ್ ಕೆ.ಪಿ, ನಂ. 180, 7ನೇ ಕ್ರಾಸ್, 3ನೇ ಮೇನ್, ವಿಜಯನಗರ 1ನೇ ಸ್ಟೇಜ್, ವಿಜಯನಗರ 2ನೇ ಹಂತ, ಮೈಸೂರು ಸಿಟಿ–520017, ಇಲ್ಲಿ ವಾಸವಿದ್ದು, ನನಗೆ ಸೇರಿದ ಶ್ರೀರಂಗಪಟ್ಟಣ ತಾಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 327ರ ವಿಸ್ತೀರ್ಣ 0.20.00 ಗುಂಟೆ ಜಮೀನಿಗೆ ಸಂಬಂಧಪಟ್ಟ ಕ್ರಯಪತ್ರ – 1ನೇ ಪುಸ್ತಕದ ದಸ್ತಾವೇಜು ನಂ. SRP-1-01727-2011-12 ಆಗಿ ಸಿ.ಡಿ. ನಂಬರ್ SRPD66 ನೇದ್ದರಲ್ಲಿ ಶ್ರೀರಂಗಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟ ಕ್ರಯಪತ್ರ ಮತ್ತು ಇದರ ಆಕಾರ್ ಬಂದ್‌ನ ದಾಖಲೆಗಳು ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ;
7892573550

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000-20000/-
Ph.7406 369 369

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

LEARN WITH THE LEADER
Architectural/Civil AutoCAD,3DS MAX, REVIT, LUMION, BIM Mechanical AutoCAD, CATIA, Solid Works Electrical CAD
CADD CENTRE
Skills Driven. Job Led
V.V. Mohalla & Saraswathipurm
98809 08444

RECRUITMENT
Looking for Professional, Hardworking, Diligent Candidates.
- Counselor - Female, B.Com,
- CADD Engineer - BE Civil, Mech - 2 Positions

0-2 Years experience for all posts.
98809 08444
CADD CENTRE Skills Driven. Job Led
Job location: Mysore

ಪ್ರಕಟಣೆ
ಕುಂಚಿಟಿಗರ ಸಂಘ(ರಿ)
ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು
ಕಚೇರಿಗೆ 100 ಕೆವಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಕೊಟೇಷನ್ ನೀಡಲು ಬಯಸುವ ಆಸಕ್ತರು ಸಂಘದ ಕಛೇರಿಗೆ ಬಂದು ನೀಡಬೇಕೆಂದು ಕೋರುತ್ತೇವೆ, ಕಚೇರಿ ಇ-ಮೇಲ್ ಅಥವಾ ಕಛೇರಿಗೆ ತಮ್ಮ ಕೊಟೇಷನ್ ನೀಡಬಹುದು. ಸಂಪರ್ಕಿಸಿ: ಕಛೇರಿ ಸಮಯ ; 11.00am ರಿಂದ 05.00pm ಕಛೇರಿ ದೂ.ಸಂ:
9035389047/ 0821-2422973
ಇ-ಮೇಲ್; kunchitigarasangha@gmail.com
ಸಹಿ/– ಅಧ್ಯಕ್ಷರು,

ಮನೆ ಮಾರಾಟಕ್ಕಿದೆ
20x30 ಡುಪ್ಲೆಕ್ಸ್, 3 ಬೆಡ್‌ರೂಂ, ಶ್ರೀ ಬನಶಂಕರಿ ಎಂಟರ್‌ಪ್ರೈಸಸ್ ಮಹಾಮನೆ ಸರ್ಕಲ್ ಹತ್ತಿರ & ದಟ್ಟಗಳ್ಳಿ
9945042875

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNT ETC, ಕೆಲಸಕ್ಕೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ, EDUCATION SSLC, PUC, ITI, DIPLOMA, DEGREE. SALARY (18k -38k),
9739121355
7899627704

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ (ಹೆಂಗಸರು ಮತ್ತು ಮಕ್ಕಳ) ಕೆಲಸ ಮಾಡಲು ಅನುಭವವುಳ್ಳ Sales Girls ಬೇಕಾಗಿದ್ದಾರೆ. ಸ್ಥಳ : ವಿ.ವಿ.ಮೊಹಲ್ಲಾ (ಒಂಟಿಕೊಪ್ಪಲು), ಮೈಸೂರು,
9632088080
9964740008

SHOP FOR RENT 120 sqft
COMMERCIAL SPACE FOR RENT
Udayaravi Road, Near Jayanagar 18th Cross Underbridge (Iskcon Temple Main Road)
9591262742

ಮೈಸೂರು ಮಿತ್ರ — ಓದುಗರ ಗಮನಕ್ಕೆ
46
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಹ್ಯಾಕನೂರಿನಲ್ಲಿ ಶ್ರೀಗುರು ಕಂಬಳೇಶ್ವರ ದಾಸೋಹ ಶಾಖಾ ಮಠ ಉದ್ಘಾಟನೆ

ತಿ.ನರಸೀಪುರ, ಜ.21– ಸರ್ಕಾರ ಮಾಡಲು ಸಾಧ್ಯವಾಗದಂತಹ ಸಮಾಜ ಮುಖಿ ಕೆಲಸಗಳನ್ನು ಮಠ, ಮಾನ್ಯಗಳು ಮಾಡುತ್ತಿವೆ ಎಂದು ಜಿ.ಪಂ.ಮಾಜಿ ಸದಸ್ಯ ಬಿ.ಎನ್.ಸದಾನಂದ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನ ಹ್ಯಾಕನೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಗುರು ಕಂಬಳೇಶ್ವರ ದಾಸೋಹ ಶಾಖಾ ಮಠದ ಉದ್ಘಾಟನೆ ಹಾಗೂ ಧಾರ್ಮಿಕ ಸಭೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಮಠ, ಮಾನ್ಯಗಳು ಸಮಾಜದ ಕಟ್ಟ ಕಡೆಯ ಕುಟುಂಬಗಳು, ಭಕ್ತರ ಸಮಸ್ಯೆ, ಸಂಕಷ್ಟವನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡದೆ ಇದ್ದಿದ್ದರೆ ಸಮಾಜವನ್ನು ಒಳ್ಳೆಯ ಮಾರ್ಗಕ್ಕೆ ತೆಗೆದುಕೊಂಡು ಹೋಗಲು ನಮ್ಮಂತಹ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ದಕ್ಷಿಣ ಭಾರತದಲ್ಲಿ ಸಿದ್ಧಗಂಗಾ ಮಠ, ಆದಿಚುಂಚನಗಿರಿ ಮಠ, ಸುತ್ತೂರು ಮಠ ಸೇರಿದಂತೆ ಹಲವು ಮಠಗಳು ಧಾರ್ಮಿಕ ಕಾರ್ಯಕ್ರಮವನ್ನು ನೀಡುವ ಮೂಲಕ ಸಮಾಜವನ್ನು ಶೈಕ್ಷಣಿಕ, ಧಾರ್ಮಿಕವಾಗಿ ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತಿವೆ ಎಂದರು.

ಚುನಾವಣೆಯಲ್ಲಿ ಮಾತ್ರವೇ ವಿರೋಧ: ಯಾವುದಾದರೂ ಸಮಯದಲ್ಲಿ ವೀರಶೈವ ಸಮಾಜದಲ್ಲಿ ವಿರೋಧ ಭಾವನೆ ಮೂಡಲಿದೆ ಎಂದರೆ ಚುನಾವಣೆ ವೇಳೆಯಲ್ಲಿ ಮಾತ್ರವೇ ಎಂದ ಸದಾನಂದ ರಾಜಕೀಯ ಹೊರತು ಪಡಿಸಿ ಉಳಿದ ಸಮಯದಲ್ಲಿ ಎಲ್ಲ ಅಣ್ಣ ತಮ್ಮಂದಿರಂತೆ ಬದುಕುತ್ತಾರೆ. ಹಾಗಾಗಿ ವೀರಶೈವ ಸಮಾಜ ಎಂದೂ ಕೂಡ ಯಾರ ಮನಸ್ಸನ್ನೂ ನೋಯಿಸದ ಸಮಾಜ ವಾಗಿದೆ ಎಂದರು.

ಧರ್ಮ ಪೋಷಣೆ ಮಾಡುತ್ತಿವೆ ಮಠಗಳು: ಧರ್ಮದ ಬೆನ್ನೆಲುಬಾಗಿ ನಿರಂತರವಾಗಿ ಪೋಷಿಸಿಕೊಂಡು ಬರಲು ಮಠ ಮಾನ್ಯಗಳು, ಪೂಜ್ಯ ಸ್ವಾಮೀಜಿಗಳು ಮೂಲ ಕಾರಣರಾಗಿದ್ದಾರೆ. ಮೈಸೂರು ಪ್ರಾಂತ್ಯದಲ್ಲಿ ವಿದ್ಯಾವಂತರ ಸಂಖ್ಯೆ ಒಂದು ಭಾಗವಾದರೆ, ಹಳೇ ಮೈಸೂರು ಪ್ರಾಂತ್ಯದಲ್ಲಿ ಶಿಕ್ಷಣ ಅಭಿವೃದ್ಧಿಯಾಗಿದೆ ಎಂದರೆ ಅದಕ್ಕೆ ಮೂಲ ಕಾರಣ ಮಠ ಮಾನ್ಯಗಳು, ದಕ್ಷಿಣ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ವೀರಶೈವ ಮಠ ಮಾನ್ಯಗಳು ಹಾಗೂ ಇತರೆ ಸಮಾಜದ ಮಠಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿರುವುದರಿಂದ ರಾಜ್ಯದ ಜನರು ಸ್ವಾವಲಂಬಿಗಳಾಗಿ ದೇಶ ವಿದೇಶಗಳಲ್ಲಿ ಉನ್ನತ ಉದ್ಯೋಗ ಮದ ಮೂಲಕ ಬದುಕು ಕಂಡು ಕೊಳ್ಳಲು ಸಾಧ್ಯವಾಗಿದ್ದು, ಇದರಿಂದ ನಾವು ವಿಶ್ವದ ಎಲ್ಲಾ ರಾಷ್ಟ್ರಗಳಲ್ಲೂ ಗೌರವಯುತವಾಗಿ ಬದುಕಲು ಸಾಧ್ಯವಾಗಿದೆ ಎಂದರು.



ಶ್ರೀ ಗುರುಕಂಬಳೇಶ್ವರ ದಾಸೋಹ ಶಾಖಾ ಮಠದ ಉದ್ಘಾಟನೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯ ಬಿ.ಎನ್.ಸದಾನಂದ ಮಾತನಾಡುತ್ತಿರುವುದು.

ಧಾರ್ಮಿಕ ಸಭೆಗೆ ಮೊದಲು ಬೆಳಿಗ್ಗೆ ಸುಕ್ಷೇತ್ರ ಮಲ್ಲನಮೂಲೆ ಮಠದ ಶ್ರೀ ಇಮ್ಮಡಿ ಸಿದ್ದಲಿಂಗಸ್ವಾಮಿ ಯವರ ಪಾದಪೂಜೆ ನೆರವೇರಿಸಲಾಯಿತು.

ಧಾರ್ಮಿಕ ಸಭೆಯಲ್ಲಿ ಸಂಸದ ಸುನಿಲ್ ಬೋಸ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಪ್ರಕಾಶ್, ನಂದಿನಿಸುದೀಪ್, ಗೌಡ್ರ ಟಿ.ನಂಜಪ್ಪ, ಮಲ್ಲನ ಮೂಲೆ ಕಂಬಳೀಶ್ವರ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮಿ, ದೇವನೂರು ಮಠದ ಮಹಾಂತ ಸ್ವಾಮಿ, ಮಾದ್ರಹಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ, ಮರಿಯಾಲ ಮಹಾಸುಸ್ಥಾನ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮಿ, ಸಿದ್ದ ಮಲ್ಲೇಶ್ವರ ವಿರಕ್ತಮಠದ ಚನ್ನ ಬಸವ ಸ್ವಾಮಿ, ಸಾಲೂರು ಮಠದ ಶ್ರೀಗಳು, ಆಲಹಳ್ಳಿ ಪಟ್ಟದ ಮಠದ ಇಮ್ಮಡಿ ಬಸಪ್ಪಸ್ವಾಮಿ, ಕುರುಬನ ಕಟ್ಟೆ ವರುಣ್ ಲಿಂಗರಾಜೆ ಅರಸ್, ನೆರಗ್ಯಾತನಹಳ್ಳಿ ಮಠದ ಇಮ್ಮಡಿ ಶಿವಕುಮಾರಸ್ವಾಮಿ, ವೀರಪ್ಪ ಒಡೆಯರಹುಂಡಿ ಮಠದ ರೇಣುಕಾಶಿವಾ ಚಾರ್ಯ ಸ್ವಾಮಿಗಳು, ಚಿಲಕವಾಡಿ ಬೆಟ್ಟದ ಇಮ್ಮಡಿ ಗುರುಲಿಂಗಸ್ವಾಮಿ, ಹೊಸೂರುಂಡಿ ಮಠದ ರಾಜಶೇಖರಸ್ವಾಮಿ ಇದ್ದರು.

> ಈ ಹಿಂದೆ ದೊಡ್ಡ ಮಠಗಳನ್ನು ಹೊರತು ಪಡಿಸಿ ಭಿಕ್ಷದ ಮಠಗಳಿರಲಿಲ್ಲ, ಹಲವಾರು ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಇಲ್ಲದ್ದನ್ನು ಗಮನಿಸಿದ ಗುರುಮಲ್ಲೇಶ್ವರರು ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಪ್ರತಿ ಗ್ರಾಮದಲ್ಲೂ ಭಿಕ್ಷಾ ಮಠಗಳನ್ನು ಸ್ಥಾಪನೆ ಮಾಡಿ, ಆ ಮೂಲಕ ಕಾಯಕ ಮಾಡಿ ಮಠಕ್ಕೆ ಬಂದ ಜನರಿಗೆ ದಾಸೋಹ ಮಾಡಬೇಕೆಂಬ ಉದ್ದೇಶ ಹೊಂದಿದ್ದರು. ಹಾಗಾಗಿ ನೂರಾರು ಮಠಗಳನ್ನು ಅವರು ಸ್ಥಾಪನೆ ಮಾಡಿದರು. ಇದಿಷ್ಟೇ ಅಲ್ಲದೇ ವೀರಶೈವರು, ಲಿಂಗಾಯತರು ಹಣೆಗೆ ಭಸ್ಮ ಧರಿಸುತ್ತಿರಲಿಲ್ಲ, ಲಿಂಗ ಧಾರಣೆ ಮಾಡುತ್ತಿರಲಿಲ್ಲ, ಅಷ್ಟಾವರಣದಲ್ಲಿರುವ ಗುರು, ಲಿಂಗ, ಜಂಗಮ, ಪಾದೋಧಕ, ಪ್ರಸಾದ, ರುದ್ರಾಕ್ಷಿ, ಭಸ್ಮ ಇದಾವುದನ್ನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿ ಗುರು ಮಲ್ಲೇಶ್ವರರು ಮುಖದ ತುಂಬೆಲ್ಲಾ ಭಸ್ಮ ಧರಿಸುತ್ತಿದ್ದರು. ಇದು ಮುಂದಿನ ಪೀಳಿಗೆಯಿಂದ ಮುಂದುವರೆಯಲಿ ಎಂಬ ಉದ್ದೇಶ ಶ್ರೀಗಳದ್ದಾಗಿತ್ತು. ಹಾಗಾಗಿ ಎಲ್ಲರೂ ಭಸ್ಮ ಧಾರಣೆ ಮಾಡಬೇಕು ಎಂದು ಕರೆ ನೀಡಿದರು.
>
> –ಸಿದ್ದಲಿಂಗಶಿವಾಚಾರ್ಯ ಸ್ವಾಮಿ, ವಾಟಾಳು ಸೂರ್ಯ ಸಿಂಹಾಸನ ಮಠ

ನಡೆದಾಡುವ ದೇವರಿಗೆ ಭಾರತ ರತ್ನ ನೀಡುವಂತೆ ಆಗ್ರಹ



ಸಿದ್ದಗಂಗಾ ಶ್ರೀಗಳ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಲಾಯಿತು.

ತಿ.ನರಸೀಪುರ, ಜ.21– ತ್ರಿವಿಧ ದಾಸೋಹದ ಮೂಲಕ ದೇಶದಲ್ಲಿ ಬಸವ ತತ್ವ ಸಾರಿದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ದಾಖಲಿಸುವಂತಹ ಸಾಧನೆ ಮಾಡಿರುವ ನಡೆದಾಡುವ ದೇವರು, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳಿಗೆ ಭಾರತ ರತ್ನ ನೀಡಿ ಗೌರವಿಸಬೇಕೆಂದು ಡಾ.ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್‌ನ ಗೌರವಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮನವಿ ಮಾಡಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಗುರುವಾರ ಡಾ.ಶಿವಕುಮಾರ ಸ್ವಾಮಿಯವರ ಸೇವಾ ಟ್ರಸ್ಟ್ ವತಿಯಿಂದ ನಡೆದ ಶಿವಕುಮಾರ ಸ್ವಾಮೀಜಿಗಳ ಪುಣ್ಯ ಸ್ಮರಣೆ ದಾಸೋಹ ದಿನ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಶಿವಕುಮಾರ ಸ್ವಾಮೀಜಿಯವರು ಇಡೀ ಜೀವತಾವಧಿಯನ್ನು ಸಮಾಜಕ್ಕೆ ಮೀಸಲಿಟ್ಟರು. ಶ್ರೀಗಳು ಜಾತಿ, ಧರ್ಮ ಬೇಧ ಮರೆತು ಸಮಾಜದ ಎಲ್ಲರಿಗೂ ವಿದ್ಯೆ ನೀಡಿದರು. ಅನ್ನ, ವಸತಿ, ಶಿಕ್ಷಣಕ್ಕೆ ಒತ್ತು ಕೊಟ್ಟು ಸ್ವಸ್ಥ ಸಮಾಜಕ್ಕೆ ಬುನಾದಿ ಹಾಕಿದರು ಎಂದು ಸ್ಮರಿಸಿದರು.

ಶಿವಕುಮಾರ ಸ್ವಾಮೀಜಿಗಳು ಹಸಿದು ಬಂದ ಅತಿಥಿಗಳಿಗೆ ದಾಸೋಹ ಸೇವೆ ಸಲ್ಲಿಸಿದ ಮಹಾನ್ ವ್ಯಕ್ತಿ. ನಡೆದಾಡುವ ದೇವರು, ಅಭಿನವ ಬಸವಣ್ಣ, ತ್ರಿವಿಧ ದಾಸೋಹಿ ಎಂದೇ ಹೆಸರಾಗಿದ್ದ ಅವರು 111 ವರ್ಷಗಳ ತುಂಬು ಜೀವನ ನಡೆಸಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ, ಆರೋಗ್ಯ ಮತ್ತು ವಸತಿ ಸೌಕರ್ಯ ಕಲ್ಪಿಸಿದರು ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ ಮಾತನಾಡಿ ಶಿವಕುಮಾರಸ್ವಾಮಿಯವರು ಶಿಕ್ಷಣದ ಮಹತ್ವ ತಿಳಿದು ರಾಜ್ಯದಲ್ಲಿ ಅಕ್ಷರ ಕ್ರಾಂತಿ ಮಾಡಿದರು. ಸರಳ ಸಜ್ಜನಿಕೆಯ ಅವರು ವಿವಿಧ ಕ್ಷೇತ್ರಗಳ ಅಭಿವೃದ್ಧಿಗೂ ಕೊಡುಗೆ ನೀಡಿದ್ದಾರೆ. ಜಾತ್ಯಾತೀತ ತತ್ವ ಮೈಗೂಡಿಸಿಕೊಂಡಿದ್ದ ಶ್ರೀಗಳು ನಿಜಕ್ಕೂ ಪವಾಡ ಪುರುಷರು. ಬಸವಣ್ಣರ ತತ್ವಾದರ್ಶ ಕಾರ್ಯರೂಪಕ್ಕೆ ತಂದ ಅಪರೂಪದ ತಪಸ್ವಿಯಾಗಿದ್ದರು ಎಂದರು.

ಕೆಇಬಿ ನಿವೃತ್ತ ನೌಕರ ಸಿದ್ದಲಿಂಗಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸೇವಾ ಟ್ರಸ್ಟ್ ಉಪಾಧ್ಯಕ್ಷ ಸೋಮಣ್ಣ ಸಹ ಕಾರ್ಯದರ್ಶಿ ವಾಟಾಳು ಗುರುಪಾದ, ಸಂಚಾಲಕ ಮಾದಪ್ಪ, ಹೆಳವರಹುಂಡಿ ಬಸಪ್ಪ ದೊಡ್ಡನಹುಂಡಿ ಲೋಕೇಶ್, ಕೇಬಲ್ ರಾಜಶೇಖರ್, ಕಾರ್ ಮಲ್ಲಪ್ಪ, ಹಲವಾರ ಪರಮೇಶ್ ಪಟೇಲ್, ಖಜಾಂಚಿ ಮಾಯಪ್ಪ, ಗೌರವ ಸಲಹೆಗಾರರಾದ ಕಾವೇರಿಪುರ ಸುರೇಶ್, ಹೆಳವರಹುಂಡಿ ಮೂರ್ತಿ, ಮುಡುಕನಪುರ ನಾಗಭೂಷಣ್, ಕೆಬ್ಬೇ ಹುಂಡಿ ಶಿವಕುಮಾರ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ದೊಡ್ಡನ ಹುಂಡಿ ನಿರಂಜನ್, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಉಪಾಧ್ಯಕ್ಷ ಸುಗಂದ ರಾಜು, ಪೂಜಿತ್ ಮೆಡಿಕಲ್ ಕುಮಾರ್, ಸಂಚಾಲಕ ಹೆಳವರ ಹುಂಡಿಬಸಪ್ಪ ಸೇರಿದಂತೆ ಮತ್ತಿತರರಿದ್ದರು.

ಶಾಸಕರಿಂದ ಚತುಷ್ಪಥ ರಸ್ತೆ ಕಾಮಗಾರಿ ಪರಿಶೀಲನೆ

56 ಕೋಟಿ ರೂ. ವೆಚ್ಚದಲ್ಲಿ ಚತುಷ್ಪಥ ರಸ್ತೆ ಕಾಮಗಾರಿ, ಶೇ 40ರಷ್ಟು ಪೂರ್ಣ

ಹುಣಸೂರು, ಜ.21– ರಾಷ್ಟ್ರೀಯ ಹೆದ್ದಾರಿ 275ಕ್ಕೆ ಸೇರಿದ ನಗರ ವ್ಯಾಪ್ತಿಯ ಎಪಿಎಂಸಿ ಬಳಿ ಇರುವ ದೇವರಾಜು ಅರಸು ಪುತ್ಥಳಿಯಿಂದ ಹಾಲಗೆರೆ ಗ್ರಾಮದವರೆಗೆ 56 ಕೋಟಿ ರೂ. ವೆಚ್ಚದಲ್ಲಿ 5.1 ಕಿ.ಮಿ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಮಾಡಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ನಗರದ ಬೈಪಾಸ್ ರಸ್ತೆಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಅಧಿಕಾರಿಗಳೊಂದಿಗೆಪರಿಶೀಲಿಸಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ನಗರದ ಹೊರವಲಯದಿಂದ ಹಾಲಗೆರೆ ಗ್ರಾಮದವರೆಗೆ ರಸ್ತೆ ವಿಸ್ತರಣೆ ಬಗ್ಗೆ ಸಲ್ಲಿಸಿದ ಮನವಿಗೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ 80 ರೂ. ಕೋಟಿ ಅಂದಾಜಿನಲ್ಲಿ ನಾಲ್ಕು ಪಥ ರಸ್ತೆ ಅಭಿವೃದ್ಧಿಗೆ 2024ರಲ್ಲಿ ಅನುಮೋದನೆ ನೀಡಿದರು. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡು ಶೇ.40ರಷ್ಟು ಕಾಮಗಾರಿಪೂರ್ಣಗೊಂಡಿದೆ ಎಂದರು.

ಮೇಲ್ಸೇತುವೆ: ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಇತ್ತೀಚೆಗೆ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿರುವ ಕಾರಣ ರಾಷ್ಟ್ರೀಯ ಹೆದ್ದಾರಿ 275ಕ್ಕೆ ಮೆಲ್ಸೇತುವೆಗಳನ್ನು ನಿರ್ಮಿಸಲು ತಿರ್ಮಾನಿಸಿ ರಾಷ್ಟ್ರೀಯ ಹೆದ್ದಾರಿ 275ರ ನಿರ್ವಹಣಾ ತಂಡ ತಾಲೂಕಿನ ಬನ್ನಿಕುಪ್ಪೆ, ಎಮ್ಮೆಕೊಪ್ಪಲು ಹಾಗೂ ಕಲ್ಲಬೆಟ್ಟ ತಿರುವುಗಳನ್ನು ಗುರುತಿಸಿ ಈ ಸ್ಥಳಗಳಲ್ಲಿ ಮೆಲ್ಸೇತುವೆಗಳನ್ನು ನಿರ್ಮಿಸಲು ತಿರ್ಮಾನಿಸಲಾಗಿದೆ ಎಂದರು.



ಅಧಿಕಾರಿಗಳೊಂದಿಗೆ ರಸ್ತೆ ಕಾಮಗಾರಿ ಪರಿಶೀಲನೆ ನಡೆಸುತ್ತಿರುವ ಶಾಸಕ ಜಿ.ಡಿ.ಹರೀಶ್‌ಗೌಡ

ಬನ್ನಿಕುಪ್ಪೆ ಗ್ರಾಮದಲ್ಲಿ ನಿರ್ಮಾಣ ಹಂತ ದಲ್ಲಿದ್ದ ಮೆಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಹಸಿರು ವಲಯದಿಂದ ಅನುಮೋದನೆ ಪಡೆಯದೆ ಕಾಮಗಾರಿ ಪ್ರಾರಂಭಿಸಿದ ಕಾರಣ ತಡೆಹಿಡಿಯಲಾಗಿತ್ತು. ಇತ್ತೀಚೆಗೆ ಪರಿಸರ ಸಂರಕ್ಷಣೆ ಸಮಿತಿ ಸಭೆ ನಡೆಸಿ ಮೇಲ್ಸೇತುವೆ ನಿರ್ಮಾಣಕ್ಕೆ ತೆರವು ಗೊಳಿಸಿದ ಮರಗಳಿಗೆ ಪರ್ಯಾಯ ವಾಗಿ ಎರಡು ಪಟ್ಟು ಸಸಿಗಳನ್ನು ಬೆಳೆಸಲು ಒಪ್ಪಿದ ನಂತರ ಕಾಮಗಾರಿಗೆ ಹಸಿರು ನಿಶಾನೆ ತೋರಿಸಲಾಗಿದೆ. ಈ ಕಾಮಗಾರಿಗೆ ಕೇಂದ್ರ ಸರ್ಕಾರ 13 ಕೋಟಿ ರೂ. ಬಿಡುಗಡೆ ಮಾಡಿದ್ದು, 2027ರ ಜನವರಿಗೆ ಈ ರಸ್ತೆ ಲೋಕಾರ್ಪಣೆ ಆಗಲಿದೆ ಎಂದರು.


ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ಶ್ರೀಧರ್ ಮಾತನಾಡಿ ಮೈಸೂರಿನ ಹಿನಕಲ್‌ನಿಂದ ಕುಶಾಲನಗರದವರೆಗೆ ನಿರ್ಮಿಸಿರುವ ರಾಷ್ಟ್ರೀಯ ಹೆದ್ದಾರಿ 275ರ ದುರಸ್ತಿ ಕಾಮಗಾರಿಗೆ ಕೇಂದ್ರ ಸರ್ಕಾರ 40 ಕೋಟಿ ರೂ.ಅನುದಾನ ಬಿಡುಗಡೆ ಮಾಡಿದ್ದು ಶಿಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಮುಗಿದ ಬಳಿಕ ದುರಸ್ತಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಆಯುಕ್ತೆ ಮಾನಸ, ಪರಿಸರ ಇಂಜಿನಿಯರ್ ಸೌಮ್ಯ, ಇಂಜಿನಿಯರ್ ಲೋಕೇಶ್, ಹೆದ್ದಾರಿ ಇಲಾಖೆಯ ಎಇಇ ರೂಪಾ, ಎಇ ತಬ್ಸುಮ್, ವಿನಯ್, ಮಾಜಿ ಅಧ್ಯಕ್ಷ ಮಾಲಿಕ್ ಪಾಷ, ಸತೀಶ್, ಸತೀಶ್ ಪಾಪಣ್ಣ, ಮುಖಂಡರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರಿನ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಾಡಿಪರೀಕ್ಷೆ

ಮೈಸೂರು: ಮೈಸೂರಿನ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ವತಿಯಿಂದ ಜ.25 ಹಾಗೂ 26 ರಂದು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಫೌಂಡೇಷನ್‌ನ ಆಶ್ರಮದಲ್ಲಿ ನಾಡಿ ಪರೀಕ್ಷೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 9886186580 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಚೇಳಿನ ವಿಷ ಚಿಕಿತ್ಸೆ ಪುಸ್ತಕದ ಕರ್ತೃಗೆ ಸುತ್ತೂರು ಶ್ರೀಗಳಿಂದ ಸನ್ಮಾನ



ತಿ.ನರಸೀಪುರ: ಸುತ್ತೂರು ಜಾತ್ರೆಯ ಸಮಾರೋಪ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು 'ಚೇಳಿನ ವಿಷ ಚಿಕಿತ್ಸೆ' ಪುಸ್ತಕವನ್ನು ಬರೆದ ತಲಕಾಡಿನ ಹಸ್ತಿಕೇರಿ ಮಠದ ಶ್ರೀ ಸಿದ್ದ ಮಲ್ಲಿಕಾರ್ಜುನ ಸ್ವಾಮಿಗಳನ್ನು ಸನ್ಮಾನಿಸಿದರು. ಸಮಾರಂಭದಲ್ಲಿ ಶಾಸಕ ಟಿ.ಎಸ್ ಶ್ರೀವತ್ಸ ಪುಸ್ತಕವನ್ನು ಬಿಡುಗಡೆ ಮಾಡಿದರು.

ಐದನೇ ಪುಟದಿಂದ

ಹಾಸನದಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನ

ಪ್ರಕರಣದ ನಂತರ ಹಾಸನದಲ್ಲಿ ಜೆಡಿಎಸ್ ಅನ್ನು ಬೇರು ಸಮೇತ ಕಿತ್ತೊಗೆಯಬೇಕೆಂಬ ಉದ್ದೇಶದಿಂದ ಸಿದ್ದರಾಮಯ್ಯ ಈ ಹಿಂದೆ ಹಾಸನ ನಗರದಲ್ಲೇ ಎರಡು ಬೃಹತ್ ಸಮಾವೇಶಗಳನ್ನು ನಡೆಸಿದ್ದರು.

ನಾಲ್ಕೈದು ತಿಂಗಳ ಅಂತರದಲ್ಲಿ ನಡೆದ ಈ ಸಮಾವೇಶಗಳಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಗಿಂತ ದೇವೇಗೌಡ ಮತ್ತು ಅವರ ಕುಟುಂಬ ಹಾಗೂ ಜೆಡಿಎಸ್ ವಿರುದ್ಧ ಹರಿಹಾಯ್ದಿದ್ದರು. ಪ್ರಜ್ವಲ್ ಪ್ರಕರಣದ ನಂತರ ಜೆಡಿಎಸ್ ಮುಖಂಡರು ಹಾಸನದಲ್ಲಿ ಯಾವುದೇ ಸಂಘಟನಾತ್ಮಕ ಚಟುವಟಿಕೆ ಹಮ್ಮಿಕೊಂಡಿರಲಿಲ್ಲ. ಜಿಲ್ಲಾ, ತಾಲೂಕು ಹಾಗೂ ಪಂಚಾಯತ್ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ಬೆಳ್ಳಿ ಹಬ್ಬ ಮುಂದಿಟ್ಟುಕೊಂಡು ಅದೇ ನೆಲದಲ್ಲಿ ಸಿದ್ದರಾಮಯ್ಯ ಅವರಿಗೆ ಉತ್ತರ ನೀಡಲು ಹೊರಟಿದ್ದಾರೆ.

ದೇವೇಗೌಡ ಅವರು ಈಗಾಗಲೇ ಸಮಾವೇಶ ಸಂಬಂಧ ಕಾರ್ಯಕರ್ತರ ನಿರಂತರ ಸಭೆಗಳನ್ನು ನಡೆಸಿದ್ದು, ಕುಮಾರ ಸ್ವಾಮಿ ಹಾಸನಕ್ಕೆ ಎರಡು ಬಾರಿ ಭೇಟಿ ನೀಡಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷರಾಗಿರುವ ಕುಮಾರ ಸ್ವಾಮಿ, ಪಕ್ಷದ ಹಾಲಿ ಶಾಸಕರು, ಮಾಜಿ ಸಚಿವರು ಶಾಸಕರು ಮತ್ತು ಪಕ್ಷದ ಮುಖಂಡರನ್ನು ಸಂಪರ್ಕಿಸಿ ಸಮಾವೇಶ ದಲ್ಲಿ ಪಾಲ್ಗೊಳ್ಳುವಂತೆ ಹಾಗೂ ತಮ್ಮ ಕ್ಷೇತ್ರಗಳ ಕಾರ್ಯಕರ್ತರನ್ನು ಕರೆತರುವಂತೆ ಸೂಚಿಸಿದ್ದಾರೆ.

ಆಡಳಿತಾರೂಢ ಕಾಂಗ್ರೆಸ್‌ನಲ್ಲಿನ ಅಧಿಕಾರ ಹಂಚಿಕೆ ಗೊಂದಲದಿಂದ ವಿಧಾನಸಭೆಗೆ ಮಧ್ಯಂತರ ಚುನಾವಣೆ ಎದುರಾಗುವ ಸಾಧ್ಯತೆಗಳಿವೆ ಎಂಬ ಅನಿಸಿಕೆ ಅವರಲ್ಲಿದ್ದು, ಇದೇ ವೇದಿಕೆ ಮೂಲಕ ಕಾರ್ಯಕರ್ತರನ್ನು ಒಗ್ಗೂಡಿಸುವುದು ಮತ್ತು ಮುಂಬರುವ ಎಲ್ಲಾ ಚುನಾವಣೆಗಳನ್ನು ಎದುರಿಸಲು ಭೂಮಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

ಚಿರತೆ ದಾಳಿ; ಮಾದಪ್ಪನ ಓರ್ವ ಭಕ್ತ ಬಲಿ

ಏಕಾಏಕಿ ದಾಳಿ ನಡೆಸಿ ಕಚ್ಚಿ ಎಳೆದೊಯ್ದಿದೆ. ಈ ವೇಳೆ ಜೊತೆಯಲ್ಲಿದ್ದ ಐವರು ಸ್ನೇಹಿತರು ಪ್ರವೀಣ್‌ನನ್ನು ರಕ್ಷಿಸಲು ಎಷ್ಟೇ ಪ್ರಯತ್ನಪಟ್ಟರೂ ಚಿರತೆ ಆತನನ್ನು ಅರಣ್ಯದೊಳಗೆ ಎಳೆದೊಯ್ದಿದೆ. ಇದರಿಂದ ಭಯಭೀತರಾದ ಅವರು ಕೂಡಲೇ ಮಲೆಮಹದೇಶ್ವರ ಬೆಟ್ಟ ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಳಿಕ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಬೆಳಗ್ಗೆ 11 ಗಂಟೆ ಸುಮಾರಿಗೆ ಪತ್ತೆ ಹಚ್ಚಿದ್ದಾರೆ.

ಬಳಿಕ ಮೃತ ದೇಹವನ್ನು ಹನೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶವಾಗಾರಕ್ಕೆ ರವಾನಿಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಅಲ್ಲದೇ ಇದೇ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸದ ಹಿನ್ನೆಲೆಯಲ್ಲಿ ಪಾದಯಾತ್ರಿಗಳು ಹಾಗೂ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ 2 ತಿಂಗಳಿಂದ ಮುಖ್ಯ ರಸ್ತೆಯಲ್ಲಿ ಕಾಣಿಸಿಕೊಂಡಿದ್ದ ಚಿರತೆಗಳು: ಕಳೆದ 2 ತಿಂಗಳಿಂದ ಮಲೆಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯ ತಾಳುಬೆಟ್ಟ, ರಂಗಸ್ವಾಮಿ ಒಡ್ಡು, ಆನೆ ತಲೆದಿಂಬ ಇತರೆಡೆ ಆಗಾಗ್ಗೆ ವಾಹನ ಸವಾರರಿಗೆ ಚಿರತೆಗಳು ಕಾಣಿಸಿ ಕೊಂಡಿದ್ದವು. ಈ ದೃಶ್ಯವನ್ನು ವಾಹನ ಸವಾರರು, ಪ್ರಯಾಣಿಕರು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದರು. ಆದರೂ ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಅಲ್ಲದೇ ಪಾದಯಾತ್ರಿಗಳಲ್ಲೂ ಜಾಗೃತಿ ಮೂಡಿಸಿರಲಿಲ್ಲ. ಹಾಗಾಗಿ ಈ ಘಟನೆ ನಡೆದಿದೆ ಎಂದು ಪಾದಯಾತ್ರಿಗಳು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಡೆ, ಬೈಕ್ ಸಂಚಾರಕ್ಕೂ ನಿರ್ಬಂಧ

ನಡೆಸಿ ಕೊಂದು ಹಾಕಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಿದ್ದು, ಜ.21ರಿಂದ ಜ.24ರ ಮಧ್ಯರಾತ್ರಿವರೆಗೆ ಬೆಟ್ಟಕ್ಕೆ ಭಕ್ತರು ದ್ವಿಚಕ್ರ ವಾಹನ ಹಾಗೂ ಪಾದಯಾತ್ರೆಯಲ್ಲಿ ತೆರಳದಂತೆ ನಿರ್ಬಂಧ ವಿಧಿಸಲಾಗಿದೆ. ಮಹಾಶಿವರಾತ್ರಿ ಹಾಗೂ ಯುಗಾದಿ ಜಾತ್ರೆಗೆ ಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಭಕ್ತರು ಪಾದಯಾತ್ರೆಯಲ್ಲಿ ತೆರಳುತ್ತಾರೆ. ಈ ವೇಳೆ ಚಿರತೆ ಮತ್ತೆ ದಾಳಿ ಮಾಡುವ ಸಾಧ್ಯತೆ ಇದ್ದು, ಭಕ್ತರ ಸುರಕ್ಷತೆಗಾಗಿ ತಾತ್ಕಾಲಿಕವಾಗಿ ಬೈಕ್ ಹಾಗೂ ಪಾದಯಾತ್ರೆ ನಿಷೇಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿರತೆ ಸೆರೆಗೆ ಕಾರ್ಯಾಚರಣೆ : ಬೆಟ್ಟದ ತಪ್ಪಲಿನಲ್ಲಿ ಕಳೆದೊಂದು ವಾರದಿಂದ ಆಗಾಗ ಕಾಣಿಸಿಕೊಳ್ಳುತ್ತಿದ್ದ ಚಿರತೆ ಇಂದು ವ್ಯಕ್ತಿಯೊಬ್ಬನ ಬಲಿ ಪಡೆದಿದೆ. ಹೀಗಾಗಿ ಅರಣ್ಯ ಇಲಾಖೆ ಸಿಬ್ಬಂದಿ, ಪಶು ವೈದ್ಯಾಧಿಕಾರಿಗಳ ತಂಡ ಚಿರತೆ ಸೆರೆ ಕಾರ್ಯಾಚರಣೆ ಆರಂಭಿಸಿವೆ. ಡ್ರೋನ್ ಕ್ಯಾಮರಾ ಬಳಸಿಕೊಂಡು ಚಿರತೆ ಪತ್ತೆ ಹಚ್ಚಲಾಗುತ್ತಿದೆ. ಬೋನ್ ಅಳವಡಿಕೆ ಮಾಡಲಾಗಿದ್ದು, ಕಾರ್ಯಾಚರಣೆ ಮುಗಿಯುವವರೆಗೂ ಸಾರ್ವಜನಿಕರು, ಸ್ಥಳೀಯರು ಸಹಕರಿಸಬೇಕು ಎಂದು ಕೋರಿದ್ದಾರೆ.

ಡಿಸಿಯಿಂದಲೂ ಆದೇಶ: ಮಲೆ ಮಹದೇಶ್ವರ ಬೆಟ್ಟದ ಅರಣ್ಯ ವ್ಯಾಪ್ತಿಯಲ್ಲಿ ಚಿರತೆ ಸೆರೆ ಹಿಡಿಯುವ ಕಾರ್ಯಾಚರಣೆಗೆ ಅಡ್ಡಿಯಾಗದಂತೆ ಮಹದೇಶ್ವರ ಬೆಟ್ಟಕ್ಕೆ ಭಕ್ತರು, ಸಾರ್ವಜನಿಕರು ಪಾದಯಾತ್ರೆ ಅಥವಾ ಕಾಲ್ನಡಿಗೆಯಲ್ಲಿ ತೆರಳುವುದನ್ನು ಹಾಗೂ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವುದನ್ನು ಜ.21 ರಿಂದ 24ರ ಮಧ್ಯರಾತ್ರಿವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಿ, ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿ ಶ್ರೀರೂಪ ಆದೇಶಿಸಿದ್ದಾರೆ. ನಿಷೇಧಾಜ್ಞೆಯು ಚಿರತೆ ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ಭಾಗವಹಿಸುವ ಅರಣ್ಯ ಅಧಿಕಾರಿಗಳು, ಸಿಬ್ಬಂದಿ, ಪಶು ವೈದ್ಯಾಧಿಕಾರಿಗಳು ಹಾಗೂ ಬಂದೋಬಸ್ತ್‌ಗೆ ನಿಯೋಜನೆಗೊಂಡ ಪೊಲೀಸ್ ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಬಗರ್‌ಹುಕುಂ ಸಮಿತಿ ಸದಸ್ಯನ ನೇತೃತ್ವದ ಗುಂಪಿನಿಂದ ದೌರ್ಜನ್ಯ

ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲು

ನಂಜನಗೂಡು, ಜ.21– ಬಗರ್ ಹುಕುಂ ಅಕ್ರಮ–ಸಕ್ರಮ ಸಮಿತಿ ಸದಸ್ಯನೊಬ್ಬ ತನ್ನ ಬೆಂಬಲಿಗರೊಂದಿಗೆ ಗ್ರಾಮದ ಮನೆಯೊಂದರ ಮೇಲೆ ಕಲ್ಲು ತೂರಾಟ ನಡೆಸಿ, ಆ ಕುಟುಂಬದವರ ಗಾಯಗೊಳಿಸಿ, ಬೆದರಿಕೆಯೊಡ್ಡಿರುವ ಘಟನೆ ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿಯ ಹೆಬ್ಯಾ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಎಂ.ಎ.ರಾಜು, ಬೆಂಬಲಿಗರೊಂದಿಗೆ ಈ ದಾಂಧಲೆ ನಡೆಸಿ ಬೆದರಿಕೆಯೊಡ್ಡಿರುವ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸರಲ್ಲಿ ದೂರು ದಾಖಲಾಗಿದೆ. ಈತ ನಡೆಸಿರುವ ಕಲ್ಲು ತೂರಾಟ ಮತ್ತು ಕೂಗಾಡುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಹೆಬ್ಯಾ ಗ್ರಾಮದ ನಿವಾಸಿ ಅಮಿತಾಬ್ ಮತ್ತು ಅವರ ಪತ್ನಿ ಸುಷ್ಮಾ ಎಸ್.ಆರಾಧ್ಯ ದಾಳಿಗೊಳಗಾದವರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ದಂಪತಿ ಹೆಬ್ಯಾ ಗ್ರಾಮದಲ್ಲಿ ಕಳೆದ 10 ವರ್ಷಗಳ ಹಿಂದೆ 264X32 ಅಳತೆಯ ನಿವೇಶನವನ್ನು ಕಾನೂನು ಪ್ರಕಾರ ಖರೀದಿಸಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಈ ಮಧ್ಯೆ ಬೆಲೆ ಬಾಳುವ ನಿವೇಶನ ಮತ್ತು ಮನೆಯನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಡುವಂತೆ ಅದೇ ಗ್ರಾಮದ ನಿವಾಸಿ ಎಂ.ಎ.ರಾಜು, ಸುಷ್ಮಾ ಅವರನ್ನು ಪೀಡಿಸುತ್ತಿದ್ದ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಇದಕ್ಕೊಪ್ಪದ ಸುಷ್ಮಾ ಅವರ ಮೇಲೆ, ಬಕರ್‌ಹುಕುಂ ಅಕ್ರಮ–ಸಕ್ರಮ ಸಮಿತಿ ಸದಸ್ಯರೂ ಆದ ಎಂ.ಎ. ರಾಜು ಮತ್ತು ಬೆಂಬಲಿಗರು, ಭಾನುವಾರ ರಾತ್ರಿ ಮನೆ ಮೇಲೆ ಕಲ್ಲುಗಳನ್ನು ತೂರಿ, ದಂಪತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ರಾಜು ಸಹೋದರ ಯಶವಂತ್, ಮಂಚಯ್ಯನ ಕಡೆಯವರು ಸೇರಿದಂತೆ ಇತರರು ಅವಾಚ್ಯ ಶಬ್ದಗಳಿಂದ ನಿಂದಿಸಿ, ನನ್ನ ಬಟ್ಟೆ ಎಳೆದು ಹಲ್ಲೆ ಮಾಡಿದರು ಎಂದು ಪೊಲೀಸರಿಗೆ ನೀಡಿರುವ ಸುಷ್ಮಾ ಎಸ್.ಆರಾಧ್ಯ ತಿಳಿಸಿದ್ದಾರೆ.

ಅಂತೆಯೇ ಆಸ್ತಿಯನ್ನು ಬರೆದುಕೊಡದಿದ್ದರೆ ನಿನ್ನ ಗಂಡ ಮತ್ತು ಮಗನನ್ನು ಕೊಲ್ಲುವುದಾಗಿ ಬೆದರಿಕೆ ಒಡ್ಡಿದ್ದಾರೆ. ಆದ್ದರಿಂದ ನನಗೆ, ನನ್ನ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡುವಂತೆ ಅವರು ಪೊಲೀಸರ ಮೊರೆ ಹೋಗಿದ್ದಾರೆ.




ಹಲ್ಲೆಗೊಳಗಾದವರು.

ಪಕ್ಷದ ವಕ್ತಾರರಲ್ಲ

ವಿವೇಚನಾಧಿಕಾರವನ್ನೂ ಸಂವಿಧಾನವೇ ನೀಡಿದೆ. ಸರ್ಕಾರ ತಯಾರಿಸಿದ ಭಾಷಣದಲ್ಲಿ ಅಸಹ್ಯಕರ, ದ್ವೇಷಪೂರಿತ ಅಥವಾ ಸಂವಿಧಾನ ವಿರೋಧಿ ಅಂಶಗಳಿದ್ದರೆ, ಅವನ್ನು ಓದದೇ ಬಿಡುವುದು ರಾಜ್ಯಪಾಲರ ಸಂವಿಧಾನಾತ್ಮಕ ಹಕ್ಕು ಎಂದು ಅವರು ಹೇಳಿದರು. ಸರ್ಕಾರದ ಸುಳ್ಳಿನ ಕಂತೆಗೆ ರಾಜ್ಯಪಾಲರು ಧ್ವನಿಯಾಗಬೇಕು ಎಂಬ ಕಡ್ಡಾಯ ನಿಯಮವನ್ನು ಕಾಂಗ್ರೆಸ್ ತನ್ನದೇ ಸಂವಿಧಾನದಲ್ಲಿ ಬರೆದು ಕೊಂಡಿದ್ದರೆ ಬೇರೆ ಮಾತು. ಆದರೆ ಭಾರತದ ಸಂವಿಧಾನದಲ್ಲಿ ಅಂತಹ ಯಾವುದೇ ವಿಧಿಯಿಲ್ಲ ಎಂದು ಕಿಡಿಕಾರಿದರು.

ಒಕ್ಕೂಟ ವ್ಯವಸ್ಥೆ ದುರ್ಬಲಗೊಳಿಸುವ ಕಾಂಗ್ರೆಸ್ ರಾಜಕೀಯ: ರಾಜ್ಯಪಾಲರು ಕೇಂದ್ರ ಮತ್ತು ರಾಜ್ಯಗಳ ನಡುವಿನ ಮಹತ್ವದ ಸಂವಿಧಾನಾತ್ಮಕ ಸೇತುವೆ ಎಂದು ಹೇಳಿದ ಅಶೋಕ್, ಕಾಂಗ್ರೆಸ್ ಸರ್ಕಾರವು ಉದ್ದೇಶಪೂರ್ವಕವಾಗಿ ಆ ಸೇತುವೆಯನ್ನು ದುರ್ಬಲಗೊಳಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು. ನೀತಿ ಆಯೋಗದ ಸಭೆಗಳಿಗೆ ಗೈರು, ಜಿಎಸ್‌ಟಿ ಕೌನ್ಸಿಲ್ ಸಭೆಗಳಿಂದ ದೂರ ಉಳಿಯುವಿಕೆ, ಹಣಕಾಸು ಆಯೋಗದ ಮುಂದೆ ರಾಜ್ಯದ ಹಿತಾಸಕ್ತಿಯನ್ನು ಸಮರ್ಥವಾಗಿ ಮಂಡಿಸದಿರುವುದು, ಈ ಮೂಲಕ ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ತಾವೇ ತಡೆದು, ನಂತರ ಕೇಂದ್ರದ ಮೇಲೆ ಆರೋಪ ಮಾಡುವುದೇ ಕಾಂಗ್ರೆಸ್‌ನ ರಾಜಕೀಯ ತಂತ್ರ ಎಂದು ಹೇಳಿದರು.

ಐಪಿಎಸ್ V/s ಐಪಿಎಸ್

ಡಾ. ರಾವ್, ನಿಂದಿಸಿ, ಅವಮಾನಿಸಿದ್ದರು ಎನ್ನಲಾಗಿದ್ದು, ಅದರಿಂದ ಆ ಸಿಬ್ಬಂದಿಯೂ ಸಂದರ್ಭಕ್ಕಾಗಿ ಕಾಯುತ್ತಿದ್ದರು ಎಂದು ಹೇಳಲಾಗುತ್ತಿದೆ.

ರಹಸ್ಯ ರೆಕಾರ್ಡಿಂಗ್: ಐಜಿಪಿಯವರು ಮಹಿಳೆಯೊಂದಿಗೆ ಸರಸ–ಸಲ್ಲಾಪದಲ್ಲಿ ತೊಡಗಿ ರುವುದರನ್ನು ಸಮಯ ಸಾಧಿಸಿ, ರೆಕಾರ್ಡ್ ಮಾಡಲೆಂದು ಆ ಸಿಬ್ಬಂದಿ ರಹಸ್ಯವಾಗಿ ಕೊಠಡಿಯ ಆಯಾಕಟ್ಟಿನ ಸ್ಥಳದಲ್ಲಿ ಮೈಕ್ರೋ ಕ್ಯಾಮರಾ ವನ್ನು ಅಳವಡಿಸಿದ್ದರು ಎನ್ನಲಾಗಿದೆ. ಅದನ್ನು ಅರಿಯದ ಡಾ. ರಾವ್ ಎಂದಿನಂತೆ ಮಹಿಳೆಯೊಂದಿಗೆ ಸರಸದಲ್ಲಿದ್ದಾಗ ಆ ದೃಶ್ಯಗಳು ಸೆರೆಯಾಗಿದ್ದವು. ಎಷ್ಟೋ ತಿಂಗಳುಗಳ ನಂತರ ಡಾ. ರಾವ್ ಅವರ ಈ ದೃಶ್ಯಾವಳಿ ವಿಷಯ ತಿಳಿದ ಸಮಯ ಕಾಯುತ್ತಿದ್ದ ಹಿರಿಯ ಐಪಿಎಸ್ ಅಧಿಕಾರಿ ಅದನ್ನು ಬಳಸಿಕೊಂಡು ಡಾ. ರಾವ್ ಅವರನ್ನು ಬಗ್ಗುಬಡಿಯಲೆಂದು ಈ ಎಲ್ಲಾ ದೃಶ್ಯಗಳನ್ನು ಸೆರೆ ಹಿಡಿದಿದ್ದ ಸಿಬ್ಬಂದಿಯನ್ನು ಪುಸಲಾಯಿಸಿ ಆ ಎಲ್ಲಾ ರೆಕಾರ್ಡಿಂಗ್ ಪಡೆದು ಬೇರೆಯವರ ಮೂಲಕ ವೈರಲ್ ಮಾಡಿಸಿದ್ದಾರೆಂದೂ ವಿಶ್ವಾಸಾರ್ಹ ಮೂಲಗಳು ತಿಳಿಸಿವೆ. ಇದೀಗ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿರುವ ಡಾ. ರಾವ್ ಮತ್ತು ಹಣಕಾಸು ದುರುಪಯೋಗ ಆರೋಪ ಎದುರಿಸುತ್ತಿರುವ ಮತ್ತೊರ್ವ ಐಪಿಎಸ್ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಆರ್‌ಎಫ್‌ಓ ಚವಾಣ್ ಸಾವಿನ ತನಿಖೆ

ಮೈಸೂರು, ಜ.21(ಆರ್‌ಕೆ)– ಮೈಸೂರಿನ ಲಷ್ಕರ್ ಮೊಹಲ್ಲಾದ ಲಾಡ್ಜ್‌ವೊಂದರ ಗಲ್ಲಿಯ ರಸ್ತೆಯಲ್ಲಿ ಮೃತ ದೇಹ ಪತ್ತೆಯಾದ ಟಿ.ನರಸೀಪುರ ಸಾಮಾಜಿಕ ಅರಣ್ಯಾಧಿ ಕಾರಿ ಕಾಂತರಾಜು ಎಸ್. ಚವಾಣ್ ಅವರ ಸಾವಿನ ಕುರಿತಂತೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರಿನ ಜೆಪಿನಗರ ಮುಖ್ಯರಸ್ತೆಯ ಮಹದೇವಪುರ ಬಡಾವಣೆ ನಿವಾಸಿಯಾದ ಚವಾಣ್ ಅವರ ಸ್ನೇಹಿತ ಎಂ. ಮನು ಅವರು ಜನವರಿ 19 ರಂದು ನೀಡಿದ್ದ ಲಿಖಿತ ದೂರಿ ನನ್ವಯ ಯುಡಿಆರ್ ಸಂಖ್ಯೆ 01/2026 ರ ಬಿಎನ್‌ಎಸ್‌ಎಸ್ ಕಲಂ 194(3) ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿದ್ದು, ಚವಾಣ್ ಅವರ ಸಾವಿಗೆ ಕಾರಣ ಏನೆಂಬುದನ್ನು ತಿಳಿಯಲು ಎಫ್‌ಎಸ್‌ಎಲ್ ವರದಿಗಾಗಿ ಕಾಯುತ್ತಿದ್ದಾರೆ. ಜನವರಿ 19 ರಂದು ರಾತ್ರಿ 11.36 ಗಂಟೆಯ ವೇಳೆಗೆ ಕಾಂತರಾಜು ಅವರಿಗೆ ನಾನು ಕರೆ ಮಾಡಿದಾಗ ಅವರ ಜೊತೆ ರಾಜಧಾನಿ ಲಾಡ್ಜ್‌ನಲ್ಲಿದ್ದ ಅವರ ಸ್ನೇಹಿತ ಮಲ್ಲನಗೌಡ ಪಾಟೀಲ್ ಎಂಬುವವರು ಪೋನ್ ಸ್ವೀಕರಿಸಿ, ನೀವು ಲಾಡ್ಜ್ ಬಳಿ ಬನ್ನಿ, ವಿಚಾರ ತಿಳಿಸುತ್ತೇನೆಂದರು ಎಂದು ಮನು ದೂರಿನಲ್ಲಿ ತಿಳಿಸಿದ್ದಾರೆ. ತಕ್ಷಣ ನಾನು ಲಾಡ್ಜ್ ಬಳಿ ಬಂದು ನೋಡಿದಾಗ ಲಾಡ್ಜ್ ಹಿಂಭಾಗದ ಗಲ್ಲಿಯ ರಸ್ತೆಯಲ್ಲಿ ಕಾಂತರಾಜು ಚವಾಣ್ ಅವರು ಮೃತಪಟ್ಟಿದ್ದರು. ಮೂಗಿನಲ್ಲಿ ರಕ್ತ ಬಂದಿತ್ತು. ವಿಚಾರ ಮಾಡಿದಾಗ ಅಲ್ಲಿದ್ದವರು ರಾತ್ರಿ ಸಮಯದಲ್ಲಿ ಕಾಲು ಜಾರಿ ಬಿದ್ದು ಮೃತಪಟ್ಟಿರಬಹುದೆಂದು ತಿಳಿಸಿದರು. ಆದರೆ ಲಾಡ್ಜ್ ಹಿಂಭಾಗದಲ್ಲಿ ಸಾರ್ವಜನಿಕರು ಹೋಗಲು ಸ್ಥಳಾವಕಾಶವಿಲ್ಲದಿರುವುದು ನನಗೆ ಅನುಮಾನ ಬಂದಿದೆ ಎಂದು ಮನು ದೂರಿನಲ್ಲಿ ತಿಳಿಸಿದ್ದಾರೆ. ಅವರ ದೂರಿನನ್ವಯ ಯುಡಿಆರ್ ರೀತ್ಯಾ ಪ್ರಕರಣ ದಾಖಲಿಸಿಕೊಂಡು ಚವಾಣ್ ಅವರ ಸಾವಿನ ಕಾರಣ ತಿಳಿಯಲೆಂದು ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ.

ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಜ.21– ಕರ್ನಾಟಕ ರಾಜ್ಯ ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಸಕ್ತರು ಜ.28 ರೊಳಗಾಗಿ ದೂ. 0821–2515944/9964760090 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಹಿಂದುಳಿದ ಮಕ್ಕಳಿಗೆ 3 ವರ್ಷಗಳಿಂದ ಸಿಗದ ವಿದ್ಯಾರ್ಥಿವೇತನ

● ಸಿಎಂ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿ ● ಅಹಿಂದ ಹೆಸರಲ್ಲಿ ಕುರ್ಚಿ ಉಳಿಸಿಕೊಳ್ಳಲು ಹೊರಟ ಸಿಎಂ ಮಕ್ಕಳಿಗೆ ಅನ್ಯಾಯ ಮಾಡಿದ್ದಾರೆ ● ಆರ್ಥಿಕ ಇಲಾಖೆ ಯಾರ ಕೈಯಲ್ಲಿದೆ ಎಂದು ಆಕ್ರೋಶ ● ಶಾಸಕಿ ಕರೆಮ್ಮ ನಾಯಕ ಅವರಿಗೆ ಬೆದರಿಕೆ; ಇದೇನಾ ಸರ್ಕಾರದ ನಡವಳಿಕೆ ಎಂದು ಟೀಕೆ ● ಹಾಸನ ಸಮಾವೇಶದ ಸಿದ್ಧತೆ ಪರಿಶೀಲಿಸಿದ ಕೇಂದ್ರ ಸಚಿವರು



ಹಾಸನದಲ್ಲಿ ನಡೆಯಲಿರುವ ಜೆಡಿಎಸ್ ಸಮಾವೇಶದ ಸಿದ್ಧತೆಗಳನ್ನು ಪರಿಶೀಲಿಸಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಹಾಸನ, ಜ.21– ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಸಮುದಾಯಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದ್ಯಾವ ಸೀಮೆ ಅಹಿಂದ ನಾಯಕರು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಹಾಸನದಲ್ಲಿ ನಡೆಯಲಿರುವ ಜೆಡಿಎಸ್ ಸಮಾವೇಶದ ಸಿದ್ಧತೆಗಳನ್ನು ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚುತ್ತಿರುವ ಆಂತರಿಕ ಕಚ್ಚಾಟದಿಂದ ರಾಜ್ಯದ ಅಭಿವೃದ್ಧಿ ಸೊರಗುತ್ತಿದೆ. ಕುರ್ಚಿ ಉಳಿಸಿಕೊಳ್ಳಲು ಸಿಎಂ ಸಿದ್ದರಾಮಯ್ಯ ನಾನಾ ಕಸರತ್ತುಗಳನ್ನು ನಡೆಸುತ್ತಿದ್ದಾರೆ. ಸಿಎಂ ಕುರ್ಚಿ ಬಗ್ಗೆ ಮಾತನಾಡಲು ನನಗೆ ಇಷ್ಟ ಇಲ್ಲ. ಆದರೆ, ಇಡೀ ದೇಶದಲ್ಲಿ ಇಂತಹ ಕೆಟ್ಟ ಸರ್ಕಾರ ಇನ್ನೊಂದಿಲ್ಲ ಎಂದು ಕುಟುವಾಗಿ ಟೀಕಿಸಿದರು.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕುರ್ಚಿ ಕಲಹದ ಹಿನ್ನೆಲೆಯಲ್ಲಿ 5 ಕಡೆ ಅಹಿಂದ ಸಮಾವೇಶ ನಡೆಸಲು ಹೊರಟಿದ್ದಾರೆ ಸಿಎಂ ಬೆಂಬಲಿಗರು. ಮುಖ್ಯಮಂತ್ರಿ ಮತ್ತು ಅಹಿಂದ ಸಂಘಟನೆಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ. 2023, 2024, 2025 ಈ ಮೂರು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ 1,64,000 ಹಿಂದುಳಿದ ಮತ್ತು ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಿಕ್ಕಿಲ್ಲ. ಯಾಕೆ ಕೊಡಲಾಗಿಲ್ಲ ಎಂದು ಪ್ರಶ್ನಿಸಿದರು.

ಅಹಿಂದ ಹೆಸರಿನಲ್ಲಿ ಸಿಎಂ ಕುರ್ಚಿ ಗಟ್ಟಿಗೊಳಿಸಿಕೊಳ್ಳಲು ಆ ಸಮುದಾಯಗಳನ್ನು ಉಪಯೋಗಿಸಿಕೊಂಡು ಬಂದಿದ್ದೀರಿ. ಕಳೆದ 3 ವರ್ಷದಿಂದ ಆ ಸಮುದಾಯದ ಮಕ್ಕಳಿಗೆ ಹಣ ಬಿಡುಗಡೆ ಮಾಡದೆ ವಂಚನೆ ಮಾಡಿದ್ದೀರಿ. ಆರ್ಥಿಕ ಇಲಾಖೆ ಲೋಪದೋಷದಿಂದ ಹಣ ಕೊಟ್ಟಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ. ಆರ್ಥಿಕ ಇಲಾಖೆ ಯಾರ ಕೈಯಲ್ಲಿದೆ? ಈ ಸರ್ಕಾರ ಅಹಿಂದ ವರ್ಗದವರಿಗೆ ದ್ರೋಹ ಮಾಡುತ್ತಿದೆ ಎಂದು ಸಚಿವ ಕುಮಾರಸ್ವಾಮಿ ಟೀಕಾಪ್ರಹಾರ ನಡೆಸಿದರು.

ಸಮಾವೇಶದ ಸಿದ್ಧತೆ ಪರಿಶೀಲಿಸಿದ ಸಚಿವರು: ಈ ತಿಂಗಳ ಜ.24ರಂದು ನಡೆಯಲಿರುವ ಜೆಡಿಎಸ್ ಸಮಾವೇಶದ ಸಿದ್ಧತೆಗಳನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಪರಿಶೀಲಿಸಿದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರೊಂದಿಗೆ ಸಮಾವೇಶ ನಡೆಯುವ ಸ್ಥಳಕ್ಕೆ ಆಗಮಿಸಿದ ಸಚಿವರು, ಅಲ್ಲಿ ನಡೆದಿರುವ ಸಿದ್ಧತೆಗಳನ್ನು ಪರಿಶೀಲಿಸಿ ಮಾತನಾಡಿದ ಅವರು ಹಾಸನ ಜಿಲ್ಲೆ ಜನತಾದಳಕ್ಕೆ ಶಕ್ತಿ ತುಂಬಿರುವ ತಂದೆ ತಾಯಂದಿರ ನೆಲ. ಈ ಜಿಲ್ಲೆ ನಮ್ಮ ಪಕ್ಷಕ್ಕೆ ಕರ್ಮಭೂಮಿ. ನಮಗೆ ಶಕ್ತಿ ಕೊಟ್ಟಿರುವ ಜಿಲ್ಲೆ ಇದು. ಈ ಜಿಲ್ಲೆಯ ಮೂಲಕ ಪಕ್ಷ ಸಂಘಟನೆಗೆ ಹೊಸದಾಗಿ ಚಾಲನೆ ನೀಡುತ್ತಿದ್ದೇವೆ. 2028ರ ವಿಧಾನಸಭೆ ಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಈ ಪವಿತ್ರವಾದ ಪುಣ್ಯ ಭೂಮಿಯಿಂದ ಸಂಘಟನೆ ಮಾಡುತ್ತಿದ್ದೇವೆ. ವಿಶೇಷವಾಗಿ ಜನತಾದಳದ ಕುಟುಂಬದ ಸಂಘಟನೆಗೆ ಚಾಲನೆ ಕೊಟ್ಟು ಸಂದೇಶ ಕೊಡುವ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು.

ಜಿಬಿಎ ಚುನಾವಣೆಯಲ್ಲಿ ಇವಿಎಂ ಬದಲಾಗಿ ಬ್ಯಾಲೆಟ್ ಪೇಪರ್ ಬಳಕೆ ವಿಚಾರದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಸಚಿವರು ನಮ್ಮ ಪಕ್ಷ ಇದುವರೆಗೂ ಇವಿಎಂ ಬಗ್ಗೆ ಚರ್ಚೆ ಮಾಡಿಲ್ಲ. ಬ್ಯಾಲೆಟ್ ಪೇಪರ್ ಬಗ್ಗೆನೂ ಚರ್ಚೆ ಮಾಡಿಲ್ಲ. ಚರ್ಚೆ ಮಾಡುತ್ತಿರುವವರು ಯೋಚನೆ ಮಾಡಬೇಕು. ಕಾಂಗ್ರೆಸ್‌ನವರು ಇವಿಎಂ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ನಾನು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ. ನೀವು 135 ಸ್ಥಾನ ಗೆದ್ದರಲ್ಲಾ ಇವಿಎಂ ಮೂಲಕ ಗೆದ್ದರಾ ಅಥವಾ ಬ್ಯಾಲೆಟ್ ಪೇಪರ್ ಬಳಸಿ ಗೆದ್ದರಾ? ಜನತೆಗೆ ಹೇಳಿ ಎಂದರು.

ಸಹಕಾರಿ ಸಂಸ್ಥೆಗಳ ಚುನಾವಣೆ ನಡೆದಿದೆ. ಈಗಿನ ಕಾಂಗ್ರೆಸ್ ಸರ್ಕಾರ ಆ ಚುನಾವಣೆಗಳಲ್ಲಿ ಬೆಳಗ್ಗೆ ಮತದಾನ ಮಾಡಲು ಹೋಗುವವರ ಪವರ್ ಅನ್ನು ಹಿಂದಿನ ದಿನ ಮಧ್ಯರಾತ್ರಿ ಕಿತ್ತು ಹಾಕಿದೆ. ಉದಾಹರಣೆಗೆ ನಮ್ಮ ಪಕ್ಷದ ಶಾಸಕ ಬೋಜೇಗೌಡರೇ ಇದ್ದಾರೆ. ಇಂತಹ ಕೀಳುಮಟ್ಟದಲ್ಲಿ ಕಾನೂನು ಬಾಹಿರ ಕೆಲಸ ಮಾಡಿ ಕೋ–ಆಪರೇಟಿವ್ ಸೊಸೈಟಿ ಗೆದ್ದಿದ್ದೇವೆ ಎನ್ನುತ್ತಾರೆ. ಜಿಲ್ಲೆಯಲ್ಲಿ ರೇವಣ್ಣ ಬಿಗಿಯಾಗಿ ಇರುವುದರಿಂದ ಎಲ್ಲಾ ಉಳಿದುಕೊಂಡಿದೆ. ಬೇರೆ ಕಡೆ ಯಾವ ರೀತಿ ಚುನಾವಣೆ ನಡೆಸಿದ್ದಾರೆ ನೋಡಿದ್ದೇನೆ ಎಂದು ಅವರು ಹರಿಹಾಯ್ದರು.

ಈ ವೇಳೆ ಶಾಸಕ ಹೆಚ್.ಡಿ.ರೇವಣ್ಣ, ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನ ಪರಿಷತ್ ಶಾಸಕಾಂಗ ಪಕ್ಷದ ನಾಯಕ ಎಸ್.ಎಲ್.ಭೋಜೇಗೌಡ, ಮಾಜಿ ಮಂತ್ರಿ ಹೆಚ್.ಕೆ. ಕುಮಾರಸ್ವಾಮಿ, ಶಾಸಕ ಸ್ವರೂಪ್ ಪ್ರಕಾಶ್, ಮಾಜಿ ಶಾಸಕ ಲಿಂಗೇಶ್ ಅವರು ಸೇರಿದಂತೆ ಪಕ್ಷದ ಹಲವು ಮುಖಂಡರು ಉಪಸ್ಥಿತರಿದ್ದರು.

ಶಾಸಕಿಗೆ ಬೆದರಿಕೆ; ಸರ್ಕಾರಕ್ಕೆ ತರಾಟೆ

ಹಾಸನ: ದೇವದುರ್ಗ ಕ್ಷೇತ್ರದ ಜೆಡಿಎಸ್ ಶಾಸಕಿ ಕರೆಮ್ಮ ನಾಯಕ ಅವರಿಗೆ ಬೆದರಿಕೆ ಹಾಕಿರುವ ಪ್ರಕರಣದ ಕುರಿತು ಖಾರವಾಗಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಇದು ಈ ಸರ್ಕಾರದ ಕೆಟ್ಟ ನಡವಳಿಕೆಗೆ ನಿದರ್ಶನವಾಗಿದೆ ಎಂದು ಟೀಕಿಸಿದರು.

ಸರ್ಕಾರ ಯಾವ ಮಟ್ಟದಲ್ಲಿ ನಡೆಯುತ್ತಿದೆ ಎನ್ನುವುದನ್ನು ಈ ಪ್ರಕರಣವೇ ಹೇಳುತ್ತದೆ. ಕರೆಮ್ಮ ಅವರ ಮೇಲೆ ಅಷ್ಟೇ ಅಲ್ಲ. ಪ್ರತಿನಿತ್ಯ ಒಂದಲ್ಲ ಒಂದು ಬೆದರಿಕೆ, ಧಮ್ಕಿ ಪ್ರಕರಣಗಳು ನಡೆಯುತ್ತಿವೆ. ಶಿಡ್ಲಘಟ್ಟ ಪೌರಾಯುಕ್ತೆ ಅಮೃತಾ ಗೌಡ ಅವರಿಗೆ ಧಮ್ಕಿ ಹಾಕಿದ ರಾಜೀವ್‌ಗೌಡ ಬಂಧನ ಆಗಿಲ್ಲ. ಇನ್ನೂ ಬಂಧಿಸುವುದರಲ್ಲೇ ಇದ್ದಾರೆ. ಗೃಹ ಸಚಿವರು ನಿನ್ನೆಯೂ ಹೇಳಿದ್ದಾರೆ. ಬಂಧಿಸಲು ಎಲ್ಲಾ ರೀತಿಯ ಪ್ರಯತ್ನ ಪಡುತ್ತಿದ್ದಾರೆ ಎಂದು. ಜಾಮೀನು ಅರ್ಜಿ ಬಗ್ಗೆ ಕೋರ್ಟ್ ಆದೇಶ ಏನು ಬರುತ್ತದೆ ಎಂದು ನೋಡಿಕೊಂಡು ಬಂಧಿಸಬೇಕೋ ಅಥವಾ ಬೇಡವೋ ಎಂಬುದು ನಿರ್ಧಾರವಾಗುತ್ತದೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತಲೈವಾರ್ ತಂಬಿ ತಲೈಮೈಯಿಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಓಂ ಶಕ್ತಿ ಯಾತ್ರೆಗೆ ತೆರಳಿದವರಿಗೆ ಶುಭ ಕೋರಿ ಬೀಳ್ಕೊಟ್ಟ ಶಾಸಕ ಕೆ.ಹರೀಶ್‌ಗೌಡ



ಓಂ ಶಕ್ತಿ ಯಾತ್ರೆಗೆ ಪ್ರಯಾಣ ಬೆಳೆಸಿದ ನೂರಾರು ಯಾತ್ರಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಹಾರೈಸಿ, ಬೀಳ್ಕೊಟ್ಟರು.

ಮೈಸೂರು, ಜ.21(ಎಂಕೆ)– ಮೈಸೂರಿನ ಚಾಮರಾಜ ಕ್ಷೇತ್ರ ವ್ಯಾಪ್ತಿಯ ತಿಲಕ್ ನಗರ, ಬೃಂದಾವನ ಬಡಾವಣೆ ಯಿಂದ ಓಂ ಶಕ್ತಿ ಯಾತ್ರೆಗೆ ಪ್ರಯಾಣ ಬೆಳೆಸಿದ ನೂರಾರು ಯಾತ್ರಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಹಾರೈಸಿ, ಕಳುಹಿಸಿಕೊಟ್ಟರು. ತಿಲಕ್‌ನಗರದಿಂದ 2 ಬಸ್‌ನಲ್ಲಿ ಮತ್ತು ಬೃಂದಾವನ ಬಡಾವಣೆಯಿಂದ 1 ಬಸ್ ಹಾಗೂ ರೈಲಿನಲ್ಲಿ ಪ್ರಯಾಣ ಕೈಕೊಂಡ 50ಕ್ಕೂ ಹೆಚ್ಚು ಮಂದಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಿ, ಯಾತ್ರೆ ಮುಗಿಸಿ ಕ್ಷೇಮವಾಗಿ ವಾಪಸ್ ಬರುವಂತೆ ಶುಭ ಕೋರಿದರು. ಮಾಜಿ ಮೇಯರ್ ಅನಂತ್, ನಗರಪಾಲಿಕೆ ಮಾಜಿ ಸದಸ್ಯ ನಂದಕುಮಾರ್, ನಾಗಭೂಷಣ್, ಬಾಲರಾಜ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಮುಖಂಡರಾದ ಯೋಗೇಶ್, ರಾಜ ಗಣೇಶ್, ಶಂಕರ್, ಕೃಷ್ಣ, ಕುಮಾರ್, ಮಂಜುನಾಥ್, ಪ್ರಕಾಶ್ ಮತ್ತಿತರರಿದ್ದರು.

ಡಾ. ಶಿವಕುಮಾರ ಸ್ವಾಮೀಜಿಯವರ ಸ್ಮರಣೆ



ಮೈಸೂರು: ಮೈಸೂರು ವಿಶ್ವ ಮಾನವ ಜೋಡಿ ರಸ್ತೆಯಲ್ಲಿರುವ ಡಾ.ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿ ಡಾ. ಶಿವಕುಮಾರ ಸ್ವಾಮೀಜಿ ಭಕ್ತ ವೃಂದದಿಂದ ಈ ಶತಮಾನ ಕಂಡ ಕಾಯಕಯೋಗಿ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಯವರ ಭಕ್ತಿ ಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಡಾ. ಶಿವಕುಮಾರ ಸ್ವಾಮೀಜಿ ಭಕ್ತವೃಂದದ ದೀಪು ಕೆ.ಆರ್., ರಜನೀಶ್, ತ್ರಿಶೂಲ್, ಮಾಜಿ ನಗರಪಾಲಿಕೆ ಸದಸ್ಯ ಜಗದೀಶ್, ಗಿರೀಶ್, ರಾಜು, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಎಸ್.ಎನ್. ರಾಜೇಶ್, ದೂರ ರಾಜಣ್ಣ, ಸತ್ಯನಂದ ವಿಟ್ಟು, ರಾಕೇಶ್, ಬಸವರಾಜ್, ಅಭಿಲಾಶ್ ಹಾಗೂ ಇನ್ನಿತರರು ಹಾಜರಿದ್ದರು.

ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿಂದ ಪ್ರವೇಶಾತಿ ಅಭಿಯಾನ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರವೇಶಾತಿ ಅಭಿಯಾನವನ್ನು ಕಾಲೇಜಿನ ಬೋಧಕ ವರ್ಗ ವಿವಿಧ ಪದವಿ ಪೂರ್ವ ಕಾಲೇಜುಗಳಿಗೆ ತೆರಳಿ ಪ್ರವೇಶಾತಿ ಬಗ್ಗೆ ಮಾಹಿತಿ ನೀಡಿದರು.

ಮೈಸೂರು, ಜ.21(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿಗೆ (ಸ್ವಾಯತ್ತ) ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚಿನ ವಿದ್ಯಾರ್ಥಿನಿಯರನ್ನು ಸೆಳೆಯುವ ನಿಟ್ಟಿನಲ್ಲಿ ಬುಧವಾರ ಪ್ರವೇಶಾತಿ ಅಭಿಯಾನ ಆರಂಭಿಸಲಾಯಿತು.

ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರು ಮೈಸೂರಿನ ವಿವಿಧ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜಿನಲ್ಲಿನ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ, ಪ್ರವೇಶಾತಿ ಪಡೆಯುವಂತೆ ಮಾಹಿತಿ ನೀಡಿದರು.

ಮಹಾರಾಣಿ ಪದವಿ ಪೂರ್ವ ಕಾಲೇಜು, ಚಾಮರಾಜ ಜೋಡಿ ರಸ್ತೆಯಲ್ಲಿರುವ ಪದವಿ ಪೂರ್ವ ಕಾಲೇಜು, ಡಿ.ದೇವರಾಜ ಅರಸು ಪದವಿ ಪೂರ್ವ ಕಾಲೇಜು ಮತ್ತು ಪೀಪಲ್ಸ್ ಪಾರ್ಕ್ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿದ ಪ್ರವೇಶಾತಿ ಸಮಿತಿ ಸದಸ್ಯರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ದೊರೆಯುವ ಸೌಲಭ್ಯಗಳು, ಲಭ್ಯವಿರುವ ಕೋರ್ಸುಗಳು ಹಾಗೂ ಸರ್ಕಾರದಿಂದ ದೊರೆಯುವ ವಿದ್ಯಾರ್ಥಿವೇತನ, ವಿದ್ಯಾರ್ಥಿ ನಿಲಯ ಹಾಗೂ ಇನ್ನಿತರ ಸೌಲಭ್ಯಗಳ ಕುರಿತು ವಿವರವಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಿದರು. ಬಿಎಸ್ಸಿಯಲ್ಲಿ 27 ಐಚ್ಛಿಕ ವಿಷಯಗಳಿದ್ದು, ಬಿಸಿಎ ಕಾಂಬಿನೇಷನ್‌ಗಳ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರವೇಶಾತಿ ಸಮಿತಿಯ ಅಧ್ಯಕ್ಷರಾದ ಕಾಲೇಜಿನ ಪ್ರಾಂಶುಪಾಲ ಡಾ.ಅಬ್ದುಲ್ ರಹಿಮಾನ್ ಎಂ, ಸಂಚಾಲಕ ಡಾ.ಕೆ.ಎಲ್.ರಮೇಶ, ವಿವಿಧ ವಿಭಾಗಗಳ ಮುಖ್ಯಸ್ಥರುಗಳಾದ ಡಾ.ಸುಧಾ ಎಂಸಿ, ಡಾ.ಲೀಲಾವತಿ ಎನ್.ಕೆ, ಡಾ.ಹೆಚ್.ಜೆ.ಭೀಮೇಶ್, ಗೋವಿಂದರಾಜು, ಡಾ.ರಾಮಚಂದ್ರ, ಡಾ.ಚೇತನ್ ಮಲಗಾವಿ, ಚೇತನ್ ಹಂಜಿ, ಡಾ.ವಾಸುದೇವ ಶೆಟ್ಟಿ, ರಶ್ಮಿ, ಡಾ.ಪ್ರೀತಿ ತಲ್ಲೂರ, ಡಾ.ಲತಾ, ಡಾ.ಅನಿಲ್‌ಕುಮಾರ್ ಆರ್.ಸಿ, ನಟರಾಜು, ರಮ್ಯಾ ಇತರರು ಇದ್ದರು.

ಸಿದ್ದರಾಮಯ್ಯ ಪೂರ್ಣಾವಧಿಗೆ ಸಿಎಂ ಆಗಿರ್ತಾರೆ!

● ಮಾಜಿ ಸಚಿವ ಕೆ.ಎನ್.ರಾಜಣ್ಣ ಪುತ್ರ, ಪರಿಷತ್ ಸದಸ್ಯ ರಾಜೇಂದ್ರ ಭವಿಷ್ಯ
● ಸಿಎಂ ಹೇಳಿದ್ದಾರೆ... ನಮ್ಮ ತಂದೆ ಮತ್ತೆ ಇನ್ನೆರಡು ತಿಂಗಳಲ್ಲಿ ಮಂತ್ರಿ ಆಗ್ತಾರೆ...!!



ರಾಜೇಂದ್ರ


ಮೈಸೂರು, ಜ.21(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ರಾಜೇಂದ್ರ ಭವಿಷ್ಯ ನುಡಿದಿದ್ದಾರೆ.

ಮೈಸೂರಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿಯಾಗಿ ಮುಂದುವರೆಯಬೇಕು ಎಂಬುದು ನಮ್ಮ ಅಭಿಲಾಷೆಯೂ ಆಗಿದೆ. ಐದು ವರ್ಷ ಸಿಎಂ ಆಗಿ ಇರುತ್ತಾರೆ. ಅವರು ಈಗಾಗಲೇ ಬಜೆಟ್ ಮಂಡನೆಗೆ ಸಿದ್ಧತೆ ಆರಂಭಿಸಿದ್ದಾರೆ. ಮುಖ್ಯಮಂತ್ರಿಗಳೂ ಹೈಕಮಾಂಡ್ ಮಾತಿಗೆ ಬದ್ಧ ಎಂದು ಹೇಳಿದ್ದಾರೆ. ನನ್ನ ಪ್ರಕಾರ ಸಿದ್ದರಾಮಯ್ಯ ಅವರು ಐದು ವರ್ಷ ಸಿಎಂ ಆಗಿರುತ್ತಾರೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿಎಂ ಆದರೆ ಯಾರದೂ ವಿರೋಧವಿಲ್ಲ. ಅದನ್ನು ಹೈಕಮಾಂಡ್ ತೀರ್ಮಾನಿಸಬೇಕು. ನಮ್ಮ ತಂದೆ (ಮಾಜಿ ಸಚಿವ ಕೆ.ಎನ್.ರಾಜಣ್ಣ) ಮತ್ತು ಡಿ.ಕೆ.ಶಿವಕುಮಾರ್ ನಡುವೆ ಜಗಳವೇನು ಇಲ್ಲ. ಅವರಿಬ್ಬರೂ ಹಳೇ ಸ್ನೇಹಿತರು. ರಾಜಕೀಯವಾಗಿ ನಿಲುವುಗಳು ಬೇರೆ ಬೇರೆ ಅಷ್ಟೇ. ಅವರಿಬ್ಬರೂ ಚೆನ್ನಾಗಿದ್ದಾರೆ. ನಮ್ಮ ತಂದೆ ಒಂದೆರಡು ತಿಂಗಳಲ್ಲಿ ಸಂಪುಟ ಸೇರುವುದು ನಿಶ್ಚಿತ ಎಂದು ಹೇಳಿದರು.

ಈ ಬಗ್ಗೆ ಒಂದೆರಡು ಬಾರಿ ಸಿಎಂ ಕೂಡ ನನ್ನ ಬಳಿ ಹೇಳಿಕೊಂಡಿದ್ದಾರೆ. ಸ್ವಪಕ್ಷೀಯರಿಂದಲೇ ಹಿಂದೆ ನಮಗೆ ಸಮಸ್ಯೆಯಾಗಿತ್ತು. ಹಿಂದೆ ನಮ್ಮ ತಂದೆ ಹೇಳಿದ ಮಾತು ಸತ್ಯ. ಕೆಲವರಿಗೆ ಸತ್ಯ ಕಹಿಯಾಗಿರುತ್ತದೆ. ಕಾಮಾಲೆ ಕಣ್ಣಿನವರಿಗೆ ಅದೇ ರೀತಿ ಕಾಣುತ್ತದೆ. ಅದರಲ್ಲಿ ಯಾವ ತಪ್ಪು ಇರಲಿಲ್ಲ. ಆದರೂ ನಮ್ಮ ತಂದೆಯವರನ್ನು ಗುರಿ ಮಾಡಿ ಸಚಿವ ಸ್ಥಾನದಿಂದ ಇಳಿಸಲಾಗಿದೆ. ಈಗ ನಾಯಕ ಜನಾಂಗದ ಸಚಿವರು ಇಲ್ಲ. ಹೀಗಾಗಿ ಸಚಿವ ಸ್ಥಾನ ಭರ್ತಿ ಆಗಬೇಕು ಎಂಬುದು ಸಮುದಾಯದ ಒತ್ತಾಯ ಕೂಡ ಎಂದು ಹೇಳಿದರು.

ನಮ್ಮ ತಂದೆಯ ಕೆಲಸದ ವೇಗವೇನು ಕಡಿಮೆಯಾಗಿಲ್ಲ. ಹಿಂದೆ ಸಚಿವರಾಗಿದ್ದರು, ಕೆಲಸ ಹೆಚ್ಚಿತ್ತು. ಈಗ ಕೇವಲ ಶಾಸಕರು, ಅದ್ದರಿಂದ ಹಾಗೆ ಅನ್ನಿಸುತ್ತಿದೆ. ಮೊನ್ನೆ ಸಿಎಂ ಮನೆಗೆ ಬಂದಾಗ ಈ ಬಗ್ಗೆ ಏನೂ ಚರ್ಚೆ ಮಾಡಿಲ್ಲ. ಮುಖ್ಯಮಂತ್ರಿಗಳ ಮೇಲೆ ನಮಗೆ ಪೂರ್ಣ ವಿಶ್ವಾಸ ಇದೆ. ನಮ್ಮ ತಂದೆ ಯಾವ ಹಗರಣದಲ್ಲೂ ಸಿಲುಕಿಲ್ಲ. ಸತ್ಯ ಹೇಳಿದ್ದಕ್ಕೆ ಅವತ್ತಿನ ಸಂದರ್ಭಕ್ಕೆ ಆ ರೀತಿ ಆಗಿದೆ ಎಂದರು.



ಮೈಸೂರು ತಾಲೂಕು ಜಯಪುರದ ಶ್ರೀ ಸಿದ್ದಪ್ಪಾಜಿ ರಸ್ತೆ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿದ ಆದಿಶಕ್ತಿ ದೇವಾಲಯ ಜನವರಿ 30ರಂದು ಉದ್ಘಾಟನೆಯಾಗಲಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ ಅವರಿಗೆ ಗ್ರಾಮಸ್ಥರು ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಜವರನಾಯಕ, ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಸದಸ್ಯರಾದ ಎಂ.ನಾಗರಾಜು, ಬಿ.ರೇಣುಕಾ, ಜಯಪುರ ದೊಡ್ಡಪ್ರಮಾಣದ ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕರಾದ ಅಬ್ದುಲ್ ಮುತಾಲೀಫ್, ಸಿದ್ದಪ್ಪಾಜಿ ರಸ್ತೆ ಬಡಾವಣೆ ಮುಖಂಡರಾದ ಚಿಕ್ಕಸಿದ್ದಯ್ಯ, ನಂಜುಂಡಸ್ವಾಮಿ, ಸಿ.ರಾಜಣ್ಣ, ಸಿ.ಸ್ವಾಮಿ, ಮುನಿಸ್ವಾಮಿ, ಶಿವಕುಮಾರ್, ಸಂತೋಷ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮಾರಾಟವಾಗದೇ ಉಳಿದ ಸಾವಿರಾರು ಲೀಟರ್ ಮದ್ಯ ನಾಶ



ಮೈಸೂರು, ಜ.21(ಎಂಟಿವೈ)– ಮೈಸೂರಿನ ಕೆಎಸ್‌ಬಿಸಿಎಲ್‌ಗೆ ಸೇರಿದ ಎರಡು ಡಿಪೋಗಳಲ್ಲಿ ಮಾರಾಟವಾಗದೇ ಅವಧಿ ಮುಗಿದಿದ್ದ ಸಾವಿರಾರು ಲೀಟರ್ ಮದ್ಯ ಮತ್ತು ಬಿಯರ್ ನಾಶಪಡಿಸಲಾಯಿತು. ಮೈಸೂರಿನ ಕೆಎಸ್‌ಬಿಸಿಎಲ್ ಮೈಸೂರು–1 ಹಾಗೂ ಕೂರ್ಗಳ್ಳಿಯಲ್ಲಿರುವ ಮೈಸೂರು–2 ಡಿಪೋದಲ್ಲಿ ಮಾರಾಟವಾಗದೇ ಉಳಿದಿದ್ದ, ಅವಧಿ ಮುಗಿದಿದ್ದ ಬಿಯರ್ ಹಾಗೂ ಮದ್ಯವನ್ನು ಸುರಕ್ಷಿತವಾಗಿ ನಾಶಪಡಿಸಲಾಯಿತು. ಎರಡೂ ಡಿಪೋಗಳಿಂದ 119.520 ಲೀಟರ್ ಮದ್ಯ ಹಾಗೂ 4791.090 ಲೀಟರ್ ಬಿಯರ್ ನಾಶಪಡಿಸಲಾಯಿತು. ಅಬಕಾರಿ ಉಪಅಧೀಕ್ಷಕ ಹೆಚ್.ಕೆ.ರಮೇಶ್, ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಅಯೋಧ್ಯೆಯಲ್ಲಿ ಶ್ರೀ ರಾಮನ ಪ್ರತಿಷ್ಠಾಪನೆ: 2ನೇ ವಾರ್ಷಿಕೋತ್ಸವ ಸಂಭ್ರಮ



ಮೈಸೂರು, ಜ. 21–ಅಪೂರ್ವ ಸ್ನೇಹ ಬಳಗದ ವತಿಯಿಂದ ಅಯೋಧ್ಯೆಯ ಶ್ರೀ ರಾಮ ಪ್ರತಿಷ್ಠಾಪನೆಯ ಎರಡನೇ ವಾರ್ಷಿಕೋತ್ಸವದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಚಾಮುಂಡಿಪುರಂನ ನಾಳೆ (ಜ.22) ಬೆಳಗ್ಗೆ 8.30ಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಪಾಲಿಕಾ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಪಾರ್ಥಸಾರಥಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಇನ್ನಿತರರು ಭಾಗವಹಿಸಲಿದ್ದಾರೆ.

ಶ್ರೀರಾಮ ಗೆಳೆಯರ ಬಳಗದಿಂದ ಸಿದ್ದಗಂಗಾ ಶ್ರೀಗಳ ಏಳನೇ ವರ್ಷದ ಪುಣ್ಯಸ್ಮರಣೆ



ಶ್ರೀ ಶಿವಕುಮಾರ ಸ್ವಾಮೀಜಿಯವರ 7ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಶ್ರೀಗಳ ಭಾವಚಿತ್ರಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಜ. 21– ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ 7ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಭಕ್ತಿಪೂರ್ವಕವಾಗಿ ಆಯೋಜಿಸಲಾಗಿತ್ತು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ, ಉದ್ಯಮಿ ಅಮರನಾಥ್ ರಾಜೇ ಅರಸ್, ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್ ಹಾಗೂ ಇತರ ಪದಾಧಿಕಾರಿಗಳು ಮತ್ತು ಮುಖಂಡರು ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್ ಮಾತನಾಡಿ, ನಡೆದಾಡುವ ದೇವರು, ಅಭಿನವ ಬಸವಣ್ಣ ಎಂದೇ ಖ್ಯಾತರಾಗಿದ್ದ ಸಿದ್ದಗಂಗಾ ಶ್ರೀಗಳ ಬದುಕು ನಮಗೆಲ್ಲರಿಗೂ ದಾರಿದೀಪ. ಅನ್ನ ದಾಸೋಹದ ಜೊತೆಗೆ ಶಿಕ್ಷಣ ದಾಸೋಹದ ಮೂಲಕ ಲಕ್ಷಾಂತರ ಬಡ ಮಕ್ಕಳ ಬಾಳಿಗೆ ಬೆಳಕಾದ ಅವರ ಸಾಮಾಜಿಕ ಕಳಕಳಿ ಸಮಾಜಕ್ಕೆ ಎಂದೆಂದಿಗೂ ಆದರ್ಶ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಉದ್ಯಮಿ ಅಮರನಾಥ್ ರಾಜೇ ಅರಸ್, ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಮುಖಂಡರಾದ ನಾಗರಾಜ್, ಜೋಗಿ ಮಂಜು, ಸೋಮಸುಂದರ್, ವಿದ್ಯಾ ಅರಸ್, ಜಗದೀಶ್ ಲಿಂಗಣ್ಣ, ಜೀವಧಾರ ಗಿರೀಶ್, ಬಸವಣ್ಣ ಕೆ.ಆರ್. ಬ್ಯಾಂಕ್ ಬಸಪ್ಪ, ಸೌಭಾಗ್ಯ ಮೂರ್ತಿ, ಮಂಜುಳಾ, ವಿಜಯಾ, ಪ್ರಕಾಶ್, ಮೋಹನ್, ಬಸವರಾಜ್, ಪ್ರಭು, ಸುರೇಶ್, ಮಹೇಶ್ ಅರಸ್, ಮರಿಸ್ವಾಮಿ, ಲಲಿತಾಂಬ, ದೇವೇಂದ್ರ ಸ್ವಾಮಿ, ರಾಜೇಂದ್ರ, ಶಿವಕುಮಾರ್, ಗುರುಬಸಪ್ಪ, ಪಾರ್ವತಿ, ಕಿರಣ್, ಲತಾ, ಶಿವಶಂಕರ್, ಗಾಯಿತ್ರಿ, ಸಂತೋಷ್, ಕುಶಾಲ್, ಗಿರೀಶ್, ಅನೂಪ್, ದೀಪಕ್, ರಿಂಕು, ಮಧುರಾ, ಶೇಖರ್, ಶಿವಪ್ರಸಾದ್, ರಮೇಶ್, ರಾಜಣ್ಣ, ಯೋಗೇಶ್ ಯಾದವ್, ಮೈಸೂರು ಆನಂದ್ ಸೇರಿದಂತೆ ಅನೇಕ ಸ್ಥಳೀಯ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಶಿಕ್ಷಕರು ಕೌಶಲ, ಮೌಲ್ಯಯುತ ಶಿಕ್ಷಣ ಬೋಧಿಸಬೇಕು

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಸಲಹೆ



ಮೈಸೂರು ವಿವಿ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ಮಾತನಾಡಿದರು.

ಮೈಸೂರು, ಜ.21(ಎಂಟಿವೈ)– ಶಿಕ್ಷಕರು ವಿದ್ಯಾರ್ಥಿಗಳಿಗೆ ಕೇವಲ ಪದವಿ ಪಡೆಯಲು ಬೇಕಾದ ಶಿಕ್ಷಣ ನೀಡುವುದಕ್ಕಿಂತ ಕೌಶಲ್ಯ ಹಾಗೂ ಮೌಲ್ಯಯುತ ಶಿಕ್ಷಣ ನೀಡಬೇಕಾಗಿದ್ದು, ಅದಕ್ಕಾಗಿ ಶಿಕ್ಷಕರು ಅಗತ್ಯ ತರಬೇತಿ ಪಡೆದುಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ಏರ್ಪಡಿಸಿದ್ದ ರೂಸಾ 2.0 ಪ್ರಾಯೋಜಿತ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ 'ಪರಿಣಾಮಕಾರಿ ಬೋಧನೆಗೆ ಅಗತ್ಯವಾದ ಕೌಶಲ್ಯಗಳು' ಕುರಿತ ಎರಡು ದಿನಗಳ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಹೊಸತನ್ನು ಹುಟ್ಟು ಹಾಕುವ ಶಕ್ತಿ ಶಿಕ್ಷಕರಲ್ಲಿದೆ. ಅದಕ್ಕೆ ಶಿಕ್ಷಕರಿಗೆ ಕೌಶಲ್ಯದ ಅಗತ್ಯವಿದೆ ಎಂದರು.

ಶಿಕ್ಷಕರಲ್ಲಿ ಹಿಂದೆಯಿದ್ದ ಸೃಜನಶೀಲತೆ ಮತ್ತು ಸಮರ್ಪಣಾಭಾವ ಇತ್ತೀಚಿನ ಶಿಕ್ಷಕರಲ್ಲಿ ಮರೆಯಾಗುತ್ತಿದೆ ಎನಿಸುತ್ತಿದೆ. ದಾರಿ ತಪ್ಪುತ್ತಿರುವ ವಿದ್ಯಾರ್ಥಿಗಳನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಸ್ಫೂರ್ತಿ ತುಂಬುವ ಕೆಲಸವಾಗುತ್ತಿಲ್ಲ. ಶಿಕ್ಷಕರ ಬದುಕು ಅದೊಂದು ವಿಶೇಷ ವ್ಯಕ್ತಿತ್ವ. ಸಮಾಜದ ಭವಿಷ್ಯವನ್ನು ಉಜ್ವಲವಾಗಿ ರೂಪಿಸಬಲ್ಲ, ಅಗಾಧ ಶಕ್ತಿ ಅವರಲ್ಲಿರುತ್ತದೆ. ಮಕ್ಕಳು ಪೋಷಕರ ಮಾತಿಗಿಂತ ಶಿಕ್ಷಕರ ಮಾತನ್ನು ಹೆಚ್ಚು ಅನುಸರಿಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವುದರಿಂದ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದ್ದಾರೆ. ಇಂದಿನ ಒತ್ತಡದ ಬದುಕಿನಲ್ಲೂ ಉಪನ್ಯಾಸಕರಿಗೆ ಹೊಸತನ್ನು ಕಲಿಯಲು ಅವಕಾಶವಿದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

> ಇಂದು ಸಾಮಾಜಿಕ ಮಾಧ್ಯಮಗಳು, ಕೃತಕ ಬುದ್ಧಿಮತ್ತೆ ಸೇರಿದಂತೆ ಇನ್ನಿತರ ಸಾಮಾಜಿಕ ಜಾಲತಾಣಗಳಲ್ಲಿ ಅಗತ್ಯ ಮಾಹಿತಿಗಳು ಲಭ್ಯವಿದೆ. ಅವುಗಳನ್ನು ಬಳಸಿಕೊಂಡು ಹೆಚ್ಚು ಕೌಶಲ್ಯಯುಕ್ತ ಕಲಿಕೆಗೆ ಆದ್ಯತೆ ನೀಡಬೇಕು. ಆಗ ಮಾತ್ರ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯ.
> –ಎಂ.ಕೆ.ಸವಿತಾ

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಪ್ರೊ.ವಿಶ್ವನಾಥ್, ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ.ಹೆಚ್.ಪಿ.ಜ್ಯೋತಿ, ಶಿಬಿರದ ಸಂಯೋಜಕ ಡಾ.ಎಲ್.ನಂಜುಂಡಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.


ಕಾಂಗ್ರೆಸ್ ಮುಖಂಡರಾದ
ಸನ್ಮಾನ್ಯ ಶ್ರೀ ಹೆಚ್. ಎಸ್. ಸುಜೀತ್‌ಕುಮಾರ್
(ಎಲ್.ಕೆ. ಅಣ್ಣ)ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಷಯಗಳು
ಶುಭಕೋರುವವರು:
ಅಫ್ರೋಜ್ ಪಾಷ
ಎ.ಜೆ. ಕನ್ವೆನ್ಷನ್ ಹಾಲ್ ಮತ್ತು
ಎ.ಎಸ್. ಫರ್ನೀಚರ್ ಡೆಕೋರೇಷನ್, ಲೈಟಿಂಗ್ಸ್
A.J CONVENTION HALL
9108220848